

ಕಲ್ಯಾಣ ಕಿರಣ

ಅಕ್ಟೋಬರ್ - 2001

ಬೆಲೆ: ರೂ. 5-00





ಬಸವ ತತ್ತ್ವ ಸಮಾವೇಶದ ನಂತರ ಬೈಲಹೊಂಗಲದ
ಮುಖ್ಯ ರಸ್ತೆಯಲ್ಲಿ ಶರಣ ಬಂಧುಗಳಿಂದ ಪಥ ಸಂಚಲನ

ಓಂ ಶ್ರೀ ಗುರುಬಸವಲಿಂಗಾಯ ನಮ:
86666

ಸಂಪುಟ 31 | ಬಸವ ಶಕೆ 868 | ಆಜೀವ ಸದಸ್ಯತ್ವ 500 ರೂ.
ಸಂಚಿಕೆ 10 | ಅಕ್ಟೋಬರ್ 2001 | ವಾರ್ಷಿಕ ಚಂದಾ 50/- ರೂ.

ಓಂ ಶ್ರೀ ಗುರುಬಸವಲಿಂಗಾಯ ನಮ:
ಓಂಕಾರ ಸ್ವರೂಪಿಯಾದ ಲಿಂಗದೇವನಿಗೂ, ಲಿಂಗದೇವನ ಪ್ರತಿನಿಧಿಯಾದ
ಗುರುಬಸವಣ್ಣನವರಿಗೂ ನಮನಗಳು.

8	6	6	6	6
ಅಷ್ಟಾವರಣ	ಷಡಾಚಾರ	ಷಟ್‌ಸ್ಥಲ	ಷಟ್‌ಸೂತ್ರ	ಷಟ್‌ಶೀಲ

★ ಬಸವ ಸ್ತೋತ್ರದ ವಚನಗಳು ★

ಬಸವಣ್ಣನೆಂಬ ಆಚಾರಲಿಂಗವ ಪಿಡಿದು ಅನಿಮಿಷಯ್ಯ ಬಸವಣ್ಣನಂತಾದ
ಬಸವಣ್ಣನೆಂಬ ಗುರುಲಿಂಗವ ಪಿಡಿದು ಮಡಿವಾಳಯ್ಯ ಬಸವಣ್ಣನಂತಾದ
ಬಸವಣ್ಣನೆಂಬ ಶಿವಲಿಂಗವ ಪಿಡಿದು ಚೆನ್ನಬಸವಯ್ಯ ಬಸವಣ್ಣನಂತಾದ
ಬಸವಣ್ಣನೆಂಬ ಜಂಗಮಲಿಂಗವ ಪಿಡಿದು ಸಿದ್ಧರಾಮಯ್ಯ ಬಸವಣ್ಣನಂತಾದ
ಬಸವಣ್ಣನೆಂಬ ಪ್ರಸಾದಲಿಂಗವ ಪಿಡಿದು ಘಟ್ಟಿವಾಳಯ್ಯ ಬಸವಣ್ಣನಂತಾದ
ಬಸವಣ್ಣನೆಂಬ ಮಹಾಲಿಂಗವ ಪಿಡಿದು ಅಜಗಣ್ಣ ಬಸವಣ್ಣನಂತಾದ
ಬಸವಣ್ಣನೆಂಬ ಗುಹೇಶ್ವರಲಿಂಗವ ಪಿಡಿದು ಪ್ರಭುದೇವ ಜ್ಯೋತಿರ್ಮಯನಾದ
ಅಸಂಖ್ಯಾತ ಮಹಾಗಣಂಗಳೆಲ್ಲರೂ ಬಸವಣ್ಣನೆಂಬ ನಿರವಯಲಿಂಗವ ಪಿಡಿದು
ಶರಣಸತಿ ಲಿಂಗಪತಿಯಾದರು.
ಗುಹೇಶ್ವರಲಿಂಗದಲ್ಲಿ ಪ್ರಭುವೆ ಸಾಕ್ಷಿಯಾಗಿ ಬಸವ ಪ್ರಿಯ ಕೂಡಲಸಂಗಮದೇವಾ,
ಬಸವಣ್ಣನ ಶ್ರೀಪಾದಕ್ಕೆ ನಮೋ ನಮ: ಎನುತಿರ್ದೆನು.

(ಸಂ.ವ.ಸಂ - 4, ಅಜ್ಞಾತ ವಚನಕಾರ : 1230)

ಬಸವಣ್ಣನ ಭಕ್ತಿಪ್ರಸಾದವ ಕೊಂಡೆನಯ್ಯಾ
ಚೆನ್ನಬಸವಣ್ಣನ ಜ್ಞಾನಪ್ರಸಾದವ ಕೊಂಡೆನಯ್ಯಾ
ಪ್ರಭುದೇವರ ಬಯಲಪ್ರಸಾದವ ಕೊಂಡೆನಯ್ಯಾ
ಮಡಿವಾಳಯ್ಯನ ಕರುಣಪ್ರಸಾದವ ಕೊಂಡೆನಯ್ಯಾ
ಸಿದ್ಧರಾಮನ ನಿರ್ಮಲಪ್ರಸಾದವ ಕೊಂಡೆನಯ್ಯಾ
ಮರುಳಶಂಕರದೇವರ ಪ್ರಸನ್ನ ಪ್ರಸಾದವ ಕೊಂಡೆನಯ್ಯಾ
ಏಳ್ನೂರೆಪ್ಪತ್ತಮರಗಣಂಗಳ ಪರಮಪ್ರಸಾದವ ಕೊಂಡು
ಬದುಕಿದೆನಯ್ಯಾ ಸಕಳೇಶ್ವರಾ.

(ಸಂ.ವ.ಸಂ. 4. -ಸಕಳೇಶ ಮಾದರಸ -456)

ಕಲ್ಯಾಣ ಕಿರಣ

ಸಂಪುಟ 31	ಬಸವ ಶಕೆ 868	ಆಜೀವ ಸದಸ್ಯತ್ವ 500 ರೂ.
ಸಂಚಿಕೆ 10	ಅಕ್ಟೋಬರ್ 2001	ವಾರ್ಷಿಕ ಚಂದಾ 50/- ರೂ.

ಲೇಖನಗಳು . ಕಿರಣಗನ್ನಡಿ



ವಿಜಯ ದಶಮಿಯಂದು 40 ವರ್ಷಗಳನ್ನು ಪೂರೈಸಿ 41ನೆಯ ವರ್ಷಕ್ಕೆ ಪಾದಾರ್ಪಣ ಮಾಡುತ್ತಿರುವ ಪೂಜ್ಯ ಶ್ರೀ ಸದ್ಗುರು ಅಲ್ಲಮ ಸ್ವಾಮಿಗಳಿಗೆ ಶುಭಾಶಯ ಕೋರುವ ಕಲ್ಯಾಣ ಕಿರಣದ ಸಿಬ್ಬಂದಿ ವರ್ಗ.

★ ವೆಬ್ ಸೈಟ್‌ನಲ್ಲಿ ಕಲ್ಯಾಣಕಿರಣ ★

ಕಲ್ಯಾಣ ಕಿರಣ ಮಾಸಪತ್ರಿಕೆಯನ್ನು ಜಗತ್ತಿನ ಯಾವುದೇ ಮೂಲೆಯಲ್ಲಿ ವೆಬ್‌ಸೈಟ್ ಮೂಲಕ ಕಂಪ್ಯೂಟರ್ ತೆರೆಯಮೇಲೆ ಓದಬಹುದು. ಸಂಪರ್ಕ ಸೂತ್ರ ಹೀಗಿದೆ :

www.Lingayathism.com

ವಿದೇಶಗಳಲ್ಲಿರುವ, ಭಾರತದ ವಿವಿಧ ಕಡೆ ಇರುವ ನಿಮ್ಮ ಪರಿಚಿತರು, ಬಂಧುಮಿತ್ರರಿಗೆ ತಿಳಿಸಿರಿ.

KALYAN KIRANA- Reg No. 19988/70. Monthly Magazine printed and published by B. Shambulingaiah, at Prabhudeva Printing Press, Basava Gangotri, Kumbalagodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ : 3325335/33227990

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010

ಅಕ್ಷರ ಜೋಡಣೆ ಮತ್ತು ಪುಟ ವಿನ್ಯಾಸ : ರಮೇಶ್ ಲಿಂಗಾಯತ

ಷಟ್‌ಕೋನ ಗಣ ಲಾಂಛನ - ಬಸವ ಲಿಂಗ ಮುದ್ರೆ ವಿವರಣೆ


ಸ್ವತಂತ್ರ ಧರ್ಮವಾದ ಲಿಂಗಾಯತ ಧರ್ಮಕ್ಕೆ ಧರ್ಮ ಲಾಂಛನವು ಇಷ್ಟಲಿಂಗ. ಇದಕ್ಕೆ ಒಂದು ಗಣಲಾಂಛನ(community symbol)ದ ಅಗತ್ಯವಿದ್ದು ಇದರ ಆವಿಷ್ಕಾರದ ಬಗ್ಗೆ ನಾನು ಬಹಳ ಕಾಲದಿಂದ ಚಿಂತಿಸುತ್ತಿದ್ದೆ. ಬಹಳ ದೀರ್ಘಕಾಲದ ಚಿಂತನೆಯ ನಂತರ ರೂಪುಗೊಂಡಿರುವ ಈ ಲಾಂಛನ ಅತ್ಯಂತ ಸೂಕ್ತವು, ಪರಿಪೂರ್ಣವು, ಅರ್ಥಗರ್ಭಿತವೂ ಲಿಂಗಾಯತ ಧರ್ಮದ ಸಿದ್ಧಾಂತ, ಆಚಾರ - ವಿಚಾರಗಳನ್ನು ಸರಿಯಾಗಿ ಬಿಂಬಿಸುವಂಥದು ಆಗಿದೆ ಎಂದು ನನಗೆ ಅನ್ನಿಸುತ್ತಿದೆ.

ಪಂಚಕೋನ - ಷಟ್ಕೋನ ಚಿತ್ರಗಳು

ಪ್ರತಿಯೊಂದು ಧರ್ಮವೂ ತನ್ನದೇ ಆದ ಕೆಲವು ಸಾಂಕೇತಿಕ ಚಿತ್ರಗಳನ್ನು, ಲಾಂಛನಗಳನ್ನು ಹೊಂದಿರುತ್ತದೆ. ಲಿಂಗಾಯತ ಧರ್ಮದಲ್ಲಿ ಕಾಣಬರುವ ಅಂಥ ಎರಡು ಚಿತ್ರಗಳೆಂದರೆ ೧. ಪಂಚಕೋನ ಪ್ರಣವ ಮತ್ತು ೨. ಷಟ್‌ಕೋನ ಬಸವಲಿಂಗ ಮುದ್ರೆ.

ಪಂಚಕೋನ ಪ್ರಣವವು ಸೃಷ್ಟಿಕರ್ತ ಪರಮಾತ್ಮ ಲಿಂಗದೇವನ ಸಂಕೇತ. ಇದರ ಅರ್ಥವೇನೆಂದರೆ ೧. ಓಂಕಾರ ಸ್ವರೂಪಿಯೂ, ಸಚ್ಚಿದಾನಂದ ನಿತ್ಯ ಪರಿಪೂರ್ಣನೂ ಆದ ಪರಮಾತ್ಮನೇ ಈ ಸೃಷ್ಟಿಯ ಕೇಂದ್ರಬಿಂದು.

೨. ಲಿಂಗಾಯತ ಧರ್ಮದಲ್ಲಿ ದೇವಸೂಚಕವಾದ ಪವಿತ್ರ ಮಂತ್ರವೆಂದರೆ ಓಂ ಲಿಂಗಾಯ ನಮಃ. ಮಧ್ಯದಲ್ಲಿ ಓಂ ಬಂದು ಐದು ಕೋನಗಳಲ್ಲಿ ಲಿಂಗಾಯ ನಮಃ ಎಂಬ ಐದಕ್ಷರಗಳು ಬರುವುದರಿಂದ ಪಂಚಕೋನ ಪ್ರಣವವು ಮಂತ್ರ ಸೂಚಕವು ಅಹುದು.



ಪಂಚಕೋನ ಪ್ರಣವ

೩. ಈ ಚಿತ್ರವು ಜೀವಾತ್ಮ ಸೂಚಕವೂ ಅಹುದು. ಮೇಲಿನ ಶೃಂಗ ಕೋನವು ಶಿರಸ್ಸನ್ನು, ಮೇಲಿನ ಎಡ-ಬಲಬದಿಯ ಕೋನಗಳು ಎರಡು ಭುಜಗಳನ್ನು, ಮಧ್ಯದ ಕೇಂದ್ರವು ಹೃದಯವನ್ನು, ಕೆಳಗಿನ ಎಡ ಮತ್ತು ಬಲ ಬದಿಯ ಕೋನಗಳು ತೊಡೆಗಳನ್ನು ಸಂಕೇತಿಸಿ, ಶಾಂಭವಿ ಮುದ್ರೆಯಲ್ಲಿ ಧ್ಯಾನಕ್ಕೆ ಕುಳಿತ ವ್ಯಕ್ತಿಯ ಸೂಚಕವಾಗಿದೆ.

ಲಿಂಗದೇವ ಸೂಚಕವಾದ ಪಂಚಕೋನ ಪ್ರಣವವನ್ನು ವಿಭೂತಿ ಶುದ್ಧಿ ಮಾಡಲು, ಇಷ್ಟಲಿಂಗಕ್ಕೆ ಮಜ್ಜನವನ್ನು ಎರೆದ ನಂತರ ಅದನ್ನು ಪೂಜೆಗೆ ಅಂಗೈಯಲ್ಲಿಟ್ಟುಕೊಳ್ಳುವ ಮೊದಲು ಅಂಗೈಯಲ್ಲಿ ಬರೆಯಲು ಉಪಯೋಗಿಸಬೇಕು. ಪಂಚಕೋನದ ಅರ್ಥವನ್ನು ಸಾರ ರೂಪದಲ್ಲಿ ಹೀಗೆ ಬರೆದಿದ್ದೇನೆ.


ಪಂಚ ಭೂತಾತ್ಮಕ ಬ್ರಹ್ಮಾಂಡಕಾಧಾರ
ಪಂಚಾಕ್ಷರಿ ಪ್ರಣವ ಪ್ರತ್ಯಕ್ಷರೂಪ
ಶಾಂಭವಿ ಮುದ್ರೆಯ ಪ್ರತಿರೂಪ ತಾನಾದ
ಶುಭ ಪಂಚಕೋನವ ಅಂಗೈಲಿ ಬರೆವೆ ॥

ಷಟ್ಕೋನ ಸಹಿತ ಬಸವ ಧ್ವಜ ಲಾಂಛನ

ಪ್ರತಿಯೊಂದು ಧರ್ಮವೂ ತನ್ನದೇ ಆದ ಗಣಲಾಂಛನ (Community Symbol)ವನ್ನು ಹೊಂದಿದೆ. ಹಿಂದುಗಳಿಗೆ ಓಂಕಾರ, ಬೌದ್ಧರಿಗೆ ಧರ್ಮಚಕ್ರ, ಕ್ರೈಸ್ತರಿಗೆ ಶಿಲುಬೆ, ಮುಸಲೀಮರಿಗೆ ಅರ್ಧಚಂದ್ರ-ನಕ್ಷತ್ರ, ಸಿಖ್ಖರಿಗೆ ಎರಡು ಕತ್ತಿ-ಢಾಲು ಗಣಲಾಂಛನಗಳಾಂತೆ ಲಿಂಗಾಯತ ಧರ್ಮಕ್ಕೆ ಷಟ್‌ಕೋನ ಸಹಿತ ಬಸವಲಿಂಗ ಮುದ್ರೆಯೇ ಗಣಲಾಂಛನ.


ಷಟ್‌ಕೋನ ಬಸವಲಿಂಗ ಮುದ್ರೆ

ಒಂದು ಪೂರ್ಣ ವೃತ್ತ. ಅದರಲ್ಲಿ ಎರಡು ತ್ರಿಕೋನಗಳು. ಮಧ್ಯೆ ಇಷ್ಟಲಿಂಗ ; ಅದರ ಮಧ್ಯೆ ಒಂದು ಬೆಳಕಿನ ಗೋಲ. ಆರು ಕೋನಗಳಲ್ಲಿ ಶ್ರೀಗುರುಬಸವ ಎಂಬ ಆರಕ್ಷರಗಳು. ಇದು ಲಿಂಗಾಯತ ಧರ್ಮವನ್ನು ಅತ್ಯಂತ ಸೂಕ್ತವಾಗಿ ಪ್ರತಿನಿಧಿಸುತ್ತದೆ.



೨. ಎರಡು ತ್ರಿಕೋನಗಳು ಬರುತ್ತವೆ. ಒಂದು ಊರ್ಧ್ವಮುಖವಾಗಿದ್ದರೆ ಇನ್ನೊಂದು ಅಧೋಮುಖವಾಗಿರುತ್ತದೆ. ಊರ್ಧ್ವಮುಖವಾದ ತುದಿಯುಳ್ಳ ತ್ರಿಕೋನವು ಆಚಾರ-ಅರಿವು-ಅನುಭಾವಗಳನ್ನು ಸಂಕೇತಿಸುತ್ತದೆ. ಅಧೋಮುಖಿಯಾದ ತುದಿಯಿರುವ ತ್ರಿಕೋನವು ಗುರು-ಲಿಂಗ-ಜಂಗಮ ತತ್ವಗಳನ್ನು ಸಂಕೇತಿಸುತ್ತದೆ.

ವ್ಯಕ್ತಿಯಲ್ಲಿ ಆಚಾರ ಅಳವಡಲು ಗುರು, ಅರಿವು ಅಳವಡಲು ಲಿಂಗ, ಅನುಭಾವ ಅಳವಡಲು



ಜಂಗಮ ಸಹಾಯಕ ಸಾಧನಗಳಾಗುತ್ತವೆ. ಆಚಾರ-ಅರಿವು-ಅನುಭಾವ ಅಳವಟ್ಟಂತೆಲ್ಲ ಗುರು-ಲಿಂಗ-ಜಂಗಮಗಳ ಅನುಗ್ರಹವು ಜ್ಞಾನಾತ್ಮಕವಾಗಿ ಪ್ರಾಪ್ತಿಯಾಗುತ್ತದೆ.

೧ ವೃತ್ತ: ಬ್ರಹ್ಮಾಂಡದ ಸಂಕೇತ.

೨. ಮಧ್ಯದ ಇಷ್ಟಲಿಂಗ : ಈ ಬ್ರಹ್ಮಾಂಡದ ಕೇಂದ್ರ ಶಕ್ತಿ ಸೃಷ್ಟಿಕರ್ತ ಪರಮಾತ್ಮ. ಅವನು ಪ್ರಕಾಶ ಸ್ವರೂಪನು. ಇಂಥ ನಿರಾಕಾರ ಲಿಂಗದೇವನನ್ನು ಇಷ್ಟಲಿಂಗ ರೂಪದಲ್ಲಿ ಚುಳುಕಾಗಿಸಿಕೊಂಡು ಪೂಜಿಸುವುದೇ ಲಿಂಗಾಯತ ಧರ್ಮದ ಪ್ರಮುಖ ಆಚರಣೆ.

೩. ಆರು ಕೋನಗಳು : ಷಟ್‌ತತ್ವಗಳ ಸಂಕೇತ.

೧. ಷಡ್‌ಭೂತಗಳು : ಪೃಥ್ವಿ - ಅಪ್ - ತೇಜ - ವಾಯು - ಆಕಾಶ - ಆತ್ಮ
೨. ಷಟ್‌ಸ್ಥಲಗಳು : ಭಕ್ತ - ಮಹೇಶ - ಪ್ರಸಾದಿ - ಪ್ರಾಣಲಿಂಗಿ- ಶರಣ- ಐಕ್ಯ.
೩. ದೇವಮಂತ್ರ : ಓಂ ಲಿಂ ಗಾ ಯ ನ ಮಃ
೪. ಗುರುಮಂತ್ರ : ಶ್ರೀ ಗು ರು ಬ ಸ ವಾ
೫. ಷಡ್ವಿಧ ಭಕ್ತಿ : ಶ್ರದ್ಧಾ, ನಿಷ್ಠಾ, ಅವಧಾನ, ಅನುಭವ, ಆನಂದ, ಸಮರಸ.
೬. ಷಟ್‌ಚಕ್ರಗಳು : ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ.
೭. ಷಟ್‌ಶಕ್ತಿಗಳು : ಕ್ರಿಯಾ, ಜ್ಞಾನ, ಇಚ್ಛಾ, ಆದಿ, ಪರಾ, ಚಿಚ್ಛಕ್ತಿ.
೮. ಷಟ್ಕಲೆಗಳು : ನಿವೃತ್ತಿ, ಪ್ರತಿಷ್ಠಾ, ವಿದ್ಯಾ , ಶಾಂತಿ, ಶಾಂತ್ಯತೀತ, ಶಾಂತ್ಯತೀತೋತ್ತರ
೯. ಷಡ್ಲಿಂಗಗಳು : ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಪ್ರಸಾದಲಿಂಗ, ಜಂಗಮಲಿಂಗ, ಮಹಾಲಿಂಗ.
೧೦. ಷಡ್‌ಸಾಮಾಜಿಕ-ಧ್ಯೇಯಗಳು : ಸಂವೃದ್ಧಿ, ಸಂತೃಪ್ತಿ , ಸರ್ವೋದಯ, ಸೋದರತ್ವ, ಸಮಾನತೆ, ಸಾಮರಸ್ಯ

ಆದ್ದರಿಂದ ಇಷ್ಟಲಿಂಗವೇ ಪ್ರಧಾನವಾದ ಲಾಂಛನವಾಗಿರುವ ಲಿಂಗಾಯತ ಧರ್ಮಕ್ಕೆ ಮಧ್ಯೆ ಇಷ್ಟಲಿಂಗದ ಚಿತ್ರವಿರುವ ಷಟ್‌ಕೋನ ಲಾಂಛನವು ಅತ್ಯಂತ ಸೂಕ್ತವೆನಿಸುತ್ತದೆ.

ಷಟ್‌ಕೋನ ಇಷ್ಟಲಿಂಗ ಸಹಿತ ಗಣಲಾಂಛನವನ್ನು ಜೀವನದ ವಿವಿಧ ಕ್ರಿಯೆಗಳಲ್ಲಿ ಅಳವಡಿಸಿಕೊಳ್ಳಬೇಕು.

೧. ಮಠಗಳ ಮೇಲೆ ಮತ್ತು ಮನೆಗಳ ಮುಂಭಾಗದಲ್ಲಿ ಹಾಕಬೇಕು. ತಮ್ಮ ವ್ಯಾಪಾರ ವ್ಯವಹಾರಕ್ಕೆ ಸಂಬಂಧಿಸಿದ ಅಂಗಡಿ, ಫ್ಯಾಕ್ಟರಿ ಮೇಲೆ ಹಾಕಬೇಕು.

೨. ವಾಹನಗಳ ಮೇಲೆ ಬರೆಸಬೇಕು. ಸ್ಟಿಕರ್ ಮಾಡಿ ಅಂಟಿಸಿಕೊಳ್ಳಬೇಕು. ಬಸವ ಭಕ್ತರು, ಲಿಂಗಾಯತರು ಹೊಂದಿರುವ ಸಾರಿಗೆ ವಾಹನಗಳ ಮೇಲೆ ಈ ಚಿತ್ರವನ್ನು ಬರೆಸಬೇಕು..

೩. ವಿವಿಧ ಆಹ್ವಾನ ಪತ್ರಿಕೆಗಳ ಮೇಲೆ ಮುದ್ರಿಸಬೇಕು.

ಈ ಪ್ರಚಾರ ಕಾರ್ಯದಲ್ಲಿ ಶರಣ ಬಂಧುಗಳು ಸ್ಟಿಕರ್‌ಗಳನ್ನು ಮಾಡಿಸಿ ಅಥವಾ ಖರೀದಿಸಿ ಪರಿಚಿತರು, ಬಂಧು, ಮಿತ್ರರ ಮನೆಗಳಲ್ಲಿ, ಮನೆಗಳ ತಲ ಬಾಗಿಲಲ್ಲಿ ಅಂಟಿಸುವ ಮೂಲಕ ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕೆಂದು ಆಶಿಸುತ್ತೇವೆ.

-ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷೆ, ಬಸವ ಧರ್ಮ ಪೀಠ

ಬಸವ ಭಕ್ತರ ನವರಾತ್ರಿ ಆಚರಣೆ

ಲಿಂಗಾಯತ ಧರ್ಮಾನುಯಾಯಿಗಳು ಯಾವುದೇ ಹಬ್ಬವನ್ನು ತಾತ್ತ್ವಿಕವಾಗಿ, ವೈಚಾರಿಕವಾಗಿ, ಭಾಕ್ತಿಕವಾಗಿ ಆಚರಿಸಬೇಕು. ಆಡಂಬರ, ವೈಭವ, ಮೂಢ ನಂಬಿಕೆಗಳಿಂದ ಹೊರತಾಗಿ ಹಬ್ಬವನ್ನು ಆಚರಿಸಬ್ಃಕು. ಆಶ್ವಯುಜ ಮಾಸದ ಅಮವಾಸ್ಯೆಯು ದಿ. 16-10-2001ರಂದು ಬರುತ್ತಿದ್ದು, ಪ್ರತಿಪದೆ ದಿ. 17-10-2001ರಂದು ಪ್ರಾರಂಭವಾಗುತ್ತದೆ. ವಿಜಯ ದಶಮಿಯು ಅಕ್ಟೋಬರ್ 26ರಂದು ಒದಗಿ ಬಂದಿದೆ. ಸಾಂಪ್ರದಾಯಿಕವಾಗಿ ಈ ದಿನಗಳನ್ನು ನವರಾತ್ರಿ ಎಂದು ಆಚರಿಸಲಾಗುವುದು. ದೇವಿಗೆ ಸಂಬಂಧಿಸಿದ ಹಬ್ಬವನ್ನಾಗಿ ಹಿಂದುಗಳು ಆಚರಿಸುವರು. ದೇವಿಯ ಸಂಕೇತವಾಗಿ ಘಟ್ಟ ಕೂಡ್ರಿಸುವುದು ಎಂದು ಕೆಲವರು, ಮತ್ತೆ ಕೆಲವರು ದೇವಿ ಪುರಾಣ ಪಾರಾಯಣ ಮಾಡುವರು. ಈ ಯಾವ ಪದ್ಧತಿಯೂ ಬಸವ ಪಥಿಕರಿಗೆ ಮಾನ್ಯವಲ್ಲ. ಏಕಲಿಂಗ ನಿಷ್ಠಾಪರರಾದ ಶರಣರು ತ್ರಿತತ್ತ್ವ (Trinity)ಗಳಾದ ಗುರು-ಲಿಂಗ-ಜಂಗಮದ ಆರಾಧನೆಯ ಹೊರತು ಬೇರಾವ ಕಾಲ್ಪನಿಕ ದೇವತೆಗಳನ್ನು ಪೂಜಿಸಬಾರದು.

ಸಾಂಪ್ರದಾಯಿಕವಾಗಿ ನವರಾತ್ರಿಯನ್ನು ಆಚರಿಸಿಕೊಂಡು ಬಂದ ಜನರು ಪರ್ಯಾಯವಾಗಿ ಹೀಗೆ ಪೂಜೆಯನ್ನು ಮಾಡಬೇಕು.

1. ಪ್ರತಿಪದೆಯ ದಿವಸ ಒಂದು ಮಂಟಪ ಮಾಡಿ ಧರ್ಮಪಿತ ಬಸವಣ್ಣನವರ ಭಾವಚಿತ್ರವನ್ನು ಪ್ರತಿಷ್ಠಾಪಿಸಬೇಕು.
2. ಪ್ರತಿಪದೆಯಂದು ಮತ್ತು ವಿಜಯದಶಮಿಯಂದು ಇಷ್ಟಲಿಂಗಪೂಜೆಯ ನಂತರ ಪೂರ್ತಿ ಬಸವೇಶ್ವರ ಪೂಜಾವ್ರತ ಮಾಡಬೇಕು.
3. ಲಿಂಗಾಯತೇತರ ಬಸವ ಭಕ್ತರು ಇಷ್ಟಲಿಂಗಧಾರಣೆ ಇಲ್ಲದಿರುವುದರಿಂದ ಬಸವೇಶ್ವರ ಪೂಜಾವ್ರತ ಮಾಡಬೇಕು.
4. ಉಳಿದ ದಿನ 108 ಬಸವ ಮಂತ್ರ ಹೇಳಿ ಪುಷ್ಪಾರ್ಚನೆ ಮಾಡಬೇಕು.
5. ಧರ್ಮಪಿತ ಬಸವಣ್ಣನವರ ವಚನಗಳ ಸಂಗ್ರಹವಾದ ಬಸವ ವಚನ ದೀಪ್ತಿ, ಬಸವ ದರ್ಶನ ಕೃತಿಗಳನ್ನು ಎರಡೂ ಹೊತ್ತು ಓದಬೇಕು.
6. ಚಿಕ್ಕ ಚಿಕ್ಕ ಕಾಗದದ ತುಂಡುಗಳನ್ನು ಮಾಡಿ ಅದರಲ್ಲಿ ವಚನಗಳನ್ನು 9 ದಿವಸಗಳಕಾಲ ಬರೆಯಬೇಕು. ವಚನದ ಕೆಳಗೆ ಕೊಡುಗೆ ಎಂದು ಬರೆದು, ನಿಮ್ಮ ಹೆಸರು ಬರೆದಿರಬೇಕು.
7. ವಿಜಯ ದಶಮಿಯ ದಿನ ಬಸವಣ್ಣನವರ ಭಾವಚಿತ್ರಕ್ಕೆ ವಚನಗಳನ್ನು ಬರೆದಿಟ್ಟ ಹಾಳೆಗಳನ್ನೇ ಪುಷ್ಪದೊಡನೆ ಏರಿಸಿ, ನಂತರ ಸಂಗ್ರಹಿಸಿ ಇಟ್ಟುಕೊಂಡು, ಬನ್ನಿ ಕೊಡುವುದರ ಬದಲಿಗೆ (ಅಥವಾ ಬನ್ನಿಯ ಜೊತೆಗೆ) ಆ ವಚನಗಳನ್ನು ನೆನಪಿನ ಕೊಡುಗೆಯಾಗಿ ಕೊಡಬೇಕು.
8. ವಿಜಯ ದಶಮಿಯ ದಿನ ಬೆಳಿಗ್ಗೆ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗಿಗಳಾಗಿ, ಅಲ್ಲಿಯೂ ಶರಣ ಬಂಧುಗಳಿಗೆ ವಚನಗಳನ್ನು ವಿತರಿಸಿ, ಸಂಜೆ ತಮ್ಮ ಗುರು-ಹಿರಿಯರು, ಬಂಧು-ಬಳಗ-ಮಿತ್ರರನ್ನು ಸಂದರ್ಶಿಸಲು ಹೋಗಿ ವಚನಗಳನ್ನು ಜೊತೆಗೆ ಕಲ್ಲುಸಕ್ಕರೆ ಸಿಹಿ ಒಯ್ದು ಅದನ್ನು ವಿತರಿಸಿ ಬರಬೇಕು.
9. ಅಂದು ಬೆಳಿಗ್ಗೆ ಸಾಮೂಹಿಕವಾಗಿ ಶರಣ ಬಂಧುಗಳೆಲ್ಲ ಸೇರಿ ಅಕ್ಕನಾಗಲಾಂಬಿಕಾ ಸಂಸ್ಮರಣೆ, ಬಸವ ಧರ್ಮ ವಿಜಯೋತ್ಸವವನ್ನು ಆಚರಿಸಬೇಕು.

-ಮಾತಾಜಿ

ಸಂಪಾದಕೀಯ

ಚಿಂತನ ಕಿರಣಗಳು

-ಮಾತಾಜಿ

ತಮಿಳು ನಾಡಿನ ಮಾಜಿ ಮುಖ್ಯಮಂತ್ರಿ ಕುಮಾರಿ ಜಯಲಲಿತಾ ಅವರು ತಮಿಳು ನಾಡಿನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡುದು ಸರ್ವಥಾ ಸರಿಯಲ್ಲ ಎಂಬ ಸುಪ್ರೀಂಕೋರ್ಟಿನ ತೀರ್ಪು ಬಹಳ ಮಹತ್ವಪೂರ್ಣವಾದುದು. ಭ್ರಷ್ಟಾಚಾರ ಪ್ರಕರಣದಲ್ಲಿ ಅಪರಾಧಿಯಾಗಿ ಎರಡು ವರ್ಷಗಳ ಶಿಕ್ಷೆ ಸಹ ಪಡೆದ ಜಯಲಲಿತಾರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹತೆ ಇಲ್ಲದೆ ಇದ್ದರೂ ಎಲ್ಲ ನಿಯಮಗಳನ್ನೂ ಗಾಳಿಗೆ ತೂರಿ ಮುಖ್ಯ ಮಂತ್ರಿಯಾದರು. ಈ ಪ್ರಸಂಗದಿಂದ ಇಡೀ ದೇಶವೇ ತಲ್ಲಣಿಸಿ ಹೋಯಿತು: ಇಲ್ಲಿ ಸಂವಿಧಾನ, ಕಾನೂನು ಎಲ್ಲವೂ ಪಾರ್ಶ್ವವಾಯು ಪೀಡಿತವಾಗಿವೆಯೆ ? ಎನ್ನಿಸಿತ್ತು. ಭಂಡತನಕ್ಕೆ ಪಟ್ಟಾಭಿಷೇಕವೆ ?

ಆದರೆ ಸರ್ವೋಚ್ಚ ನ್ಯಾಯಾಲಯ ಸಂವಿಧಾನವನ್ನು ಎತ್ತಿ ಹಿಡಿದಿದೆ, ಗೌರವಿಸಿದೆ. ಅಕ್ರಮವಾಗಿ ಗದ್ದುಗೆ ಏರಿದ ಜಯಲಲಿತಾರ ಬಲಕ್ಕೆ ಇದ್ದುದು "ಜನಾದೇಶ" ಬಹುಮತದಿಂದ ಪಕ್ಷವು ಆಯ್ಕೆಯಾದುದು, ಹೌದಪ್ಪಗಳೆಂಬ ಪಕ್ಷದ ಶಾಸಕರು ಮತ್ತು ಬಹುಮತದ ಆಧಾರದ ಮೇಲೆ ರಾಜ್ಯಪಾಲರಿಂದ ಅನುಮೋದನೆ. ಸರ್ವೋಚ್ಚ ನ್ಯಾಯಾಲಯವು ಈ ಮೂರಕ್ಕೂ ಮನ್ನಣೆ ನೀಡದೆ, ಸಂವಿಧಾನದ ಚೌಕಟ್ಟು ಮುಖ್ಯ ಎಂದಿದೆ ಜನಾದೇಶವೂ ಸಂವಿಧಾನದ ಚೌಕಟ್ಟಿಗೆ ಹೊಂದಿಕೊಂಡಿದ್ದರೆ ಸರಿ, ಇಲ್ಲದಿದ್ದರೆ ಜನಾದೇಶಗಳಿಗಿಂತಲೂ ಸಂವಿಧಾನಕ್ಕೆ ಗೌರವ ನೀಡಬೇಕು ಎಂದು ಸರ್ವೋನ್ನತ ನ್ಯಾಯಾಲಯ ತೀರ್ಪು ನೀಡಿದೆ.

ಜನಾದೇಶ :

ನಮ್ಮ ದೇಶದ ಸದ್ಯದ ಪರಿಸ್ಥಿತಿ ನೋಡಿದರೆ ಜನಾದೇಶ ಎಂಬುದಕ್ಕೆ ಅರ್ಥವೇ ಇಲ್ಲ. ರಾಜಕಾರಣಿಗಳ ಬಹುರೂಪಿ ವ್ಯಕ್ತಿತ್ವಕ್ಕೆ ಜಿಗುಪ್ಸೆಪಟ್ಟು ಬುದ್ಧಿಜೀವಿಗಳು, ವಿದ್ಯಾವಂತರು ಓಟುಹಾಕಲು ಹೋಗುವುದೇ ಇಲ್ಲ. ಚುನಾವಣೆಯ ದಿನದ ರಜೆಯನ್ನು ಬಳಸಿಕೊಂಡು ಮನೆಯಲ್ಲಿ ಟಿ.ವಿ ನೋಡುತ್ತಾರೆ. ನೋಟು, ಸಾರಾಯಿ ಪಡೆದ ಜನರು ಓಟು ಹಾಕಲು ಸಾಲು ಕಟ್ಟುತ್ತಾರೆ. ಒಂದು ಊರಿನಲ್ಲಿ ಒಂದು ಮಠದ ವ್ಯವಸ್ಥಾಪಕರು ತಮ್ಮ ಪತ್ನಿಯನ್ನು ಚುನಾವಣೆಗೆ ನಿಲ್ಲಿಸಿದ್ದರಂತೆ. ಯಾವುದೋ ಒಂದು ಊರಿನಲ್ಲಿ ಅವರ ವಿರುದ್ಧದ ಅಲೆ ಇತ್ತಂತೆ. ಅಲ್ಲಿಯವರು ಇವರ ವಿರುದ್ಧ ಮತ ಚಲಾಯಿಸಿದರೆ ಗೆಲ್ಲುವುದು ಸಾಧ್ಯವಿರಲಿಲ್ಲವಂತೆ. ಆಗ ಅವರು ಮಾಡಿದ ಉಪಾಯವೇನೆಂದರೆ ಆವಶ್ಯಕತೆಗೂ ಮೀರಿ ಸಾರಾಯಿ ಹಂಚಿಸಿದರು. ಕುಡಿದು ಮಲಗಿದ ಜನ ಸಂಜೆಯವರೆಗೂ ಏಳಲೇ ಇಲ್ಲ, ಮತಗಟ್ಟೆಗೆ ತೆರಳಲೂ ಇಲ್ಲ. ಹೇಗಿದೆ ತಂತ್ರ ? ಇವರೇ ಗೆದ್ದರು ! ಪ್ರಾಜ್ಞರಲ್ಲದ, ದೇಶದ ಭವಿಷ್ಯದ ಬಗ್ಗೆ ಗಂಭೀರವಾಗಿ ಚಿಂತಿಸದ ಜನರು ನೋಟು ತಗೊಂಡು ಓಟು ಹಾಕಿ ಗೆಲ್ಲಿಸಿದುದನ್ನು 'ಜನಾದೇಶ' ಎಂದು ಎಲ್ಲ ನೇಮಗಳನ್ನು ಗಾಳಿಗೆ ತೂರಲಾದೀತೆ ?

2. ಹೌದಪ್ಪಗಳ ಬಹುಮತ :

ರಾಷ್ಟ್ರದ ಬಗ್ಗೆ, ಇದರ ಭವಿಷ್ಯದ ಬಗ್ಗೆ, ಬಡಜನರ ಸಂಕಷ್ಟದ ಬಗ್ಗೆ ಎಷ್ಟೂ ಚಿಂತಿಸದೆ ತಮ್ಮ ಜೇಬು ತುಂಬಿಕೊಳ್ಳುವುದರಲ್ಲೇ ಮಗ್ನರಾದ ಬಹುಪಾಲು ರಾಜಕಾರಣಿಗಳು ಸಮಯ

ಸಾಧಕರು, ಬೌದ್ಧಿಕ ದಾಸ್ಯಕ್ಕೆ ಒಳಗಾದವರು. ಹೀಗಾಗಿ ಸತ್ಯವನ್ನು, ಸಂವಿಧಾನವನ್ನು ಎತ್ತಿ ಹಿಡಿಯುವ ಕೆಲಸ ಮಾಡದೆ ಅಕ್ರಮಕ್ಕೆ ಪ್ರೋತ್ಸಾಹ ಕೊಡುವ ನಾಯಕರನ್ನೇ ಅವರು ಬೆಂಬಲಿಸುವುದು. ಕಣ್ಣಿಗೆ ರಾಚುವಷ್ಟು ಭ್ರಷ್ಟಾಚಾರ ಜಯಲಲಿತಾರವರದು ಆಗಿದ್ದು, ಚುನಾವಣೆಗೆ ಸ್ಪರ್ಧಿಸಲು ಅರ್ಹತೆ ಇಲ್ಲದ ವ್ಯಕ್ತಿಯನ್ನು ಈ ಹೌದಪ್ಪಗಳು ಮುಖ್ಯಮಂತ್ರಿಯನ್ನಾಗಿ ಆಯ್ಕೆಮಾಡಿದುದು ನಿಜಕ್ಕೂ ಅಸಹ್ಯ.

3.ರಾಜ್ಯಪಾಲೆ :

ರಾಜ್ಯಪಾಲರಿಗೆ ಕೆಲವು ಪ್ರಶ್ನಾತೀತ ಅಧಿಕಾರಗಳುಂಟು ; ಜಯಲಲಿತಾರನ್ನು ಬಹುಮತದಿಂದ ಆಯ್ಕೆ ಮಾಡಿದ ಪಟ್ಟಿಯನ್ನು ಹೌದಪ್ಪಗಳ ಪರವಾಗಿ ನೀಡಿದಾಗ ರಾಜ್ಯಪಾಲೆ ಫಾತಿಮಾ ಬೀವಿ ತಿಳಿಹೇಳಿ, ಆಯ್ಕೆಯಾದ ಯಾರನ್ನಾದರೂ ಮುಖ್ಯಮಂತ್ರಿಯಾಗಿ ಆಯ್ದುಕೊಳ್ಳಲು ಸೂಚಿಸಬಹುದಿತ್ತು. ಗೆಳೆತನದ ಬಾಂಧವ್ಯದಿಂದಲೂ ಸ್ತ್ರೀಕುಲದ ವ್ಯಾಮೋಹದಿಂದಲೋ, ಜಯಲಲಿತಾರನ್ನು ಆಯ್ಕೆ ಮಾಡದಿದ್ದರೆ ಕಾರ್ಯಕರ್ತರು ಹಿಂಸಾಚಾರಕ್ಕೆ ಎಳೆಸಬಹುದೆಂದು ಆತಂಕಗೊಂಡೋ ರಾಜ್ಯಪಾಲರು ಜಯಲಲಿತಾರನ್ನು ಗದ್ದುಗೆಗೆ ಏರಿಸಿದರು. ಸ್ವತಃ ಕಾನೂನು ಪಂಡಿತರಿದ್ದು ಸಹ ಈ ತಪ್ಪು ಎಸಗಿದರು.

ಸುಪ್ರೀಂ ಕೋರ್ಟ್ ಈ ಮೂವರೂ -ಜನರು, ಶಾಸಕರು ಮತ್ತು ರಾಜ್ಯಪಾಲೆ ಮಾಡಿದ ತಪ್ಪನ್ನು ಸರಿಪಡಿಸಿ ಸಂವಿಧಾನದ ಪಾವಿತ್ರ್ಯತೆಯನ್ನು ಎತ್ತಿಹಿಡಿದುದು ಅಭಿನಂದನೀಯ.

ಇದೇ ತೀರ್ಪಿನ ಹಿನ್ನೆಲೆಯಲ್ಲಿ ನಾವು ಹೀಗೊಂದು ಚಿಂತನೆಯನ್ನು ಮಾಡಬಹುದು. ವಚನ ಸಾಹಿತ್ಯವೂ ಲಿಂಗಾಯತ ಸಮಾಜದ ಧಾರ್ಮಿಕ ಸಂವಿಧಾನ. ಅದನ್ನು ಓದಿ ಈ ಧರ್ಮದ ವಿಚಾರ - ಆಚಾರಗಳನ್ನು ನಿರ್ಧರಿಸಬೇಕು. ಪರಿಸರದ ಪ್ರಭಾವದಿಂದ ಬಹುಪಾಲು ಲಿಂಗಾಯತರು ಬಹುದೇವತೋಪಾಸನೆ ಮಾಡುತ್ತ , ಜಾತಿಭೇದ ಮಾಡುತ್ತಾ ತಪ್ಪುಗಳನ್ನು ಎಸಗುತ್ತಿದ್ದಾರೆ. ತಪ್ಪು ಮಾರ್ಗದಲ್ಲಿರುವ ಇಂಥ ಜನರಿಗೆ ಬುದ್ಧಿ ಹೇಳುವ ಬದಲು ಶ್ರೀಮಂತರು ಕೊಡುವ ಕಾಣಿಕೆಯ ಆಸೆಗಾಗಿಯೋ ಅಥವಾ ತಮ್ಮಲ್ಲೇ ಇರುವ ಅಜ್ಞಾನಯುಕ್ತ ಮೂಢನಂಬಿಕೆಯಿಂದಲೋ ಮಠಾಧೀಶರು ಸಹ ಬಹುದೇವತೋಪಾಸನೆ , ಜಾತಿವಾದಕ್ಕೆ ಪಕ್ಕಾಗಿದ್ದಾರೆ. ಆದ್ದರಿಂದ ಅವರ ನಡೆಯನ್ನೇ ಧರ್ಮ ಎಂದು ಭಾವಿಸದೆ ವಚನ ಸಾಹಿತ್ಯ ಸಂವಿಧಾನ ವಿಧಿಸಿದ ಕಟ್ಟಳೆಯಂತೆ ಲಿಂಗಾಯತ ಸಮಾಜ ನಡೆಯಬೇಕಲ್ಲದೆ ಮಠಾಧಿಕಾರಿಗಳೇ ತಪ್ಪು ಮಾಡುತ್ತಿದ್ದರೂ ಅದನ್ನು ವಿಶ್ಲೇಷಿಸುವ ಬೌದ್ಧಿಕ ಸಾಮರ್ಥ್ಯ, ಧೈರ್ಯ ಬೆಳೆಸಿಕೊಳ್ಳುವುದೇ ಸೂಕ್ತ. ☐

ಒಸಾಮಾ ಬಿನ್ ಲಾಡೆನ್ ಮತ್ತು ಇಸ್ಲಾಮಿಕ್ ಜೆಹಾದ್

ಸೆಪ್ಟಂಬರ್ 11 ರಂದು ಜಾಗತಿಕ ವ್ಯಾಪಾರ ಕೇಂದ್ರ, ಪೆಂಟಗನ್ ಮತ್ತಿತರ ಅಮೆರಿಕದ ಬೃಹತ್ ಕಟ್ಟಡಗಳಿಗೆ ಇಸ್ಲಾಮಿಕ್ ಆತ್ಮಾಹುತಿ ದಳದವರು ಅಪಹೃತ ವಿಮಾನಗಳನ್ನು ಢಿಕ್ಕಿ ಹೊಡೆಸಿ ಸಾವಿರಾರು ಜನರ ಪ್ರಾಣಕ್ಕೆ ಎರವಾದರಲ್ಲದೆ ನೂರಾ ಹತ್ತು ಅಂತಸ್ತಿನ ಕಟ್ಟಡ ಧರೆಗೆ ಉರುಳುವಂತೆ ಮಾಡಿದರು. ಇದು ಅಮೆರಿಕಾದ ಅಹಂಗೆ ಬಿದ್ದ ಮಹಾನ್‌ಪೆಟ್ಟು ಮತ್ತು ಇದರಿಂದ ಭಯೋತ್ಪಾದನೆಯ ನೋವು ಏನೆಂಬುದು ದೊಡ್ಡಣ್ಣನಾಗಿ ಎಲ್ಲರ ಮೇಲೆ ಅಧಿಕಾರ

ಮಾಡಬಯಸುವ ಅಮೆರಿಕಾಕ್ಕೆ ಮನದಟ್ಟಾಯಿತು. ಈ ಭಯಂಕರ ಕ್ರೂರ ಕೃತ್ಯ ನಡೆಯುತ್ತಿರುವುದು ಧರ್ಮದ ಹೆಸರಿನಲ್ಲಿ ; ಅಲ್ಲಹನ ಹೆಸರಿನಲ್ಲಿ ! ಇದು ಉಗ್ರವಾದಿಗಳ ದೃಷ್ಟಿಯಲ್ಲಿ ಜೆಹಾದ್-ಧರ್ಮ ಯುದ್ಧ. ಕಾಶ್ಮೀರವು ಭಾರತ ಮಾತೆಯ ಕಿರೀಟದಂತೆ ಭೌಗೋಲಿಕವಾಗಿ ಇರುವುದಲ್ಲದೆ ರಮಣೀಯ ಪ್ರಕೃತಿ ಸೌಂದರ್ಯದಿಂದ ಜಗದ್ ವಿಖ್ಯಾತವಾಗಿತ್ತು. ಅಂಥ ಒಂದು ಅದ್ಭುತ ಪ್ರದೇಶವನ್ನು ರಣರಂಗವಾಗಿ, ಸ್ಮಶಾನವನ್ನಾಗಿ ಮಾಡಿದುದು ಈ ಇಸ್ಲಾಮಿಕ್ ಜೆಹಾದ್. ಪ್ರವಾಸೋದ್ಯಮದಿಂದಲೇ ಅಸಂಖ್ಯಾತ ಜನರು ಮುಖ್ಯವಾಗಿ ಮುಸಲೀಮರು ಸಹ ತಮ್ಮ ಜೀವನ ಮಾರ್ಗವನ್ನು ಕಂಡುಕೊಂಡಿದ್ದರು. ಭಯೋತ್ಪಾದನೆಯಿಂದಾಗಿ ಪ್ರವಾಸೋದ್ಯಮಕ್ಕೂ ಕುತ್ತು ಬಂದಿತು.

ಸೆಪ್ಟಂಬರ್ 11 ರಂದು ನಡೆದ ಭಯೋತ್ಪಾದಕ ಕ್ರಿಯೆ ಇಸ್ಲಾಂ ಧರ್ಮಕ್ಕೇ ಅವಮಾನ ಮಾಡುತ್ತಿದೆ ಎಂದು ಸೌದಿ ಅರೇಬಿಯಾ ಹೇಳಿ, ಅಫ್‌ಘಾನಿ ಸ್ಥಾನದ ಆಡಳಿತಾರೂಢ ತಾಲಿಬಾನ್ ಜೊತೆ ಸಂಬಂಧವನ್ನು ಕಡಿದುಕೊಂಡಿದೆ. ಇಸ್ಲಾಂ ಎಂದರೆ ಶಾಂತಿ ಎಂದು ಅರ್ಥವಂತೆ. ಮೊಹಮ್ಮದ್ ಪೈಗಂಬರರು ಹುಟ್ಟಿದ ಅರಬ್ ನಾಡಿನಲ್ಲಿ ನೂರಾರು ಬುಡಕಟ್ಟುಗಳ ಜನರು ಕ್ರೂರವಾಗಿ ಹೊಡೆದಾಡುತ್ತ ಪರಸ್ಪರರನ್ನು ಕೊಲ್ಲುತ್ತಿದ್ದುದರಿಂದ ಮೊಹಮ್ಮದರು ಶಾಂತಿಯನ್ನು ಬೋಧಿಸಲಿಕ್ಕೆ ಧರ್ಮವನ್ನು ಸಾಧನವಾಗಿ ಬಳಸಿಕೊಂಡರು. ಆದರೆ ಇಂದು ಆಗುತ್ತಿರುವುದೇನು ? ಇಸ್ಲಾಮಿನ ಹೆಸರಿನಲ್ಲಿ ಅಶಾಂತಿ ಎಲ್ಲೆಡೆ ಹಬ್ಬುತ್ತದೆ. ಶಾಂತಿ ದೂತರಾಗಬೇಕಿದ್ದ ಜನರು ಅಶಾಂತಿ, ಭಯೋತ್ಪಾದನೆಯ ವಾಹಕರಾಗುತ್ತಿದ್ದಾರೆ. ಹಿಂದುಗಳು, ಬೌದ್ಧರು, ಜೈನರು,ಸಿಖ್ಖರು,ಲಿಂಗಾಯತರು, ಪಾರ್ಸಿಗಳು, ಕ್ರೈಸ್ತರು ವಿವಿಧ ರಾಷ್ಟ್ರಗಳಲ್ಲಿ ಇದ್ದರೂ, ಕೆಲವು ಕಡೆ ಮುಖ್ಯವಾಗಿ ಐರ್‌ಲೆಂಡ್ ಮತ್ತು ಭಾರತದ ಈಶಾನ್ಯ ಭಾಗಗಳಲ್ಲಿ ಕ್ರೈಸ್ತ ಮತವು ಅಶಾಂತಿಗೆ ಕಾರಣವಾಗಿದ್ದರೂ, ಮುಸಲೀಮರಷ್ಟು ಅಶಾಂತಿಯನ್ನು ಹಬ್ಬಿಸುವುದಿಲ್ಲ. ಬೇರೆ ರಾಷ್ಟ್ರಗಳಲ್ಲಿ ಅಶಾಂತಿಯುಂಟು ಮಾಡುವುದಿರಲಿ ತಮ್ಮ ತಮ್ಮಲ್ಲೇ ವಿಪರೀತ ಕಾದಾಡುತ್ತ ಬದುಕನ್ನೇ ಅಸಹನೀಯವಾಗಿ ಮಾಡಿಕೊಳ್ಳುತ್ತಿದ್ದಾರೆ. ಪಾಕಿಸ್ಥಾನ, ಆಫ್‌ಘಾನಿಸ್ಥಾನಗಳಲ್ಲಿ ಒಳಪಂಥ(ಶಿಯಾ ಮತ್ತು ಸುನ್ನಿ)ಗಳ ಮಧ್ಯೆ ನಡೆಯುವ ಅಂತರ್ಯುದ್ಧಗಳು ಅಲ್ಲಿಯ ಜನಜೀವನವನ್ನು ದುರ್ಭರಗೊಳಿಸಿವೆ.

ದೇವರ ಹೆಸರಿನಲ್ಲಿ ಕ್ರೂರವಾದ ಹಿಂಸೆಯನ್ನು ಪ್ರದರ್ಶಿದರೆ ದೇವನಿಗೆ ಪ್ರಿಯವೆನ್ನಿಸುವುದೆ ? ಮೂಢ ಹಿಂದುಗಳು ಅತ್ಯಂತ ಕ್ರೂರವಾಗಿ ಮಾರಮ್ಮ, ದುರ್ಗಮ್ಮ , ಮಸಣಮ್ಮಗಳಿಗೆ ಕೋಣ, ಕುರಿ, ಕೋಳಿ ಬಲಿ ಕೊಟ್ಟರೆ ಧರ್ಮಯುದ್ಧದ ಹೆಸರಿನಲ್ಲಿ ಜನರನ್ನು ಕೊಲ್ಲುವುದು ನರಬಲಿಯಾಗುವುದಿಲ್ಲವೆ ? ಅದೂ ಕರುಣಾಮಯ ಅಲ್ಲಹ ಎಂದು ಪದೇ ಪದೇ ಮೊಹಮ್ಮದರು ವರ್ಣಿಸುವ ಅಲ್ಲಹನ ಹೆಸರಲ್ಲಿ.

ಧರ್ಮವು ಮಾನವನಲ್ಲಿ ಸ್ವಾಭಾವಿಕವಾಗಿರುವ ಆಸುರೀ ಪ್ರವೃತ್ತಿಗೆ ಕಡಿವಾಣ ಹಾಕುವುದನ್ನೇ ಧ್ಯೇಯವಾಗಿ ಹೊಂದಿರಬೇಕು. ಅವನಲ್ಲಿರುವ ಕ್ರೌರ್ಯದ ಮನೋಭಾವ ನಿರ್ಮೂಲನ ಮಾಡಿ ವ್ಯಕ್ತಿಯನ್ನು ಸಾತ್ವಿಕಗೊಳಿಸಬೇಕೆಂದು ಕಾಮ, ಕ್ರೋಧಗಳನ್ನು ನಾಶ

ಮಾಡುವುದೇ ಧರ್ಮದ ಧ್ಯೇಯವಾಗಿರಬೇಕು. ಅದನ್ನೇ ಧರ್ಮಪಿತ ಬಸವಣ್ಣನವರು ದಯವಿಲ್ಲದ ಧರ್ಮವದೇವುದಯ್ಯ ? ಎಂದು ಪ್ರಶ್ನಿಸುವರು. ದಯವೇ ಬೇಕು ಸಕಲ ಪ್ರಾಣಿಗಳಲ್ಲಿ ಎಂದು ಬೋಧಿಸುವರು. ಮಹಾವೀರರು ಅಹಿಂಸೆಯೇ ಪರಮ ಧರ್ಮ ಎಂದರು. "ನಿನ್ನ ನೆರೆಯವನನ್ನೂ ನಿನ್ನಷ್ಟೇ ಪ್ರೀತಿಸು. ಕಾಣುವ ಸೋದರರನ್ನು ಪ್ರೀತಿಸಲಾರದ ನೀನು ಕಾಣದ ದೇವರನ್ನೇನು ಪ್ರೀತಿಸೀಯೆ." ಎಂದು ಏಸುವು ನುಡಿದರು. "ಜೀವವನ್ನು ಕೊಡುವ ಶಕ್ತಿಯಿಲ್ಲದವನು ಜೀವವನ್ನು ತೆಗೆಯುವ ಹಕ್ಕನ್ನು ಹೊಂದಿಲ್ಲ." ಎಂದರು ಬುದ್ಧರು.

ಒಂದು ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕಿಯೋರ್ವರು ಹೇಳಿದರು, "ನಿನ್ನ ಮಾತೃಭೂಮಿ ಯಾವುದು?" ಎಂದು ಕೇಳಿದರೆ ಬಹುಪಾಲು ಮುಸ್ಲಿಂ ಮಕ್ಕಳು ಪಾಕಿಸ್ಥಾನ ಎಂದಾಗ ಇವರೆಲ್ಲ ಬೆಚ್ಚಿಬಿದ್ದರಂತೆ. ಮಕ್ಕಳ ಪಾಲಕರಿಗೆ ಹೇಳಿ ಕಳಿಸಿ " ನೋಡಿ ಈ ರೀತಿ ಹೇಳಿದರು. ನೀವು ಸರಿಯಾಗಿ ಅವರಿಗೆ ತಿಳಿಹೇಳಿರಿ" ಎಂದರೆ, "ಆಗಲಿ, ಹುಡುಗರು ತಿಳಿಯದೆ ಹೇಳಿದ್ದಾರೆ " ಎಂದು, ಪಾಲಕರು ಹಾರಿಕೆಯ ಉತ್ತರ ಕೊಟ್ಟರಂತೆ. ಅಷ್ಟು ಸಣ್ಣಮಕ್ಕಳಿಗೆ ಪಾಕಿಸ್ಥಾನದ ಬಗ್ಗೆ ಏನು ಗೊತ್ತಿರುತ್ತದೆ. ಇವರು ಹೇಳಿಕೊಡದೆ ಅವರು ಕಲಿತಿರುತ್ತಾರೆಯೆ ? ಇಂಥ ದ್ರೋಹ ಚಿಂತನೆ ಒಳ್ಳೆಯದಲ್ಲ. ತಮ್ಮ ತಮ್ಮ ಧರ್ಮಗಳನ್ನು ಅನುಸರಿಸಲು ವೈಯಕ್ತಿಕವಾಗಿ , ಧಾರ್ಮಿಕವಾಗಿ ನಮ್ಮ ದೇಶದ ಸಂವಿಧಾನವು ಅವಕಾಶ ಮಾಡಿಕೊಟ್ಟಿದೆ. ಆದರೆ ಅನ್ನವೀವ ಮಾತೃಭೂಮಿಗೆ ದ್ರೋಹ ಬಗೆದು ದೇವರನ್ನು ಮೆಚ್ಚಿಸಲು ಸಾಧ್ಯವಿಲ್ಲ. ವ್ಯಕ್ತಿಯ ಬದುಕು ಅಲ್ಪಕಾಲಿಕ ; ದೇವರು ಧರ್ಮವನ್ನು ಆಶ್ರಯಿಸಿ ತನ್ನ ಬದುಕನ್ನು ಸಾರ್ಥಕಪಡಿಸಿಕೊಂಡು ಸುತ್ತಲಿನ ಪರಿಸರದಲ್ಲಿ ಸಹ ಶಾಂತಿಯುತವಾದ ವಾತಾವರಣ ನಿರ್ಮಿಸಬೇಕು. ಗಿಡಮರ ಸುತ್ತಿ, ನೀರು ಮುಳುಗಿ , ಬೆಂಕಿಯಲ್ಲಿ ತುಪ್ಪ ಸುರಿದು, ಕೋಟಿಗಟ್ಟಳೆ ಕಿಲೋಮೀಟರ್ ದೂರವಿರುವ ಶನಿಗೆ ಎಳ್ಳಿನ ದೀಪ ಹಚ್ಚಿ, ದೇವತೆಗಳಿಗೆ ಪ್ರಾಣಿಬಲಿ ನೀಡಿ ಹಿಂದುಗಳು ಮೂಢತ್ವದಲ್ಲಿ ಆಯುಷ್ಯವನ್ನು ವ್ಯರ್ಥ ಮಾಡಿಕೊಂಡರೆ ಜೆಹಾದದ ಹೆಸರಿನಲ್ಲಿ ಜನರನ್ನು ಕೊಂದು, ರಾಷ್ಟ್ರಗಳ ಶಾಂತಿಯನ್ನು ಹಾಳು ಮಾಡುವ ಮೂಲಕ ಮುಸಲೀಮರು ಪಾಪದ ದಾರಿ ಹಿಡಿಯುತ್ತಿದ್ದಾರೆ. ಇವೆರಡನ್ನೂ ಮೀರಿದ ಪ್ರಗತಿಪರ, ವೈಚಾರಿಕ ಚಿಂತನೆಯಿಂದ ಕೂಡಿದ ದಯೆ-ಮಾನವೀಯತೆಗಳಿಂದ ಮಿಡಿಯುವ ಧರ್ಮವೇ ನಿಜವಾದ ಧರ್ಮ, ದೇವರನ್ನೊಲಿಸುವ ಸಾಧನ ಎಂಬುದನ್ನು ಎಲ್ಲರೂ ಮನಗಾಣಬೇಕು. ○

ಅಕ್ಟೋಬರ್ ತಿಂಗಳಲ್ಲಿ ಬರುವ ಹಬ್ಬ-ಜಯಂತಿಗಳು

ಅಕ್ಟೋಬರ್ 2	ಮಹಾತ್ಮಾ ಗಾಂಧಿ ಜಯಂತಿ
ಅಕ್ಟೋಬರ್ 16	ವಚನ ಲೇಖನ ವ್ರತಾರಂಭ
ಅಕ್ಟೋಬರ್ 26	ವಿಜಯ ದಶಮಿ
	ಅಕ್ಕನಾಗಲಾಂಬಿಕಾ ಸಂಸ್ಮರಣೆ
	ಪೂಜ್ಯ ಶ್ರೀ ಸದ್ಗುರು ಅಲ್ಲಮ ಪ್ರಭು ಸ್ವಾಮಿಗಳು 41ನೇ ವರ್ಧಂತಿ

ಸ್ತ್ರೀಯ ನಾನಾ ರೂಪಗಳು

-ಮಾತಾಜಿ

ಮೈಸೂರಿನ ಶರಣ. ಪಿ.ಎಂ. ಗಿರಿರಾಜ ಅವರು ಅನೇಕ ಕಡೆ ಪ್ರಸ್ತಾಪಿಸಿದ್ದಾರೆ. ಅದೇನೆಂದರೆ ಶ್ರೀ ಸಿದ್ಧರಾಮೇಶ್ವರರು ಹೇಳಿದ ಒಂದು ವಚನ ಹೀಗೆ ರೂಢಿಯಲ್ಲಿದೆ.

ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು
ತಾ ಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು
ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಗೆಯನೇರಿತ್ತು
ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು
ಅದು ಕಾರಣ ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ
ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ ! ಸಿ.ವ. 1242

ಆದರೆ, "ಮೂಲ ವಚನ ಹೀಗಿಲ್ಲ. ಅದರಲ್ಲಿ ಹೆಣ್ಣು ಹೆಣ್ಣು, ಹೆಣ್ಣು ರಕ್ಕಸಿ, ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದು ಇದೆ. ಕಾಲಾನಂತರದಲ್ಲಿ ಯಾರೋ ತಿದ್ದುಪಡಿ ಮಾಡಿ ಅದನ್ನು ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಸಾಕಾತ್ ಕಪಿಲಸಿದ್ಧ ಮಲ್ಲಿಕಾರ್ಜುನಾ ಎಂದು ಪುನರ್ರಚಿಸಿದ್ದಾರೆ" ಎಂದು ಶರಣ ಗಿರಿರಾಜರ ಪ್ರತಿಪಾದನೆ. ನಾವು ಸಹಿತ ಪ್ರಕಟಿಸುತ್ತಿರುವ ಕೃತಿಗಳಲ್ಲಿ ಹೀಗೇ ಮುದ್ರಿಸುತ್ತಿದ್ದೇವೆ. ಗಿರಿರಾಜರು ಹೇಳುವಂತೆ ಇದು ಪುನರ್‌ರಚಿತ ವಚನ ವಾಕ್ಯ. ನಾವು ಇದನ್ನೇ ಮನ್ನಿಸಿ ಬಳಸುವುದರ ಹಿಂದಿನ ಉದ್ದೇಶವೇನೆಂದರೆ, ನಮ್ಮ ಶರಣರು ಸ್ತ್ರೀಯನ್ನು ತಿರಸ್ಕರಿಸಿ, ಅಗೌರವದಿಂದ ಕಂಡವರಲ್ಲ ; ರಕ್ಕಸಿ ಎಂದು ಬೈದವರಲ್ಲ ; ಅಂದಾಗ ಶ್ರೀ ಸಿದ್ಧರಾಮೇಶ್ವರರಂತಹ ಹೆಂಗರುಳಿನ ಭಾವಜೀವಿ ಅದೆಂತು ಹೀಗೆ ಸ್ತ್ರೀಯನ್ನು ತಿರಸ್ಕರಿಸಿ ಮಾತನಾಡುವರು ?

ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತಾ ಅವರು ಮಾಜಿ ಮುಖ್ಯಮಂತ್ರಿ ಕರುಣಾನಿಧಿಯವರ ಮೇಲೆ ಸೇಡು ತೀರಿಸಿಕೊಂಡ ವಿಧಾನ ನೋಡಿದರೆ "ಹೆಣ್ಣು ರಾಕ್ಷಸಿಯೂ ಅಹುದು" ಎಂಬುದು ಮನೋವೈಜ್ಞಾನಿಕ ವಿಶ್ಲೇಷಣೆ. ಇದರಲ್ಲಿ ವಿಸ್ತಾರವಾದ ಅರ್ಥವಿದೆ ಎನ್ನಿಸಿ, ಸಿದ್ಧರಾಮೇಶ್ವರರ ಈ ವಚನ ವಾಕ್ಯದ ಬಗ್ಗೆ ಪುನರ್ ಚಿಂತನೆ ಅಗತ್ಯವೆನಿಸಿತು.

ಸ್ತ್ರೀಯರೇ ಇರಲಿ, ಪುರುಷರೇ ಇರಲಿ ಅವರಲ್ಲಿ ಮೂರು ವರ್ಗಗಳನ್ನು ಗುರುತಿಸಬಹುದು.

1. ದೈವೀಗುಣ ಪೂರಿತ. 2. ಮಾನವ ಗುಣಪೂರಿತ. 3. ಆಸುರೀ ಗುಣಪೂರಿತ

ಒಂದನೆಯದು ದೈವೀಕರಣಗೊಂಡ ವ್ಯಕ್ತಿತ್ವ, ಎರಡನೆಯದು, ಪ್ರಾಕೃತಿಕ ವ್ಯಕ್ತಿತ್ವ ಮೂರನೆಯದು ವಿಕೃತಗೊಂಡ ಆಸುರೀಕರಣಗೊಂಡ ವ್ಯಕ್ತಿತ್ವ, ತ್ರಿಗುಣಗಳ ಹಿನ್ನೆಲೆಯಲ್ಲಿ ಮಾತನಾಡುವುದಾದರೆ 1. ಸತ್ವ+ರಜೋಗುಣದಿಂದ ಕೂಡಿದುದು. 2.ರಜೋಗುಣದಿಂದ ಕೂಡಿದುದು, 3.ರಜ+ತಮ ಈ ಎರಡು ಗುಣಗಳಿಂದ ಕೂಡಿದುದು. ಇದನ್ನೇ ತಮ್ಮ ವಚನದಲ್ಲಿ ಸಿದ್ಧರಾಮೇಶ್ವರರು ವಿಶ್ಲೇಷಿಸಿದಂತೆ ಭಾಸವಾಗುತ್ತಿದೆ. ಪ್ರಕೃತಿಗುಣ ಸಹಜ ಧರ್ಮ. ಸ್ತ್ರೀ ಇರಲಿ, ಪುರುಷನಿರಲಿ, ಆ ಗುಣಧರ್ಮಕ್ಕೆ ಅನುಸಾರವಾಗಿ ಅವರು ನಡೆಯುತ್ತಾರೆ. ಅದು ಲೋಕಕ್ಕೆ ಸಹಜ

ನಡೆಯಾಗಿ ತೋರುತ್ತದೆ. ಇದಕ್ಕೆ ವಿಭಿನ್ನವಾದವು ಇನ್ನೆರಡು ; ಒಂದು ಊರ್ಧ್ವ ಮುಖಿ ಮತ್ತೊಂದು ಅಧೋಮುಖಿ. ಒಂದು ವಿಕಾಸಗೊಂಡುದು, ಇನ್ನೊಂದು ವಿಕಾರಗೊಂಡುದು. ನೂರಾರು ಉದಾಹರಣೆಗಳನ್ನು ಈ ದಿಶೆಯಲ್ಲಿ ಕೊಡಬಹುದು.

ಸ್ತ್ರೀ (ಅಥವಾ ಪುರುಷ) ಸಹಜ ಬಯಕೆಯಿಂದ ಮದುವೆ, ಮಕ್ಕಳು, ಗೃಹಕೃತ್ಯ ಹಿರಿಯರ ಪಾಲನೆ-ಪೋಷಣೆ ಹೀಗೆಲ್ಲ ತೊಡಗುವುದು ಸಹಜ ಸ್ಥಿತಿ. ಆಕೆಯೇ ಹೆಣ್ಣು (ಅಥವಾ ಪುರುಷ). ಹಾಗಲ್ಲದೆ ಗೃಹ ಕಲಹಗಳನ್ನುಂಟು ಮಾಡಿ, ಗುರುಹಿರಿಯರನ್ನೂ ಧಿಕ್ಕರಿಸಿ, ಕುಟುಂಬವನ್ನು ಒಡೆದು ಸ್ವಾರ್ಥಿಯಾಗಿ ಎಲ್ಲರ ಮನಶ್ಶಾಂತಿ ಹಾಳುಮಾಡುವ ವ್ಯಕ್ತಿ ರಾಕ್ಷಸಿ. ನೀಲಾಂಬಿಕೆ, ಅಕ್ಕನಾಗಲಾಂಬಿಕೆ, ಹೇಮರೆಡ್ಡಿ ಮಲ್ಲಮ್ಮನಂತೆ ದೈವೀಗುಣಗಳಿಂದ ಬಾಳುತ್ತ ಕುಟುಂಬದ ಸಾಮರಸ್ಯವನ್ನು ಕಾಪಾಡುತ್ತ ಅಧ್ಯಾತ್ಮಿಕ ಪಥದಲ್ಲಿ ನಡೆಯುವ ಮಹಿಳೆಯರೇ ಸಾಕ್ಷಾತ್ ಕಪಿಲಸಿದ್ಧಮಲ್ಲಿಕಾರ್ಜುನನಂತೆ ದಿವ್ಯಾಂಶರು. ಅಕ್ಕಮಹಾದೇವಿ ದಿವ್ಯಶಕ್ತಿಯಾದರೆ, ಮಾಯಾದೇವಿ ಪ್ರಾಕೃತಿಕ ಮಹಿಳೆ, ಕೈಕೇಯಿ ಆಸುರಿಶಕ್ತಿ. ಈ ದಿಶೆಯಲ್ಲಿ ಚಿಂತನೆ ಮಾಡಿದಾಗ ದ್ರೌಪತಿಯನ್ನು ಹೆಣ್ಣಿನ ವರ್ಗದಲ್ಲಿ ಸೇರಿಸಬೇಕೋ ಅಥವಾ ಆಸುರಿ ವರ್ಗದಲ್ಲಿ ಸೇರಿಸಬೇಕೋ ಎಂಬ ಸಮಸ್ಯೆ ಏಳುತ್ತದೆ. ಸಾಮಾನ್ಯ ಹೆಣ್ಣಾಗಿದ್ದರಿಂದಲೇ ಕಾಮ, ಕ್ರೋಧಾದಿಗಳಿಂದ ತಪ್ಪಾಗಿ ವಸ್ತ್ರಾಪಹರಣ ಮಾಡಿದ ದುಶ್ಯಾಸನ, ಮಾಡಿಸಿದ ದುರ್ಯೋಧನನ ವಧೆಗೆ ಪಣ ತೊಟ್ಟಳು. ಅದೇ ಅಕ್ಕಮಹಾದೇವಿ ತೊಂದರೆ ಕೊಟ್ಟ ಕೌಶಿಕನನ್ನು ಕ್ಷಮಿಸಿ, ಪರಿವರ್ತಿಸಿ, ಸಂತನನ್ನಾಗಿ ಮಾಡಿದಳು.

ಪಾರ್ವತಿಯ ವಿವಿಧ ಪರಿಕಲ್ಪನೆ ತೆಗೆದುಕೊಂಡರೆ ಉಮೆ ಅಥವಾ ಪಾರ್ವತಿ ಅತ್ಯಂತ ಸಾತ್ವಿಕ ಸ್ತ್ರೀ ಮುಖ, ದುರ್ಗಾ ರಜೋಗುಣ ಸೇರಿದ ಸ್ತ್ರೀ ಶಕ್ತಿ. ಕಾಳಿ ರಜೋಗುಣ ಅಧಿಕಗೊಂಡ ತಮೋಶಕ್ತಿ. ಮಾರಿ ಪೂರ್ಣ ತಮೋಗುಣ ಪ್ರಧಾನ ಸ್ತ್ರೀರೂಪ. ಜಾತಿ ಪ್ರಜ್ಞೆಯಿಂದ ಉದ್ರೇಕಗೊಂಡ ಮಾರಿ ತನ್ನ ಗಂಡನನ್ನು-ಆತನಿಂದ ಜನಿಸಿದ ನಾಲ್ಕು ಮಕ್ಕಳನ್ನು ಕೊಲ್ಲಿಸಲು ಹಿಂಜರಿಯಲಿಲ್ಲ. ಸ್ತ್ರೀಯ ಇಂಥ ವಿವಿಧ ರೂಪಗಳನ್ನು ಸಿದ್ಧರಾಮೇಶ್ವರರು ಹೆಣ್ಣು ಹೆಣ್ಣು, ಹೆಣ್ಣು ರಕ್ಕಸಿ, ಹೆಣ್ಣು ಕಪಿಲಸಿದ್ಧಮಲ್ಲಿಕಾರ್ಜುನ ಎಂದು ವಿಶ್ಲೇಷಿಸಿದ್ದಾರೆ ಎಂದು ಆಲೋಚಿಸಿದರೆ ಅವರ ಚಿಂತನಾ ಶಕ್ತಿಗೆ ಬೆರಗಾಗುತ್ತೇವೆ.

ತಮಿಳುನಾಡಿನ ಮಾಜಿ ಮುಖ್ಯ ಮಂತ್ರಿ(ಣಿ) ಜಯಲಲಿತಾರನ್ನು ನೋಡಿದಾಗ ಅವರ ಜೀವನವನ್ನು ಅಧ್ಯಯನ ಮಾಡುತ್ತ ಬಂದಾಗ ಅಲ್ಲಿ ಸ್ತ್ರೀತ್ವದ ದೈವೀಮುಖ ಅತ್ತಲಿರಲಿ, ಹೆಣ್ತನದ ಮಾರ್ದವತೆ-ಮಾನವೀಯತೆ ಸಹ ಕಾಣಬರದೆ ಆಸುರೀ ವೃತ್ತಿ ವಿಜೃಂಭಿಸುತ್ತದೆ. ಮಾಜಿ ಮುಖ್ಯಮಂತ್ರಿಯ ಮೇಲೆ ಸೇಡುತೀರಿಸಿಕೊಳ್ಳಲು ಹಿಡಿದ ಮಾರ್ಗ ನೋಡಿದರೆ ಸ್ತ್ರೀಯ ಆಸುರೀ ಮುಖದ ಪರಾಕಾಷ್ಠೆಯನ್ನು ನೋಡುತ್ತೇವೆ. ಒಂದು ವೇಳೆ ಕರುಣಾನಿಧಿಯವರ ತಪ್ಪು ಸಾಬೀತೇ ಆಗಿದ್ದರೂ ಸೌಜನ್ಯದ ವರ್ತನೆ ತೋರಿ ಬಹುದೊಡ್ಡ ಸಾತ್ವಿಕ ಮುಖವನ್ನು ಅಭಿವ್ಯಕ್ತಗೊಳಿಸಲು ಆಯಮ್ಮನಿಗೆ ಸುವರ್ಣಾವಕಾಶವಿದ್ದಿತು.

ಶರಣರು ವಚನ ಸಾಹಿತ್ಯ ರಕ್ಷಣೆಗಾಗಿ ಬಿಜ್ಜಳನ ಸೈನ್ಯದೊಡನೆ ಸೆಣಸುತ್ತಾರೆ. ಕಾದರವಳ್ಳಿಯ ಹೋರಾಟದಲ್ಲಿ ಕಷ್ಟನಷ್ಟ ಅನುಭವಿಸುತ್ತಾರೆ. ಮುರುಗೋಡದಲ್ಲಿ ನಡೆದ

ಹೋರಾಟದಲ್ಲಿ ಶರಣರಿಗೆ ಜಯವು ಲಭಿಸುತ್ತದೆ. ಆಗ ಬಿಜ್ಜಳನ ಸೈನ್ಯದ ನೇತೃತ್ವ ವಹಿಸಿದ ಅಳಿಯ ಬಿಜ್ಜಳನು ಸೆರೆಸಿಕ್ಕುತ್ತಾನೆ. ಅನೇಕ ಮುಗ್ಧ ಶರಣರ ವಧೆಗೆ ಕಾರಣನಾದ ಅಳಿಯ ಬಿಜ್ಜಳನನ್ನು ಹಿಡಿದು ತಂದು ವೀರ ಶರಣೆ ಅಕ್ಕನಾಗಲಾಂಬಿಕೆಯ ಮುಂದೆ ಹೆಡೆಮುರಿಗಟ್ಟಿ ನಿಲ್ಲಿಸುತ್ತಾರೆ. ಅವನನ್ನು ಕೊಲ್ಲಿಸುವ ಅವಕಾಶ ಇದ್ದರೂ ಅಕ್ಕನಾಗಲಾಂಬಿಕೆ ಹೀಗೆ ಹೇಳುತ್ತಾಳೆ. "ನಿಷ್ಪಾಪಿಗಳು, ಮುಗ್ಧರೂ, ಪವಿತ್ರಾತ್ಮರೂ ಆದ ಅನೇಕ ಶರಣರ ವಧೆಗೆ ನೀನು ಕಾರಣನಾದೆ. 'ನಿನ್ನ ಮೇಲೆ ಸೇಡುತೀರಿಸಿಕೊಂಡರೆ ಪಾಪವೇನೂ ಬರದು. ಆದರೆ ನಿನ್ನನ್ನು ಕೊಂದರೆ ಲಿಂಗೈಕ್ಯರಾದ ಶರಣರ ಪ್ರಾಣ ಮರಳಿ ಬರದು. ಆದ್ದರಿಂದ ಏಕೆ ಕೊಲ್ಲೋಣ ? ಮುಂದಾದರೂ ವಿವೇಕಿಯಾಗಿ ಬಾಳು" ಎಂದು ಕ್ಷಮಿಸಿ, ಬಿಡಿಸಿ ಕಳಿಸುತ್ತಾಳೆ. ಎಂಥಾ ಉದಾತ್ತ ಗುಣ ! ತಪ್ಪಿತಸ್ಥರನ್ನು ಕ್ಷಮಿಸುವುದು ಮಹಾತ್ಮರ ಗುಣ. ನಿರಪರಾಧಿಗಳನ್ನು ಶಿಕ್ಷಿಸುವುದು ರಾಕ್ಷಸಿಗುಣ.

ಕರುಣಾನಿಧಿ ನಿಜಕ್ಕೂ ತಪ್ಪು ಮಾಡಿ, ಭ್ರಷ್ಟಾಚಾರ ಎಸಗಿದ್ದರೆ ನ್ಯಾಯಾಲಯವು ತೀರ್ಪು ಕೊಟ್ಟು ಶಿಕ್ಷಿಸುತ್ತಿತ್ತು. ಆದರೆ ಕ್ಷುದ್ರ ರಾಜಕೀಯ ಮಾಡಿ ಜಯ ಲಲಿತಾ ಸೇಡು ತೀರಿಸಿಕೊಂಡ ಪರಿ ನೋಡಿದರೆ ಮನೋವಿಶ್ಲೇಷಕರಾದ ಸಿದ್ಧರಾಮೇಶ್ವರರು ಹೆಣ್ಣು ಹೆಣ್ಣು, ಹೆಣ್ಣು ರಾಕ್ಷಸಿಯೂ ಅಹುದು ಎಂದು ವರ್ಗೀಕರಿಸಿರುವುದರಲ್ಲಿ ಉತ್ಪ್ರೇಕ್ಷೆ ಏನಿದೆ ?

ವಚನ ಕಿರಣ

ಅಳಿವು- ಉಳಿವು

'ಬಸವಣ್ಣನವರು' ಜನಿಸದಿದ್ದರೆ
ನಿಜಧರ್ಮದ ಮರ್ಮ ತಿಳಿಯುತ್ತಿರಲಿಲ್ಲ ॥
ಫ.ಗು.ಹಳಕಟ್ಟಿ ಬರದಿದ್ದರೆ
ವಚನ ವಾಙ್ಮಯ ಸಿಗುತ್ತಿರಲಿಲ್ಲ ॥
'ಅಪ್ಪಾಜಿ' ಬರದಿದ್ದರೆ ಬಸವ
ಧರ್ಮದ ಪ್ರಚಾರ ಆಗುತ್ತಿರಲಿಲ್ಲ ॥
'ಮಾತಾಜಿ' ಧೈರ್ಯ ತಾಳದಿದ್ದರೆ
ವಚನ ಸಾಹಿತ್ಯ ಪರಿಶುದ್ಧವಾಗುತ್ತಿರಲಿಲ್ಲ ॥
ಲೀಲಾವಿಶೇಷ ಲಿಂಗದೇವನ ಮಹಿಮೆಯ
ಅರಿವು ಜಗತ್ತಿಗೆ ಆಗುತ್ತಿರಲಿಲ್ಲ.

- ಸೋದರಿ ಮಹಾದೇವಿ, ಧಾರವಾಡ

ವಚನ ಪ್ರಸಾದ

ಸುರರ ಬೇಡಿದಡಿಲ್ಲ, ನರರ ಬೇಡಿದಡಿಲ್ಲ
ಬರಿದೆ ಧೃತಿಗೆಡಬೇಡ ಮನವೆ !
ಆರನಾದಡೆಯೂ ಬೇಡಿ ಬೇಡಿ
ಬರಿದೆ ಧೃತಿಗೆಡಬೇಡ ಮನವೆ !
ಲಿಂಗದೇವನನಲ್ಲದೆ ಆರ ಬೇಡಿದಡಿಲ್ಲ ಮನವೆ

-ವಿಶ್ವಗುರು ಬಸವಣ್ಣನವರು

ಹಂಚಿದವರು : ಶರಣೆ. ಬಸವ ಚಂದ್ರಿಕೆ

ಕಾಯಕಗಳ ಮಾಡಿದರೆ ಭವ ಹರಿಯದು
ದಾಸೋಹ ಮಾಡಿದರೆ ಜ್ಞಾನವು ಬರದು
ಪೂಜೆ ಮಾಡಿದರೆ ಬಡತನ ಹಿಂಗದು
ಈ ತ್ರಿವಿಧವ ಮೇಳೈಸಿಕೊಂಡು ನಡೆದರೆ
ಇದರಲ್ಲಿಪ್ಪುದು ಲೀಲಾವಿಶೇಷ
ಲಿಂಗದೇವನ ಪರಮಾನಂದ.

ಕುಹಕಿಗಳ ಮಾತಿಗೆ ಕಿವಿಗೊಡಲಿಲ್ಲ
ಆಡಿಕೊಳ್ಳುವವರ ಮಾತು ಆಲಿಸಲಿಲ್ಲ
ಸಮಾಜೋದ್ಧಾರದ ಕಾರ್ಯ ನೀವ್ ಬಿಡಲಿಲ್ಲ
ವಿರೋಧಿಗಳ ಕಾಟಕ್ಕೆ ಧೈರ್ಯಗೆಡಲಿಲ್ಲ
ಲಿಂಗದೇವನ ಮಹಿಮೆಯ ಸಾರುವುದು ನಿಲ್ಲಿಸಲ್ಲಿಲ್ಲ
ಮಾತಾಜಿ, ನಿಮ್ಮ ಛಲ ಆರಿಗೂ ಬರದೆಂದ
ನಮ್ಮ ಲೀಲಾವಿಶೇಷ ಲಿಂಗದೇವ.

- ಸೋದರಿ ಮಹಾದೇವಿ, ಧಾರವಾಡ

ವಚನ ಪ್ರಸಾದ

ಆಸೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ
ಹೊನ್ನು ಹೆಣ್ಣು ಮಣ್ಣಿಂಗೆ ಸತ್ತುದು ಕೋಟಿ
ಗುಹೇಶ್ವರಾ, ನಿಮಗಾಗಿ ಸತ್ತವರಾರನೂ ಕಾಣೆ.

-ಅಲ್ಲಮ ಪ್ರಭುದೇವರು

ಕೊಡುಗೆ ನೀಡಿದವರು : ಬಸವ ಜ್ಯೋತಿ

☹ಸಮಸ್ಯೆ ? - ಸಮಾಧಾನ !☺

✉ಮಲ್ಲಿಕಾರ್ಜುನ, ರಾಷ್ಟ್ರೀಯ ಬಸವದಳ, ಬಳ್ಳಾರಿ. - ಲಿಂಗದೇವ ಪದದ ಮಹತ್ವ ಅರ್ಥವಾಗಿ ಬಹಳ ಸಂತೋಷವಾಗುತ್ತಿದೆ. ಲಿಂಗದೇವ ವಚನಾಂಕಿತದೊಡನೆ ಧ್ವನಿ ಮುದ್ರಣಗೊಂಡ ವಚನ ಪರುಷ, ಬಸವ ವಚನ ರಶ್ಮಿ, ಬಸವ ವಚನ ಸೌರಭ ಅಪಾರ ಆನಂದಕೊಡುತ್ತವೆ. ಒಂದೆರಡು ಕೊರಗು ಉಳಿದಿವೆ. (1) ಪ್ರಾರ್ಥನೆಯಲ್ಲಿ ಸಾಂಬ ಸದಾಶಿವ ಭಜನೆ ಮತ್ತು ಜಯಘೋಷದಲ್ಲಿ ಹರಹರ ಮಹಾದೇವ ಇವನ್ನು ಬದಲಾಯಿಸಬಾರದೆ ?

★ ಓರ್ವ ವ್ಯಕ್ತಿಯ ಹೆಸರು ಬರೆಯುವಾಗ ಏನೇನು ಬರುತ್ತದೆ ? 1. ವ್ಯಕ್ತಿಯ ಹೆಸರು 2. ತಂದೆಯ ಹೆಸರು 3. ಮನೆತನದ ಹೆಸರು ಅಥವಾ ಅಡ್ಡ ಹೆಸರು.ಅದೇರೀತಿ ನಮ್ಮ ಧರ್ಮದ ಅಪ್ಪ ವಿಶ್ವಗುರು ಬಸವಣ್ಣನವರು. ನಾವು ಒಂದು ಧಾರ್ಮಿಕ ಪರಂಪರೆಯ ಎಳೆಯಾಗಿದ್ದೇವೆ. ಈ ದೇಶದಲ್ಲಿ ಪ್ರಮುಖವಾದ ಎರಡು ಪರಂಪರೆಗಳು ಬಂದಿವೆ. 1. ಶೈವ ಮತ್ತು 2. ವೈಷ್ಣವ, ಅಥವಾ ಆಗಮಿಕ ಮತ್ತು ವೈದಿಕ ಎಂದೂ ಕರೆಯುಬಹುದು. ನಾವು ಧರಿಸುವ ವಿಭೂತಿ, ರುದ್ರಾಕ್ಷಿ ಮಾಡುವ ಅಷ್ಟವಿಧಾರ್ಚನೆ ಆಗಮಿಕ, ಶೈವ ಪರಂಪರೆಯ ಅಂಶಗಳು. ಸಿಖ್‌ಧರ್ಮವು ಇಂದು ಸ್ವತಂತ್ರ ಧರ್ಮವೇ ಆಗಿದ್ದರೂ ಅದು ವೈಷ್ಣವ ಸಂಸ್ಕೃತಿಯಿಂದ ಕೂಡಿದೆ. ಹೆಸರಿಡುವುದರಲ್ಲೇ ನೋಡಿ ಸಾಮಾನ್ಯವಾಗಿ ಶರಣರ ಹೆಸರನ್ನು ಇಲ್ಲವೇ ಶೈವ ಹೆಸರುಗಳನ್ನು ಲಿಂಗಾಯತರು ಇಡುತ್ತಾರೆ. ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳು ಸ್ವತಂತ್ರ ಧರ್ಮಗಳಾದರೂ ಆ ಜನಾಂಗದ ಮೂಲಪುರುಷರು ಆಡಮ್ ಮತ್ತು ಈವ್ ಎಂದು ಹೇಳುತ್ತಾರೆ. ಇದನ್ನು ಯಹೂದಿಗಳು, ಕ್ರೈಸ್ತರು, ಮುಸಲೀಮರು ಮೂವರೂ ಒಪ್ಪುತ್ತಾರೆ. ಅದೇ ರೀತಿ ಭಾರತೀಯ ಜನಾಂಗದ ಮೂಲಪುರುಷರು ಶಿವ - ಪಾರ್ವತಿಯರು. ಧರ್ಮವು ಹುಟ್ಟುವ ಪೂರ್ವದಲ್ಲೇ ಜನಾಂಗಗಳು ಹುಟ್ಟಿರುತ್ತವೆ. ನಾವು ನಿರಾಕಾರ ಲಿಂಗದೇವನ ಪೂಜಕರಾದರೂ ಶಿವನನ್ನು ಸೃಷ್ಟಿಕರ್ತನೆನ್ನದೆ ಐತಿಹಾಸಿಕ ಮಹಾಪುರುಷ ಎಂದರೆ ತಾತ್ತ್ವಿಕ ಚ್ಯುತಿ ಬರದು, ಅದನ್ನೇ ಧರ್ಮಪಿತ ಬಸವಣ್ಣನವರು ಮಾರ್ಮಿಕವಾಗಿ ಹೀಗೆ ಹೇಳಿದ್ದಾರೆ.

ಹರನು ಮೂಲಿಗನಾಗಿ, ಪುರಾತರೊಳಗಾಗಿ
ಬಳಿ ಬಳಿಯಲು ಬಂದ ಮಾದಾರನ ಮಗ ನಾನಯ್ಯಾ.
ಕಳಿದ ಹೊಲೆಯನೆಮ್ಮಯ್ಯ ಜಾತಿಸೂತಕ ಮಾದಾರನ ಮಗ ನಾನಯ್ಯಾ.
ಪನ್ನಗಭೂಷಣ ಕೂಡಲಸಂಗಯ್ಯಾ. ಚನ್ನಯ್ಯನೆನ್ನಮುತ್ತಯ್ಯನಜ್ಜನಪ್ಪನಯ್ಯಾ

-ಬ.ವ.ದೀ.349

ಭಾರತೀಯ ಪರಂಪರೆಯ ಮೂಲ ಪುರುಷ 'ಹರ', ಇದೇ ಮಾರ್ಗದಲ್ಲಿ ನಂತರ ಬಂದುದು 'ಪುರಾತ'ರ (ಪುರಾತನರ ಅಲ್ಲ) ಅಂದರೆ ಶರಣರ ಪರಂಪರೆ. " ಹರಹರ ಮಹಾದೇವ"- ಇದನ್ನು ಲಕ್ಷ್ಯಾರ್ಥದಲ್ಲಿ ತೆಗೆದುಕೊಂಡರೆ ಹರ ಎಂದರೆ ಭವವನ್ನು, ಕರ್ಮಕ್ಲೇಶವನ್ನು ಹರಿಯುವ, ಮಹಾದೇವ -Great God. ಇನ್ನು ಪರಂಪರೆ (Heritage)

ಯ ದೃಷ್ಟಿಯಲ್ಲಿ ತೆಗೆದುಕೊಂಡರೆ " ಹರಹರ ಮಹಾದೇವ " ರಾಷ್ಟ್ರೀಯ ಘೋಷಣೆಯಾಗಿದೆ. ಯುದ್ಧಗಳಲ್ಲಿ ಎಲ್ಲರೂ ಭೇದಭಾವವಿಲ್ಲದೆ ಈ ಘೋಷಣೆ ಮಾಡುತ್ತಿದ್ದರು. ನಾವು ಭಾರತವನ್ನು ಜನ್ಮಭೂಮಿ ಮತ್ತು ಧರ್ಮಭೂಮಿಯನ್ನಾಗಿ ಹೊಂದಿರುವವರು. ಆದ್ದರಿಂದಲೇ ಈ ಜಯಘೋಷವನ್ನು ಉದ್ದೇಶಪೂರ್ವಕವಾಗಿ ಉಳಿಸಿಕೊಳ್ಳಲಾಗಿದೆ. ಜಯಗುರು ಬಸವೇಶ - ಲಿಂಗಾಯತ ಧರ್ಮಕ್ಕೆ ಸಂಬಂಧ ; ಹರಹರ ಮಹಾದೇವ - ಭಾರತೀಯ ರಾಷ್ಟ್ರೀಯ ಪರಂಪರೆಗೆ ಸಂಬಂಧಿಸಿದ್ದು.

✉ ದೇವಿಕಾ ಶರಣಪ್ಪ, ಬೆಂಗಳೂರು. - ಬೆಂಗಳೂರಿನಲ್ಲಿ ದಿನಾಂಕ 2-9-2001 ನಡೆದ ವೀರಶೈವ ಧರ್ಮ ಜಾಗೃತಿ ಸಮ್ಮೇಳನದಲ್ಲಿ ಡಾ॥ ವೃಷಭೇಂದ್ರ ಸ್ವಾಮಿ ಮಾತನಾಡಿ, " ಲಿಂಗಾಯತ ಮತ್ತು ವೀರಶೈವ ಧರ್ಮ ಬೇರೆ ಎಂದು ಮಾತನಾಡುವವರಿಗೆ ಸಾಮಾಜಿಕ ಬಹಿಷ್ಕಾರ ಹಾಕಬೇಕು." ಎಂದು ಹೇಳಿದ್ದಾರೆ. (ಪ್ರಜಾವಾಣಿ 3-9-2001 ಸಂಚಿಕೆ, ಪುಟ 3) ಈ ರೀತಿ ಪ್ರತಿಪಾದನೆ ಮಾಡುತ್ತಿರುವ ನೀವು ಮತ್ತು ಆಚರಣೆ ಮಾಡುತ್ತಿರುವ ನಾವು ಎಲ್ಲರೂ ವೀರಶೈವ ಮಹಾಸಭೆಯಿಂದ ಬಹಿಷ್ಕಾರಕ್ಕೆ ಒಳಗಾಗಬೇಕಾಗುತ್ತದೆಯಲ್ಲವೆ ?

★ ವೀರಶೈವರ ವಿಶೇಷ ಲಕ್ಷಣವೇ ಮತಾಂಧತೆ ; ಶ್ರೀಶೈಲ ಪೀಠದ ಸಂಸ್ಥಾಪಕ ಮಲ್ಲಿಕಾರ್ಜುನ ಪಂಡಿತಾರಾಧ್ಯರು, ಬೌದ್ಧಾಚಾರ್ಯನೋರ್ವನ ಮೇಲೆ ಮತ್ತು ಹರಿನಾಮ ಸ್ಮರಣೆ ಮಾಡಿದ ವೈಷ್ಣವನೋರ್ವನ ಮೇಲೆ ಹಲ್ಲೆಮಾಡಿಸಿ ರಾಜನ ಕೋಪಕ್ಕೆ ತುತ್ತಾದರು. ಹೀಗಾಗಿ ವೀರಶೈವ ಮಹಾಸಭೆಗೆ ಗೊತ್ತಿರುವುದು ಒಂದೇ, ಬಹಿಷ್ಕಾರ ! ಹಿಂದೆ ಡಾ॥ ಚಿದಾನಂದ ಮೂರ್ತಿಗಳಿಗೂ ಹಾಕಿದ್ದರಲ್ಲವೆ ? ಅದು ಸರಿ, ಮನೆಯ ಒಳಗಿದ್ದವರನ್ನು ಹೊರಗೆ ಕಳಿಸಬಹುದು. ತಾವೇ ಮನೆಯಿಂದಲ್ಪಟ್ಟವರು ಅದೆಂತು ಮನೆಯಲ್ಲಿದ್ದವರಿಗೆ ಬಹಿಷ್ಕಾರ ಹಾಕುತ್ತಾರೆ ? 12 ನೆಯ ಶತಮಾನದಲ್ಲಿ ಧರ್ಮಪಿತ ಬಸವಣ್ಣನವರು ಕೊಟ್ಟ ಲಿಂಗಾಯತ ಧರ್ಮ ಎಂಬ ಮನೆಯೊಳಕ್ಕೆ ಬಂದು ಸೇರಿಕೊಂಡು ನಿರಂತರ ಕಿರುಕುಳ ಕೊಡುತ್ತಿದ್ದ ವೀರಶೈವರನ್ನು, " ನೀವು ಪ್ರತ್ಯೇಕ ಮತ ಎಂದು ಹೇಳಿಕೊಂಡು ಹೊರಗಿರಿ. ಒಳಗಿದ್ದು ಯಾಕೆ ತ್ರಾಸು ಕೊಡುತ್ತೀರಿ ? ಎಂದು ನಾವು ಅವರಿಗೆ (ಬಹಿಷ್ಕಾರ ಹಾಕದೆ) ಗೌರವಯುತವಾಗಿಯೇ ಬೀಳ್ಕೊಟ್ಟದ್ದೇವೆ ತಾನೆ ? ಅಂದಾಗ ಪರಧರ್ಮೀಯರಾದ ಲಿಂಗಾಯತರಿಗೆ ಅವರು ಹೇಗೆ ಬಹಿಷ್ಕಾರ ಹಾಕಬಲ್ಲರು ?

ಗಾಬರಿಗೊಂಡ ವೀರಶೈವವಾದಿಗಳು ಸ್ವತಂತ್ರವಾಗಿ ಧರ್ಮದ ಸ್ಥಾನವನ್ನು ಪಡೆಯಲು ಅಸಮರ್ಥರಾಗಿ ಲಿಂಗಾಯತ ಧರ್ಮಕ್ಕೆ ತಳುಕು ಹಾಕಿಕೊಳ್ಳುವ ತಂತ್ರ ಮಾಡುತ್ತ ಬಂದಿದ್ದಾರೆ. ಓರ್ವ ತರ್ಕ ಶಾಸ್ತ್ರ ಪಂಡಿತನಿಗೆ ಒಂದು ಸಂದೇಹ ಬಂದಿತಂತೆ "ಬಟ್ಟಲ ಮೇಲೆ ತುಪ್ಪ ಆಧಾರಿತವಾಗಿದೆಯೊ ? ಅಥವಾ ತುಪ್ಪದ ಮೇಲೆ ಬಟ್ಟಲು ಆಧಾರಿತವಾಗಿದೆಯೊ ?" ಆಗ ಪರೀಕ್ಷಿಸಲು ಬಟ್ಟಲನ್ನು ತಲೆ ಕೆಳಗಾಗಿ ಹಿಡಿದನಂತೆ. ತುಪ್ಪವು ನೆಲಕ್ಕೆ ಬಿತ್ತಂತೆ. ತುಪ್ಪದ ಮೇಲೆ ಬಟ್ಟಲು ನಿಂತಿದ್ದರೆ ಬೀಳಬಾರದಲ್ಲವೆ ?

ಲಿಂಗಾಯತ ಧರ್ಮದಲ್ಲಿ ಬಂದು ಸೇರಿದ ವೀರಶೈವರು ತಲೆ ಇಡಲು ಪ್ರವೇಶ ಕೇಳಿದ ಒಂಟೆ ಇಡೀ ಡೇರೆಯನ್ನೇ ಆಕ್ರಮಿಸಿ ಎತ್ತಿ ಒಗೆದಂತೆ, ಆಶ್ರಯ ಕೊಟ್ಟ ಲಿಂಗಾಯತ ಧರ್ಮವನ್ನು

ವೀರಶೈವವು ನುಂಗಲು ಹವಣಿಸಿತು. ಇದನ್ನರಿತ ನಾವು ಲಿಂಗಾಯತದ (ಬಟ್ಟಲಿನ) ಮೇಲೆ ತುಪ್ಪ (ವೀರಶೈವ) ನಿಂತಿದೆಯೋ, ತುಪ್ಪದ ಮೇಲೆ ಬಟ್ಟಲು ನಿಂತಿದೆಯೋ ಎಂದು ಪರೀಕ್ಷಿಸಲು ಯತ್ನಿಸುತ್ತಿರುವಾಗ ಈಗ ಸತ್ಯ ಹೊರಬರುತ್ತಿದೆ. ವೀರಶೈವದ ಆಸರೆ ಇಲ್ಲದೆ ವಚನ ಸಾಹಿತ್ಯ ಆಧಾರಿತ ಲಿಂಗಾಯತ ಧರ್ಮವು ಸ್ವತಂತ್ರವಾಗಿ ಬದುಕಬಲ್ಲುದು ; ಲಿಂಗಾಯತದ ಆಸರೆ ಇಲ್ಲದೆ ಅತಂತ್ರವಾಗಿರುವ ವೀರಶೈವ ಪಂಥವು ಬದುಕಲಾರದು ; ಅದಕ್ಕಾಗಿಯೇ ವೀರಶೈವ ಮಹಾಸಭೆ ಬಹಳ ಕಳವಳಗೊಂಡಿದೆ.

✉ ಮಹಾದೇವ ಪ್ರಸಾದ, ಬೆಂಗಳೂರು.- ಲಿಂಗಾಯತ ಧರ್ಮ ಸ್ವತಂತ್ರ ಧರ್ಮ ಎಂಬ ಪ್ರಚಾರ ಅಧಿಕವಾಗುತ್ತಿದೆ. ಹೀಗಾದರೆ ಇನ್ನು 25 ವರ್ಷಗಳಲ್ಲಿ ವೀರಶೈವದ ಅಸ್ತಿತ್ವ ಅಳಿದು ಹೋಗುತ್ತದೆ ಎಂದು ಶ್ರೀ ಭೀಮಣ್ಣ ಖಂಡ್ರೆ ಬಹಳ ಕಳವಳ ವ್ಯಕ್ತಪಡಿಸಿದ್ದಾರೆ. ಮುಂಜಾಗ್ರತೆ ವಹಿಸಲು ಕರೆ ನೀಡಿದ್ದಾರೆ, ಈ ಬಗ್ಗೆ ನಿಮ್ಮ ಅಭಿಪ್ರಾಯ ?

★ ಅಂತೂ ಶ್ರೀ ಭೀಮಣ್ಣ ಖಂಡ್ರೆ ವಾಸ್ತವ ಸಂಗತಿಯನ್ನು ಅರಿತುಕೊಂಡು ಒಳ್ಳೆಯ ಭವಿಷ್ಯ ನುಡಿದಿದ್ದಾರೆ. ವೀರಶೈವ ಪದವು ಸಾಮಾಜಿಕವಾಗಿ ಉಳಿಯದೆ ಇದ್ದರೂ ಗ್ರಂಥಸ್ತವಾಗಿ ಉಳಿದಿರುವ ಕಾರಣ ಖಂಡ್ರೆಯವರು ಕಳವಳ ಪಡುವ ಕಾರಣವಿಲ್ಲ. ಅಲ್ಲದೆ ಲಿಂಗಾಯತ/ವೀರಶೈವ ನಾಮದ ಬಲದಿಂದ ಸಾಕಷ್ಟು ಸದಸ್ಯತ್ವ ಸಂಗ್ರಹಮಾಡಿ ಆರ್ಥಿಕ ಪರಿಸ್ಥಿತಿಯ ದೃಷ್ಟಿಯಿಂದ ಮಹಾಸಭೆಯನ್ನು ಗಟ್ಟಿಗೊಳಿಸಿಕೊಂಡಿದ್ದಾರೆ. ಇನ್ನೇಕೆ ಕಳವಳ ? ಸಮಾಜದ ಹಿತದೃಷ್ಟಿಯಿಂದ ಲಿಂಗಾಯತಕ್ಕೇ ಭವ್ಯ ಭವಿಷ್ಯ !

✉ ಬಸವರಾಜ ಹೊರಟ್ಟಿ, ಕಾರ್ಯದರ್ಶಿ, ರಾ.ಬ.ದಳ, ಶೇಗುಣಸಿ.- 1. ಮುಕ್ತಿ ಎಂದರೇನು, ಯಾರಿಗೆ ಸಿಗುತ್ತದೆ ?

- ಮುಕ್ತಿ ಎಂದರೆ ಬಿಡುಗಡೆ ; ಭವ ಬಂಧನದಿಂದ ಬಿಡುಗಡೆ ; ನಂತರ ಉರಿಯುಂಡ ಕರ್ಪೂರದಂತೆ ದೇವನಲ್ಲಿ ಒಂದಾಗುವಿಕೆ. ಸಾಧನೆ ಮಾಡುವ ಎಲ್ಲರಿಗೂ ಸಿಗುತ್ತದೆ. ಎಲ್ಲರಲ್ಲೂ ಆತ್ಮವಿರುವ ಕಾರಣ ಎಲ್ಲರಿಗೂ ಇದು ಲಭ್ಯ.

✉ 2. ಕಲ್ಯಾಣ ರಾಷ್ಟ್ರ ಎಂದರೇನು ?

★ ಎಲ್ಲರ ಕಲ್ಯಾಣ - welfare ಸಾಧ್ಯವಾಗುವಂತೆ, ಜಾತಿ ವರ್ಣವರ್ಗ ರಹಿತ ಧರ್ಮ ಸಹಿತ ಸಮಾಜವನ್ನು ಕಟ್ಟುವುದೇ ಕಲ್ಯಾಣರಾಷ್ಟ್ರದ ಪರಿಕಲ್ಪನೆಯ ಹಿಂದಿನ ಉದ್ದೇಶ. ಸ್ವಾತಂತ್ರ್ಯ, ಸಮಾನತೆ, ಸೋದರತ್ವವನ್ನು ಎತ್ತಿ ಹಿಡಿಯುವ ರಾಷ್ಟ್ರವೇ ಕಲ್ಯಾಣರಾಷ್ಟ್ರ.

✉ 3. ದೀಕ್ಷೆಯನ್ನು ಎರಡು ಸಲ ಪಡೆಯಲು ಬರುತ್ತದೆಯೆ ?

★ ಹುಟ್ಟಿದಾಗ ಮಗುವಿಗೆ ಮಾಡಿದ್ದು ಲಿಂಗಧಾರಣೆ ; ಬುದ್ಧಿ ಬಲಿತ ಮೇಲೆ ಸ್ವಯಂ ಪ್ರೇರಣೆಯಿಂದ ಗುರುವಿನ ಮೂಲಕ ಮಂತ್ರೋಪದೇಶ ಪಡೆದು ಪೂಜಾನಿಷ್ಠೆ ಬೆಳೆಸಿಕೊಳ್ಳುವುದು ದೀಕ್ಷೆ. ಸಾಮಾನ್ಯವಾಗಿ ಬಹುಪಾಲು ಲಿಂಗಾಯತರು ಹುಟ್ಟಿದಾಗ ಮಗುವಿಗೆ ಲಿಂಗಧಾರಣೆ ಮಾಡುತ್ತಾರೆ, ದೀಕ್ಷೆ ಮಾಡಿಸಿರುವುದೇ ಇಲ್ಲ.

ಒಂದು ವೇಳೆ ದೀಕ್ಷೆ ಮಾಡಿಸಿದ್ದರೂ ಆ ಗುರುವು ಸರಿಯಾಗಿ ಬೋಧೆ ಮಾಡಿರದೇ ಇದ್ದರೆ

ಸುಜ್ಞಾನಿಯೂ ಸದಾಚಾರಿಯೂ ಆದ ಗುರುವು ಸಿಕ್ಕಾಗ ಗುರುವಿನಿಂದ ಇಷ್ಟಲಿಂಗಕ್ಕೆ ಚಿತ್ಕಳೆ ತುಂಬಿಸಿಕೊಂಡು ದೀಕ್ಷೆ ಮಾಡಿಸಿಕೊಳ್ಳುವುದು, ಮಂತ್ರೋಪದೇಶ ಮಾಡಿಸಿಕೊಳ್ಳುವುದು ಒಳ್ಳೆಯದು.

✉ ಮಲ್ಲರೆಡ್ಡೆಪ್ಪ ಪಾಟೀಲ್, ಹಟ್ಟಿ. - ಅಯ್ಯಾಚಾರ ಎಂದು ಮಾಡಿಸುವ ಪದ್ಧತಿ ಬಸವ ತತ್ತ್ವಕ್ಕೆ ಸಮ್ಮತವೆ ? ಏನೂ ಅರಿಯದ, ಅಯ್ಯನವರ ಮಕ್ಕಳಿಗೆ ತಲೆಬೋಳಿಸಿ, ಕಾವಿಯನ್ನು ತೊಡಿಸಿ, ಭಿಕ್ಷೆ ಬೇಡಲು ಜೋಳಿಗೆ ಹಾಕಿ ಕಳಿಸುವರು. ಈ ಬಗ್ಗೆ ತಮ್ಮ ಅಭಿಪ್ರಾಯ ?

★ ವಚನ ಸಾಹಿತ್ಯೋಕ್ತ ಲಿಂಗಾಯತ ಧರ್ಮದಲ್ಲಿ ಅಯ್ಯಾಚಾರ ಎಂಬುದು ಇಲ್ಲವೇ ಇಲ್ಲ. ಹುಟ್ಟಿದಾಗ ಮಗುವಿಗೆ ಲಿಂಗಧಾರಣೆ ಆಗಿದ್ದು ಬುದ್ಧಿ ಬಲಿತಾಗ ಸ್ವಯಂ ಪ್ರೇರಣೆಯಿಂದ ಇಷ್ಟಲಿಂಗ ದೀಕ್ಷೆ ಪಡೆಯಬೇಕು. ಇದು ಎಲ್ಲರಿಗೂ ಲಭ್ಯ. ಇದು ಧರ್ಮದೀಕ್ಷೆಯೇ ಹೊರತು ಜಂಗಮದೀಕ್ಷೆಯಲ್ಲ. ಇಷ್ಟಲಿಂಗ ದೀಕ್ಷೆಗಾಗಿ ತಲೆಬೋಳಿಸುವ ಅಗತ್ಯವಿಲ್ಲ. ಇಷ್ಟಲಿಂಗ ದೀಕ್ಷೆಯನ್ನು ಹೆಣ್ಣು ಮಕ್ಕಳು ಸಹ ಪಡೆಯಬೇಕು. ಅಂದಾಗ ಅವರಿಗೆ ತಲೆ ಬೋಳಿಸಲು ಸಾಧ್ಯವೆ ? ಜಂಗಮ ದೀಕ್ಷೆ ಪಡೆಯುವಾಗ ತಲೆ ಕೂದಲು ತೆಗೆಸಬಹುದು. ಆದರೆ ಜಂಗಮ ದೀಕ್ಷೆಯನ್ನು ಏನೂ ಅರಿಯದ ಮಕ್ಕಳಿಗೆ ಕೊಡಬಾರದು. ತಿಳುವಳಿಕೆ ಬಂದ ಮೇಲೆ ಪ್ರೌಢರಾದವರೇ ವೈರಾಗ್ಯದ ಪ್ರೇರಣೆ ಹೊಂದಿ ಜಂಗಮ ದೀಕ್ಷೆ ಪಡೆದು ನಂತರ ಮನೋನಿಯಂತ್ರಣ ಮಾಡಲಾರದೆ ಒದ್ದಾಡುತ್ತಾರೆ. ಹೀಗಿದ್ದಾಗ ಏನೂ ಜ್ಞಾನವಿಲ್ಲದ ಮಕ್ಕಳಿಗೆ ಜಂಗಮ ದೀಕ್ಷೆ ಕೊಡುವುದು ದೊಡ್ಡ ತಪ್ಪು. ಅದು ಧರ್ಮ ಪ್ರಚಾರದ ದೀಕ್ಷೆ. ಇದನ್ನು ಬಿಟ್ಟು ಭಿಕ್ಷೆ ಬೇಡಲು ಅನುಮತಿ ಕೊಡುವಂತೆ ಮಕ್ಕಳಿಗೆ ತಲೆಬೋಳಿಸಿ, ಜೋಳಿಗೆ ಕೊಟ್ಟು ಕಳಿಸುವುದು ತಪ್ಪು. ಧಾರ್ಮಿಕ ವಿಧಿ-ವಿಧಾನ (rites and rituals) ನೆರವೇರಿಸುವ ಅಗತ್ಯ ಸಮಾಜಕ್ಕೆ ಇರುವುದರಿಂದ ಅವರಿಗೆ ಸೂಕ್ತ ತರಬೇತಿ ಕೊಟ್ಟು ಕ್ರಿಯಾಮೂರ್ತಿಗಳನ್ನಾಗಿ ಮಾಡುವುದು ಒಳ್ಳೆಯದು.

✉ ವಿವೇಕ ಕುಮಾರ್, ಸುಬ್ರಮಣ್ಯನಗರ, ಬೆಂಗಳೂರು. - 1. ವಿಷ್ಣುವು ಸದಾ ಮಲಗಿರುವಂತೆ ಲಕ್ಷ್ಮಿಯು ಸದಾ ವಿಷ್ಣುವಿನ ಪಾದಗಳನ್ನು ಒತ್ತುವಂತೆ ವರ್ಣನೆಯಲ್ಲಿ, ಫೋಟೋದಲ್ಲಿ ಚಿತ್ರಿಸುವುದೇಕೆ ?

★ ವೈದಿಕ ಮತ್ತು ವೈಷ್ಣವ ದೃಷ್ಟಿಕೋನದಲ್ಲಿ ಸತಿಯು ಪತಿಯ ಪಾದ ಸೇವಕಿ. ಆಕೆಗೆ ಸ್ತ್ರೀ ಜನ್ಮದಲ್ಲಿ ಮುಕ್ತಿ ಇಲ್ಲ. ಏನಿದ್ದರೂ ಪತಿಯ ಸೇವೆ ಮಾಡಿ ಉತ್ತಮವಾದ, ಪುರುಷ ಜನ್ಮ ಪಡೆದು ಮುಕ್ತಿ ಹೊಂದಬೇಕು. ಅದೇ ನಮ್ಮ ಮುತ್ತಾತ ಶಿವಪ್ಪನನ್ನು ನೋಡಿರಿ ; ಪತ್ನಿ ಪಾರ್ವತಿಗೆ ತನ್ನ ತೊಡೆಯ ಮೇಲೆ ಸ್ಥಾನ ನೀಡಿ ಅರ್ಧಾಂಗಿನಿಯನ್ನಾಗಿ ಕೂರಿಸಿಕೊಂಡಿದ್ದಾನೆ. ಸ್ತ್ರೀ ಸಮಾನತೆ ಸಾರುವಂತೆ ಅರ್ಧನಾರೀಶ್ವರನೂ ಆಗಿದ್ದಾನೆ. ಬಹಳ ಫಾರ್ವರ್ಡ್ ನಮ್ಮ ಶಿವಪ್ಪ !

✉ 2. ರಮಾಪತಿ, ಸೀತಾಪತಿ, ಲಕ್ಷ್ಮಿಪತಿ ಎಂದು ದೇವತೆಗಳನ್ನು ಕರೆಯುವರು ಅದೇ ರೀತಿ ನೀಲಾಂಬಿಕಾಪತಿ ಎಂದು ಧರ್ಮಪಿತ ಬಸವಣ್ಣನವರನ್ನು ಏಕೆ ಕರೆಯಬಾರದು ?

★ ಧರ್ಮಗುರು ಬಸವಣ್ಣನವರು ಹೆಂಡತಿಯ ನಾಮದ ಬಲದಿಂದ ದೊಡ್ಡವರಾದವರಲ್ಲ ಸ್ವಯಂ ವ್ಯಕ್ತಿತ್ವದಿಂದ ದೊಡ್ಡವರಾದವರು. ಲಕ್ಷ್ಮಿಯು ವಿಷ್ಣುವಿನ ಪಾದಸೇವಕಿ, ವಿಷ್ಣುವನ್ನು

ಒಲಿಸಿಕೊಂಡರೆ ಲಕ್ಷ್ಮಿ ಒಲಿಯುವಳು ಎಂಬ ಭಾವನೆ ತುಂಬಿ ವೈಷ್ಣವ ಭಕ್ತಿಯನ್ನು ಬೆಳೆಸುವರು. ಆದರೆ ವಿಶ್ವಗುರು ಬಸವಣ್ಣನವರು ತಮ್ಮ ಸಾಧನೆ-ಸಂದೇಶಗಳಿಂದ ಅದ್ಭುತ ವ್ಯಕ್ತಿತ್ವ ಹೊಂದಿ ಅನುಯಾಯಿಗಳನ್ನು ಆಕರ್ಷಿಸುವ ಕಾರಣ ಅವರಿಗೆ "ಅಮ್ಮಾವ್ರ ಗಂಡ" ಎಂಬ ಕಲ್ಪನೆ ಕೊಡುವ ಪತ್ನಿಯ ಹೆಸರು ವಿಶೇಷಣವಾಗಿ ಬೇಕಾಗುವುದಿಲ್ಲ.

✉ ಎನ್. ಎಮ್. ಹಿರೇಮಠ, ಶ್ರೀ ಶಿವಯೋಗ ಸಂಘ, ಶಿವಯೋಗ ಮಂದಿರ, ಬಾದಾಮಿ.

★ 1. ನೀವು ನಿಜ ಬಸವ ಭಕ್ತರಾಗಿದ್ದರೆ 'ಶ್ರೀ ಗುರು ಬಸವಾಯನಮಃ' ಅನ್ನಬೇಕು. 'ಶ್ರೀ ಗುರು ಬಸವಲಿಂಗಾಯನಮಃ' ಅನ್ನುವಿರೇಕೆ ? ಲಿಂಗ ಪದ ಸಂಸ್ಕೃತ ಪದ. ಸಂಸ್ಕೃತ ಬೇಡವೆಂದು ತಿರಸ್ಕರಿಸುವ ನಿಮಗೆ ಈ ಪದ ಏಕೆ ಬೇಕು ?

★ ನೀವು ನಮ್ಮ ವಿಚಾರಧಾರೆಯನ್ನಾಗಲೀ ಅಥವಾ ಆದಿ ಶರಣರ ವಿಚಾರಧಾರೆಯನ್ನಾಗಲಿ ಏನೇನೂ ಅರ್ಥ ಮಾಡಿಕೊಂಡಿಲ್ಲ ಎಂದೇ ಇಂಥ ಪ್ರಶ್ನೆ ಕೇಳಿದ್ದೀರಿ. ನಾವು ಯಾವುದೇ ಭಾಷೆಯನ್ನು ದ್ವೇಷಿಸುವುದಿಲ್ಲ, ತಿರಸ್ಕರಿಸುವುದೂ ಇಲ್ಲ. ಅವರವರ ಮಾತೃಭಾಷೆಯಲ್ಲೇ ದೇವನನ್ನು ಆರಾಧಿಸಬೇಕು ಎಂಬುದು ಶರಣರ ಮೂಲ ಆಶಯ. ಭಾಷೆ ದೇವ-ಭಕ್ತರನ್ನು ಬೆಸೆಯುವ ಸಾಧನ. ತಾನು ಏನು ಮಂತ್ರವನ್ನು ಹೇಳುತ್ತಿದ್ದೇನೆ, ಸ್ತೋತ್ರವನ್ನು ಮಾಡುತ್ತಿದ್ದೇನೆ ಎಂಬುದೇ ಅರ್ಥವಾಗದ ಭಕ್ತ ಪೂಜೆಯ ಆನಂದವನ್ನು ಹೇಗೆ ಅನುಭವಿಸುತ್ತಾನೆ ? ಒಂದು ವೇಳೆ ಸಂಸ್ಕೃತವನ್ನು ಯಾರಾದರೂ ಮಾತೃಭಾಷೆಯನ್ನಾಗಿ ಆಡುತ್ತಿದ್ದರೆ ಅವರು ಅದರಲ್ಲೇ ಪೂಜಿಸಲಿ. ರುದ್ರಾಭಿಷೇಕದಲ್ಲಿ ನಮಕ, ಚಮಕ, ಎಂಬ ಭಾಗಗಳಿವೆ. ನಮಕದಲ್ಲಿ ಭಕ್ತನು ರುದ್ರನ ಸ್ತೋತ್ರ ಮಾಡಿದರೆ ಚಮಕದಲ್ಲಿ ತನಗೆ ಏನು ಬೇಕು ಎಂದು ಬೇಡಿಕೆ ಸಲ್ಲಿಸುತ್ತಾನೆ. ಸಾಮಾನ್ಯರ ವಿಷಯ ಬಿಡಿರಿ, ವಿರಕ್ತ ಸ್ವಾಮಿಗಳು, "ನನಗೆ ವಿತ್ತವನ್ನು ಕೊಡು, ಪತ್ನಿಯನ್ನು ಕೊಡು, ಪುತ್ರರನ್ನು ಕೊಡು, ಮಂಚವನ್ನು ಕೊಡು" ಎಂದು ಯಾಂತ್ರಿಕವಾಗಿ ಪಠಿಸುವುದನ್ನು ಕಂಡು ಗೃಹಸ್ಥ ಭಕ್ತರು ನಗಬೇಕೋ ಅಳಬೇಕೋ ? ಈ ಮಂತ್ರ ಕನ್ನಡದಲ್ಲಿದ್ದರೆ ಹೇಳುವಾಗ ಅರ್ಥವಾಗಿ, ನಾಚಿಕೊಂಡು ಕೈಬಿಡುತ್ತಿರಲಿಲ್ಲವೆ ? ಅರ್ಥವಾಗುವ ಭಾಷೆಯಲ್ಲಿ ಧಾರ್ಮಿಕ ವಿಧಿ ವಿಧಾನ ನೆರವೇರಬೇಕು ಎಂಬುದು ನಮ್ಮ ಆಶಯ. ಓಂ ಶ್ರೀ ಗುರು ಬಸವಲಿಂಗಾಯನಮಃ ಎಂಬುದರಲ್ಲಿ 'ಬಸವ' ಮಾತ್ರ ಸಂಸ್ಕೃತವಲ್ಲ ಅದು ವೃಷಭದ ಕನ್ನಡ ರೂಪ - ಬಾಕಿ ಎಲ್ಲ ಸಂಸ್ಕೃತವೆ. ಮಂತ್ರವು ಎಲ್ಲ ಭಾಷಿಕರಿಗೂ ಒಂದೇ ಇರಬೇಕು. ಇದರ ಅರ್ಥವನ್ನು ಸುಲಭವಾಗಿ ತಿಳಿಸಬಹುದು. ಆದ್ದರಿಂದ 'ಓಂ ಶ್ರೀ ಗುರು ಬಸವ ಲಿಂಗಾಯನಮಃ' ಮಂತ್ರವನ್ನು ನಾವು ಬಳಸುವುದು.

✉ 2. ಕೆಲವು ಬಸವ ತತ್ತ್ವವಾದಿಗಳು ಇಷ್ಟಲಿಂಗ ಕೈಲಿ ಹಿಡಿದು ವಚನಾಭಿಷೇಕ ಎಂದು ಪೂಜೆ ಮಾಡುವಾಗ ಕಳಬೇಡ, ಕೊಲಬೇಡ ಎಂಬ ವಚನ ಹೇಳುತ್ತಾರೆ. ಲಿಂಗಯ್ಯ ಕಳುವು, ಕೊಲೆ ಮಾಡುವನೇ ಮಾಡಬೇಡ ಎಂದು ಹೇಳಲು ?

★ ಬಹಳ ಒಳ್ಳೆಯ ಪ್ರಶ್ನೆ ಕೇಳಿದ್ದಿರಿ. (ಇಷ್ಟ) ಲಿಂಗಾರ್ಚನೆ ಎಂಬ ಕ್ರಿಯೆಗೆ ವಚನಾಭಿಷೇಕ ಎಂಬ ಪದ ಪ್ರಯೋಗವೇ ತಪ್ಪು; ರುದ್ರಾಭಿಷೇಕ ಎಂಬ ಪದದಲ್ಲಿ ರುದ್ರ ಬದಲು ವಚನ

ಎಂಬುದನ್ನು ಕೆಲವರು (ನಾವಲ್ಲ) ಸೇರಿಸಿದ್ದಾರೆ. ಇದು ಹಾಸ್ಯಾಸ್ಪದ. ಉಪಾಸ್ಯ ವಸ್ತುವಾದ ರುದ್ರನಿಗೆ ಮಾಡುವ ಅಭಿಷೇಕ ರುದ್ರಾಭಿಷೇಕ. ನಮ್ಮ ಉಪಾಸ್ಯ ವಸ್ತು ಲಿಂಗದೇವನಿಗೆ ಮಾಡುವ ಅರ್ಚನೆ (ಶಿವಪೂಜೆಯಲ್ಲ) (ಇಷ್ಟ) ಲಿಂಗಾರ್ಚನೆ. ಅಲ್ಲಿ ಸೃಷ್ಟಿಕರ್ತನ ಸ್ವರೂಪ ಚಿಂತನೆ, ವರ್ಣನೆ, ಅವನ ಅನುಗ್ರಹದ ಮಹತ್ವ ಮುಂತಾಗಿ ಬರಬೇಕು. ಸಂದರ್ಭಕ್ಕೆ ಹೊಂದದ ವಚನಗಳನ್ನು ಉದ್ದಕ್ಕೆ ಹೇಳುತ್ತಾ ಹೋದರೆ ಅದು ಹಾಸ್ಯಾಸ್ಪದವೆನಿಸುತ್ತದೆ. ಈ ತಪ್ಪುಗಳನ್ನು ಸರಿಪಡಿಸಿ ನಾನು ಇಷ್ಟಲಿಂಗಾರ್ಚನಾ ಗೀತೆಗಳನ್ನು ರಚಿಸಿದ್ದೇನೆ. ಆದರೆ ಅದನ್ನು ಕಲಿತು, ಹಾಡಲು ಪ್ರಾಂಜಲ ಮನಸ್ಸು ಬೌದ್ಧಿಕ ಪ್ರಾಮಾಣಿಕತೆ ಬೇಕಲ್ಲ !

✉ 3. ಮದುವೆಗಳಲ್ಲಿ ಅಕ್ಷತೆಯ ಬದಲು ಹೂವನ್ನು ಏಕೆ ಹಾಕಿಸುತ್ತೀರಿ ?

★ ನಾವು ಅಕ್ಷತೆಯನ್ನೇ ಹಾಕಿಸುವುದು. ಶ್ರೀ ಬಸವೇಶ್ವರ ಪೂಜಾವ್ರತ ಮಾಡಿಸಿ ಪುಷ್ಪಾರ್ಚನೆ ಮಾಡಿಸಿರುವುದರಿಂದ ಪ್ರಸಾದ ರೂಪದಲ್ಲಿ ಅಂಥ ಹೂವನ್ನು ಅಕ್ಷತೆಯ ಜೊತೆ ಬೆರೆಸಿ, ಅಕ್ಷತೆಯನ್ನೇ ಹಾಕಿಸುವುದು. ನಂತರ ಪುಷ್ಪವೃಷ್ಟಿಯನ್ನು ಸಂಭ್ರಮ, ಸಂತೋಷಕ್ಕಾಗಿ ಮಾಡಿಸಿ, ಆರತಿಯನ್ನು ಬೆಳಗಿಸುತ್ತೇವೆ. ಅಕ್ಷತೆಯು ಕಡ್ಡಾಯ, ಪುಷ್ಪವೃಷ್ಟಿ ಐಚ್ಛಿಕ.

✉ ಶಿ.ಚ.ಗೌಡರ, ಧಾರವಾಡ. - ಅಂಗಸತಿ - ಲಿಂಗಪತಿ ಎಂಬ ಹೋಲಿಕೆಯುಂಟಲ್ಲ, ಇದನ್ನು ನಾವು ಭಕ್ತಿಯಿಂದ ಒಪ್ಪಿಕೊಂಡು ಹೇಳುತ್ತೇವೆ. ಸೂಕ್ಷ್ಮವಾಗಿ ಚಿಂತನೆ ಮಾಡಿದರೆ ಪತಿ ಶ್ರೇಷ್ಠ - ಸತಿ ಕಡಿಮೆ ಎಂಬ ಭಾವವು ಬರುವುದಲ್ಲದೆ ಸ್ತ್ರೀಯ ಸ್ಥಾನವನ್ನು ಕಡೆಗಣಿಸಿದಂತೆ ಆಗುತ್ತದೆ. ಶರಣರ ಸಮಾನತಾ ಧೋರಣೆಗೆ ಇದು ವಿರುದ್ಧವಲ್ಲವೆ ?

★ ಇಲ್ಲಿ "ಶರಣ ಸತಿ"ಯಾಗುವುದು ಕೇವಲ ಸ್ತ್ರೀಯರು ಮಾತ್ರವಲ್ಲ ಪುರುಷ ಶರಣರು ಸಹ ಏಕೈಕನಾದ ಲಿಂಗದೇವನಿಗೆ ಶರಣಾಗಿ ಶರಣ ಸತಿಯಾಗುವರು. ಲಿಂಗ ಎಂದರೆ ಬ್ರಹ್ಮಾಂಡಗತ ಚೈತನ್ಯವಾದ ಸೃಷ್ಟಿಕರ್ತ, ಅಂಗ ಎಂದರೆ ದೇಹಾಂತರ್ಗತವಾಗಿರುವ ಲಿಂಗದೇವನ ಒಂದು ಕಿಡಿಯಾದ ಆತ್ಮ. ಲಿಂಗವು ಪತಿಯಾದರೆ ಆತ್ಮವು ಅದರ ಸತಿ. ಮಾನವನ ಸ್ವಭಾವದಲ್ಲಿ ಹುಟ್ಟುಗುಣ (Instinct) ಒಂದು ಸ್ವಾಭಾವಿಕ ಪ್ರತಿಕ್ರಿಯೆ. ಅಹಂ ಎನ್ನುವುದು ಪುರುಷನಲ್ಲಿರುವ ಒಂದು ಹುಟ್ಟು ಗುಣವಾದರೆ ಶರಣಾಗತಿ ಎಂಬುದು ಸ್ತ್ರೀಯಲ್ಲಿರುವ ಒಂದು ಹುಟ್ಟು ಗುಣ, ಸಮುದ್ರವು ಇಂಬಿಟ್ಟುಕೊಳ್ಳುವ ಕಾರಣ ಅದನ್ನು ಪುರುಷ (ಸಮುದ್ರರಾಜ) ಎನ್ನಲಾಗುವುದು. ನದಿಯು ಶರಣಾಗುವ ಕಾರಣ ಸ್ತ್ರೀ ಎನ್ನಲಾಗುವುದು. ವಾಸ್ತವಿಕವಾಗಿ ಅವು ಸ್ತ್ರೀಯೂ ಅಲ್ಲ. ಪುರುಷನೂ ಅಲ್ಲ ಜಡವಸ್ತುಗಳು. ಶರಣನು ಪುರುಷನ ಅಹಂ, ಸ್ತ್ರೀಯ ದಾಸ್ಯ ಎರಡನ್ನೂ ಗೆದ್ದು ನಿರ್ವಿಕಾರನಾಗಿರುತ್ತಾನೆ. ಹೋಲಿಕೆ ಕೊಡುವಲ್ಲಿ ಪುರುಷ ತತ್ತ್ವ ಮತ್ತು ಸ್ತ್ರೀ ತತ್ತ್ವದೊಳಗಿನ ಅಂಶವನ್ನು ಮಾತ್ರ ಗ್ರಹಿಸಿಕೊಂಡು ಆದಿ ಶರಣರು ಸತಿಭಕ್ತಿಯನ್ನು ಷಟಸ್ಥಲದಲ್ಲಿ ಅಳವಡಿಸಿದ್ದಾರೆ. ಇದು ಸ್ತ್ರೀಯ ಸಾಮಾಜಿಕ ಸ್ಥಾನ - ಮಾನ, ಹಕ್ಕು ಬಾಧ್ಯತೆಗಳಿಗೆ ಚ್ಯುತಿ ತರುವುದಿಲ್ಲ. ಅತ್ಯಂತ ಸೂಕ್ಷ್ಮವಾದ, ನಿರಾಕಾರವಾದ ಶರಣಾಗತ ಭಕ್ತಿಯ ಪರಿಕಲ್ಪನೆಯನ್ನು ಬಿಂಬಿಸಲು ಲಿಂಗ - ಪತಿ, ಶರಣ - ಸತಿ ಸಂಬಂಧ ಬಿಟ್ಟರೆ ಬೇರೊಂದು ಹೋಲಿಕೆ ಸಾಧ್ಯವಿಲ್ಲ. ಆದ್ದರಿಂದ ಈ ಹೋಲಿಕೆಯಿಂದ ಸ್ತ್ರೀಯ ಸಮಾನತೆಗೆ ಚ್ಯುತಿ ಬರುತ್ತದೆ ಎಂಬ ತಪ್ಪು ಚಿಂತನೆ ಬೇಡ.

✉ ಸೂರ್ಯಕಾಂತಯ್ಯ ಗಣಾಚಾರಿ, ಧಾರವಾಡ. - ಶರಣ ಮೇಳದ ಭವ್ಯ ಮಂಟಪದಲ್ಲಿ ಮಹತ್ವದ ಜ್ಞಾನದಾಸೋಹ ನಡೆಯುತ್ತಿದ್ದರೂ ಕೆಲವರು ಟೆಂಟ್‌ಗಳಲ್ಲಿ ಉಳಿದು, ಊಟಕ್ಕೆ ಮಾತ್ರ ಪಾಳೆ ಹಚ್ಚುತ್ತಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು ?

★ "ಮಾವಿನಕಾಯಿಯೊಳಗೊಂದು ಎಕ್ಕೆಯ ಕಾಯಿ ನೋಡಯ್ಯ" ಎಂದು ಧರ್ಮಪಿತರು ಹೇಳುವಂತೆ ಇಂಥ ಜನರು ಇದ್ದೇ ಇರುತ್ತಾರೆ. ಅಂದು 12ನೇ ಶತಮಾನದ ಮಹಾಮನೆಗೆ ಸಹ ಬದನೆಕಾಯಿ ಕಟ್ಟಿಕೊಂಡು, ಕಲ್ಲು ಕಟ್ಟಿಕೊಂಡು ಬಂದು ಊಟಕ್ಕೆ ಕೂರುತ್ತಿರಲಿಲ್ಲವೆ ? ನಿಜಕ್ಕೂ ಬಡವರಿದ್ದು ಊಟಕ್ಕಾಗಿಯೇ ಬಂದು ಶರಣ ಮೇಳದ ಪುಣ್ಯದ ಪರಿಸರದಲ್ಲಿ ಉಳಿದು ಬೇಡವೆಂದರೂ ಕಿವಿ ಮೇಲೆ ಬೀಳುವ ಜ್ಞಾನದ ಪದಗಳನ್ನು ಕೇಳುತ್ತಾ 4-5 ದಿವಸ ಮೂರೂ ಹೊತ್ತು ಹೊಟ್ಟೆತುಂಬಾ ಉಣ್ಣುವ ಜನರಿಂದಾಗಿ "ಅನ್ನದಾನ" ಮಾಡಿದ ಪುಣ್ಯ ನಮಗೂ ಪ್ರಾಪ್ತಿಯಾಗುತ್ತದೆ. ಕೇವಲ ಊಟಕ್ಕಾಗಿ ಬರದೆ ಜ್ಞಾನದಾಸೋಹಕ್ಕೆ ಮನ ಸೋತು ಬಂದು ಒಂದು ಪದವನ್ನು ಸಹ ಕಳೆದುಕೊಳ್ಳದಂತೆ ಆಲಿಸುವ ಶರಣರಿಗೆ "ಅನ್ನ ದಾಸೋಹ" ಮಾಡಿದ ಪುಣ್ಯವೂ ಪ್ರಾಪ್ತಿಯಾಗುತ್ತದೆ. ಊಟಕ್ಕಾಗಿ ಬಂದು ಕಿವಿಯ ಮೇಲೆ ಬೀಳುವ ಶಬ್ದಗಳನ್ನು ಆಲಿಸಿದ ಅಶನಧಾರಿಗಳಾದ ಕೆಲವರಾದರೂ ಜ್ಞಾನಿಗಳಾದರೆ ಶರಣ ಮೇಳ ಸಾರ್ಥಕವಾಗುತ್ತದೆ.

✉ 2. ಪೂಜ್ಯ ಗಂಗಾ ಮಾತಾಜಿಯವರಿಂದ ದೀಕ್ಷೆ ಪಡೆದು, ಇಷ್ಟಲಿಂಗ ನಿಷ್ಠೆ ಅಳವಡಿಸಿಕೊಂಡು 108 ಲಿಂಗದೇವನ ಸ್ತುತಿ ಅಳವಡಿಸಿಕೊಂಡು ಅಪಾರ ಆನಂದವಾಗಿದೆ. "ಲಿಂಗದೇವ" ಪದದ ಮಹತ್ವ ತಿಳಿದು, ಲಿಂಗದೇವನ ಧ್ಯಾನವೇ ಅಧಿಕವಾಗಿದೆ ; ಧರ್ಮಪಿತ ಬಸವಣ್ಣನವರ ಧ್ಯಾನ ಕಡಿಮೆಯಾಗಿದೆ. ಇದರಿಂದ ಧರ್ಮಪಿತ ಬಸವಣ್ಣನವರು ಕೋಪಗೊಳ್ಳುವರೆ ?

★ ಇದೊಳ್ಳೆ ತಮಾಷೆಯ ಪ್ರಶ್ನೆ. ಧರ್ಮಪಿತ ಬಸವಣ್ಣನವರ ಏಕಮೇವ ಧ್ಯೇಯವೇ ಎಲ್ಲರನ್ನು ಲಿಂಗದೇವನೆಡೆಗೆ ತಿರುಗಿಸುವುದು. ಅವರು ತಾವು ಸೆಂಟ್ರಿಂಗ್ ಆಗಿ ದೇವಶ್ರದ್ಧೆಯ ಮೇಲ್ಛಾವಣಿ ಗಟ್ಟಿಗೊಳ್ಳುವಂತೆ ಮಾಡಿದರು, ತಮ್ಮನ್ನು ತಾವು ಮೆರೆಸಿಕೊಳ್ಳಲಿಲ್ಲ. ಆದ್ದರಿಂದ ಏಕದೇವ ನಿಷ್ಠೆ ಬೆಳೆದರೆ ಧರ್ಮ ಪಿತರು ಸಂತೋಷ ಪಡುವರೇ ವಿನಾ ಕೋಪಗೊಳ್ಳುವುದಿಲ್ಲ. ಆದರೆ, ನಮ್ಮ ಕರ್ತವ್ಯ ಹೀಗಿರಬೇಕು ; ಹೊತ್ತು, ಹೆತ್ತ ತಾಯಿಯನ್ನು ಗೌರವಿಸುವುದು ಮಕ್ಕಳ ಕರ್ತವ್ಯ, ಜನ್ಮಕ್ಕೆ ಕಾರಣೀಭೂತನಾದ ತಂದೆಯನ್ನು ಗೌರವಿಸುವುದೂ ಅವರ ಕರ್ತವ್ಯ. ಹಾಗೆ ಜಗತ್ತನ್ನು ಸೃಷ್ಟಿಸಿದ ತಂದೆಯಂತಿರುವ ಲಿಂಗದೇವನನ್ನು ಆರಾಧಿಸಿ ಗೌರವಿಸಬೇಕು ; ಬದುಕಲು ಒಂದು ದಿವ್ಯ ಪಥವನ್ನು ಹಾಕಿಕೊಟ್ಟ ತಾಯಿಯಂಥ ಧರ್ಮಗುರುವನ್ನೂ ಗೌರವಿಸಬೇಕು. ಇವೆರಡೂ ಭಕ್ತಿ ಸಮತೋಲನಗೊಳ್ಳಬೇಕು. ಅದನ್ನೇ ಚನ್ನಬಸವಣ್ಣನವರು ಹೀಗೆ ಹೇಳಿರುವುದು.

'ಅಯ್ಯಾ ಅಯ್ಯಾ' ಎಂದಡೆ ಅಯ್ಯ 'ಓ' ಎನ್ನದೆ ಮಾಣ್ಬನೆ ?
'ಅವ್ವಾ ಅವ್ವಾ' ಎಂದಡೆ ಅವ್ವೆ 'ಓ' ಎನ್ನದೆ ಮಾಣ್ಬಳೆ ?
ಇದು ಕಾರಣ ಕೂಡಲ ಚನ್ನಸಂಗಯ್ಯನಲ್ಲಿ
'ಬಸವ-ಲಿಂಗಾ ಬಸವ-ಲಿಂಗಾ ಬಸವ-ಲಿಂಗಾ' ಎಂದಡೆ
ಎನ್ನ ಕಾಯ ಬಯಲಾಗದೆ ?

- ಚ.ಬ.ವ. 920

✉ ಮಂಜುನಾಥ ಬಂಡಿ, ಅಮೀನಗಡ. - ಕೆಲವು ಜನ ಬುದ್ಧಿಜೀವಿಗಳು ಎಂಬುವವರು ಭಾಷಣಕಾರರು, ಸಾಹಿತಿಗಳು, ರಾಜಕಾರಣಿಗಳು ತಮ್ಮ ಭಾಷಣ ಬರಹಗಳಲ್ಲಿ ತಮ್ಮ ಸ್ನೇಹಿತರಿಗೆ, ಆಪ್ತೇಷ್ಟರಿಗೆ ಗೌರವ ಪೂರ್ವಕ ಸಂಬೋಧಿಸುವರು, ಮಠಾಧೀಶರನ್ನು ಬುದ್ಧಿ, ಅಪ್ಪಾವರು ಎಂದು ಗೌರವಿಸಿ ಧರ್ಮಗುರು ಬಸವಣ್ಣನವರನ್ನು ಏಕ ವಚನದಲ್ಲಿ ಸಂಬೋಧಿಸುವರು. ಧರ್ಮಪಿತರು ಇಂದು ಜಾಗತಿಕ ಮಹಾಪುರುಷರಾದ ಬುದ್ಧ, ಏಸು, ಮಹಮ್ಮದರಂಥವರ ಸಾಲಿನಲ್ಲಿ ನಿಲ್ಲಬಲ್ಲವರು ಎಂಬುದನ್ನು ಈ ಜನರು ಇನ್ನೂ ಅರಿತಿಲ್ಲವೆ ?

★ ಅರಿತಿಲ್ಲವೆಂದೇ ಹಾಗೆ ಏಕ ವಚನದಲ್ಲಿ ಸಂಬೋಧಿಸುವರು. ಸರ್ವಾಂಗ ಪರಿಪೂರ್ಣವೂ , ಬಹುಮುಖಿಯೂ ಆದ ಧರ್ಮಪಿತ ಬಸವಣ್ಣನವರ ವ್ಯಕ್ತಿತ್ವವನ್ನು ಅರಿಯದ ಮಂದಮತಿಗಳಾದುದರಿಂದಲೇ ಹಾಗೆ ಸಂಬೋಧಿಸುವುದು. ಬಾಯಿ ತೆರೆದರೆ ಮೂರಕ್ಷರ ಬರದ ಕೆಲವು ಪೀಠಾಧೀಶರು ಸಹ "ಬಸವಣ್ಣ ನಮ್ಮ ಭಕ್ತ, ನಾವು ಗುರುಗಳು" ಎಂದು ಗೂಬೆಯಂತೆ ಮುಲುಗುವುದನ್ನು ಕೇಳಿಲ್ಲವೆ ? ಧರ್ಮಪಿತ ಬಸವಣ್ಣನವರು ದೇವರಿಗೆ ಭಕ್ತರು, ಭಕ್ತರಿಗೆ ಮಹಾ ಗುರುವು ಎಂಬುದನ್ನು ಅರಿಯದ ಮಂದ ಬುದ್ಧಿಯವರಿವರು.

✉ ಫ. ಸೋ. ಬೇವಿನಗಿಡದ, ಧಾರವಾಡ. - ವಿಕ್ರಮ ಪ್ರಕಾಶನದ ಒಂದು ಗೈಡ್ ಪುಸ್ತಕದಲ್ಲಿ ದೇವರ ದಾಸಿಮಯ್ಯ - ಜೇಡರ ದಾಸಿಮಯ್ಯ (1015-1042) ಒಂದೇ ; ಬೇರೆಬೇರೆ ಅಲ್ಲ ಎಂದು ಹೇಳಲಾಗಿದೆ. ಇದು ಸರಿಯೆ ?

★ ಸಂತೆ ಹೊತ್ತಿಗೆ ಮೂರು ಮೊಳ ನೇಯುವವನಂತೆ ಅನೇಕ ಬರಹಗಾರರು ಆಳವಾದ ಅಧ್ಯಯನ ಮಾಡದೆ ಬರೆಯುತ್ತಾರೆ. ಇನ್ನು ಕೆಲವರು ಪೂರ್ವ ನಿರ್ಧಾರಿತ ಆಲೋಚನೆಗಳನ್ನು (predetermined ideas) ಬರೆಯಲು ಅರ್ಥಂಬರ್ಥ ದಾಖಲೆ ಉದಾಹರಿಸುತ್ತಾರೆ. ದೇವಾಂಗ ಕುಲತಿಲಕನಾದ ದೇವರ ದಾಸಿಮಯ್ಯನದು ರೇಷ್ಮೆ ವಸ್ತ್ರ ನೇಯುವ ಕಾಯಕ, ಜೇಡರ ಕುಲತಿಲಕನಾದ ಜೇಡರ ದಾಸಿಮಯ್ಯನವರದು ಹತ್ತಿ ಬಟ್ಟೆ ನೇಯುವ ಕಾಯಕ. ದೇವರ ದಾಸಿಮಯ್ಯ ಜಯಸಿಂಹ - ಸುಗ್ಗಲೆಯ ಕಾಲದವರು. ಜೇಡರ ದಾಸಿಮಯ್ಯ ಬಸವಣ್ಣನವರ ಸಮಕಾಲೀನರು. ಇವರೇ ವಚನಕಾರರು. ಇವರ ಒಂದು ವಚನದಲ್ಲಿ "ಕೀಳು ಡೋಹರ ಕಕ್ಕ, ಕೀಳು ಮಾದರ ಚನ್ನ, ಕೀಳು ಓಹಿಲಯ್ಯ ಎನ್ನಬಹುದೆ ? ಕೀಳಿಂಗಲ್ಲದೆ ಹಯನ ಕರೆಯದು ಕಾಣಾ ರಾಮನಾಥ" ಎಂದಿದ್ದಾರೆ. ಡೋಹರ ಕಕ್ಕಯ್ಯನವರು ಗುರು ಬಸವಣ್ಣನವರ ಕೈಯಿಂದಲೇ ದೀಕ್ಷೆ ಪಡೆದ ಶರಣರು ಎಂಬುದಕ್ಕೆ ಅವರ ಈ ವಚನವೇ ಸಾಕ್ಷಿ.

ಎನ್ನ ಕಷ್ಟ ಕುಲದಲ್ಲಿ ಹುಟ್ಟಿದೆನೆಂಬ ಕರ್ಮವ ಕಳೆದು
ಮುಟ್ಟಿ ಪಾವನವ ಮಾಡಿ ಕೊಟ್ಟನಯ್ಯಾ ಎನ್ನ ಕರಸ್ಥಲಕ್ಕೆ ಲಿಂಗವ !
ಆ ಲಿಂಗ ಬಂದು ಸೋಂಕಲೊಡನೆ
ಎನ್ನ ಸರ್ವಾಂಗದ ಅವಲೋಹವಳಿಯಿತ್ತಯ್ಯಾ !
ಎನ್ನ ತನುವಿನಲ್ಲಿ ಗುರುವ ನೆಲೆಗೊಳಿಸಿದ,
ಎನ್ನ ಮನದಲ್ಲಿ ಜಂಗಮವ ನೆಲೆಗೊಳಿಸಿದ,

ಎನ್ನ ಅರುಹಿನಲ್ಲಿ ಪ್ರಸಾದವ ನೆಲೆಗೊಳಿಸಿದ !
ಇಂತೀ ತ್ರಿವಿಧ ಸ್ಥಾನವ ಶುದ್ಧವ ಮಾಡಿ
ಚತುರ್ವಿಧ ಸಾರಾಯಸ್ಥಲವ ಸಂಬಂಧವ ಮಾಡಿದ
ಸಂಗನ ಬಸವಣ್ಣನ ಕರುಣದಿಂದ
ಪ್ರಭುದೇವರ ಶ್ರೀಪಾದವ ಕಂಡು ಬದುಕಿದೆನು ಕಾಣಾ !
ಅಭಿನವ ಮಲ್ಲಿಕಾರ್ಜುನಾ. - ಸ.ವ.ಸಂ. 7 ಪುಟ 312, ವಚನ 994

ಜೇಡರ ದಾಸಿಮಯ್ಯನವರ ಧರ್ಮಪತ್ನಿ ದುಗ್ಗಳೆಯ ಈ ಎರಡು ವಚನಗಳನ್ನು ಓದಿರಿ.

1. ಬಸವಣ್ಣನಿಂದ ಗುರುಪ್ರಸಾದಿಯಾದೆನು.
ಚೆನ್ನಬಸವಣ್ಣನಿಂದ ಲಿಂಗಪ್ರಸಾದಿಯಾದೆನು.
ಮರುಳುಶಂಕರದೇವರಿಂದ ಮಹಾಪ್ರಸಾದಿಯಾದೆನು.
ಇಂತೀ ಚತುರ್ವಿಧವು ಏಕೀಭವಿಸಿ ಪ್ರಾಣಲಿಂಗವಾದ
ಮಹಾಮಹಿಮಂಗೆ ಶರಣೆಂದು ಬದುಕಿದೆನಯ್ಯಾ
ದಾಸಯ್ಯಪ್ರಿಯ ರಾಮನಾಥಾ.

2. ಭಕ್ತನಾದಡೆ ಬಸವಣ್ಣನಂತಾಗಬೇಕು.
ಜಂಗಮವಾದಡೆ ಪ್ರಭುದೇವರಂತಾಗಬೇಕು.
ಯೋಗಿಯಾದಡೆ ಸಿದ್ಧರಾಮಯ್ಯನಂತಾಗಬೇಕು.
ಭೋಗಿಯಾದಡೆ ಚೆನ್ನಬಸವಣ್ಣನಂತಾಗಬೇಕು.
ಐಕ್ಯನಾದಡೆ ಅಜಗಣ್ಣನಂತಾಗಬೇಕು.
ಇಂತಿವರ ಕಾರುಣ್ಯಪ್ರಸಾದವ ಕೊಂಡು
ಸತ್ತ ಹಾಗಿರಬೇಕಲ್ಲದೆ ತತ್ತ್ವದ ಮಾತು ಎನಗೇಕಯ್ಯಾ
ದಾಸಯ್ಯಪ್ರಿಯ ರಾಮನಾಥಾ ?

- ಸ.ವ.ಸಂ. 5, ಪುಟ 229, ವಚನ 700, 701

ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ, ಸಿದ್ಧರಾಮಯ್ಯ, ಮರುಳು ಶಂಕರದೇವ, ಅಜಗಣ್ಣನವರ ಹೆಸರು ಹೇಳಬೇಕಾದರೆ ದುಗ್ಗಳೆ ಯಾವಾಗ ಇರಬಹುದು ನೀವೇ ಲೆಕ್ಕಮಾಡಿರಿ. ಆದ್ದರಿಂದ ನಿಜ ಬಸವ ಭಕ್ತರು ನೇರವಾಗಿ ವಚನ ಸಾಹಿತ್ಯ ಓದಿ ಸತ್ಯವನ್ನು ತಿಳಿದುಕೊಳ್ಳಬೇಕೇ ವಿನಾ ಪೂರ್ವಾಗ್ರಹ ಪೀಡಿತ ಸಾಹಿತ್ಯ ಓದಿ ಗೊಂದಲಕ್ಕೆ ಒಳಗಾಗಬಾರದು.

✉ ಕೆ. ವೀರೇಶ್, ತಿಮ್ಮಪ್ಪಯ್ಯನ ಹಳ್ಳಿ. - ಒಮ್ಮೆ ನಾನೊಂದು ಮಠಕ್ಕೆ ಹೋಗಿದ್ದೆ. ಅಲ್ಲಿಯ ಸ್ವಾಮಿಗಳ ಬಗ್ಗೆ ನನಗೆ ಸದಭಿಪ್ರಾಯವಿರಲಿಲ್ಲ. ಅವರಿಗೆ ನಾನು ಬಗ್ಗಿ ನಮಸ್ಕರಿಸಲಿಲ್ಲ. ಅವರ ಜೊತೆಯಲ್ಲಿ ಓರ್ವ ಸಾತ್ವಿಕ ಶರಣರಿದ್ದರು. ಅವರಿಗೆ ಭಕ್ತಿಪೂರ್ವಕವಾಗಿ ಬಗ್ಗಿ ನಮಸ್ಕಾರ ಮಾಡಲು ಹೋದೆ. ಆಗ ಅವರು ನಿರಾಕರಿಸಿ "ಅಲ್ಲಿ ಸ್ವಾಮಿಗಳಿಗೆ ಮಾಡು" ಎಂದರು. ನನಗೆ ಇಷ್ಟವಾಗಲಿಲ್ಲ. ಉಭಯತರಿಗೂ ಮಾಡಲಿಲ್ಲ. ನಾನು ಮಾಡಿದ್ದು ಸರಿಯೋ ತಪ್ಪೊ ?

★ ವ್ಯಕ್ತಿಯು ಕೆಲವೊಂದು ಶಿಷ್ಟಾಚಾರ ಪಾಲಿಸಬೇಕಾಗುತ್ತದೆ. ಸಿ.ಪಿ.ಐ ಮತ್ತು ಪಿ.ಎಸ್.ಐ ಇದ್ದಾಗ ನೀವು ಪಿ.ಎಸ್.ಐ ಅನ್ನು ಆತ ಯೋಗ್ಯನೇ ಇದ್ದರೂ ಸಿ.ಪಿ.ಐ ನೈತಿಕವಾಗಿ ಅಯೋಗ್ಯನೇ ಇದ್ದರೂ ಶಿಷ್ಟಾಚಾರ ಪಾಲಿಸಬೇಕು ಎಂಬಂತೆ ಮೊದಲು ಮೇಲಿನವರಿಗೆ ಗೌರವ ನೀಡಬೇಕು. ಅದಕ್ಕಾಗಿಯೇ ಆ ಸಾತ್ವಿಕ ಶರಣರು ನಿಮಗೆ ಹಾಗೆ ಸೂಚಿಸಿದ್ದಾರೆ. ವ್ಯಕ್ತಿತ್ವದ ದೃಷ್ಟಿಯಿಂದ ಆ ಶರಣರು ಹೆಚ್ಚಿನ ಗೌರವಕ್ಕೆ ಅರ್ಹರಾಗಿದ್ದರೂ, ಲಾಂಛನದ ದೃಷ್ಟಿಯಿಂದ ಕಾವಿಯು ಬಿಳಿ ಬಟ್ಟೆಗಿಂತ ಹೆಚ್ಚಿನ ಮನ್ನಣೆ ಹೊಂದುತ್ತದೆ. ನೀವು ಇಂಥ ಮುಜುಗರದ ಪ್ರಸಂಗ ಸೃಷ್ಟಿಸಿಕೊಳ್ಳುವ ಬದಲು "ಶರಣು" ಎಂದು ಇಬ್ಬರಿಗೂ ಕೈ ಮುಗಿದಿದ್ದರೆ ಲೌಕಿಕ ಶಿಷ್ಟಾಚಾರ ಮೀರುವ ಸನ್ನಿವೇಶ ಒದಗುತ್ತಿರಲಿಲ್ಲ.

✉ ಕಲ್ಮೇಶ ಕೂಡಲ ಸಂಗಮ, ಬೈಲಹೊಂಗಲ. - ಲಿಂಗದೇವ ವಚನಾಂಕಿತ ನೀವು ಅಳವಡಿಸುವ ಪೂರ್ವದಲ್ಲೇ ಲಿಂ|| ಶರಣ. ಹರ್ಡೇಕರ್ ಮಂಜಪ್ಪನವರು ಬಸವ ಬೋಧಾಮೃತ ಪುಸ್ತಕದಲ್ಲಿ, ವ್ಯಾಖ್ಯಾನದಲ್ಲಿ ಬಳಸಿದ್ದಾರೆ. ಆದರೆ ಅವರನ್ನು ಇವರುಗಳು ಏಕೆ ಕೇಳಲಿಲ್ಲ? ನಿಮ್ಮನ್ನೇಕೆ ಇಷ್ಟು ವಿರೋಧಿಸುತ್ತಾರೆ ? ನಿಮ್ಮ ಕೀರ್ತಿ ಅಮರವಾಗುತ್ತದಲ್ಲಾ ಎಂದು ಹೊಟ್ಟೆಯ ಕಿಚ್ಚು ಈ ದ್ವೇಷಕ್ಕೆ ಕಾರಣವೆ ?

★ ಲಿಂ|| ಶರಣ ಹರ್ಡೇಕರ್ ಮಂಜಪ್ಪನವರು ತತ್ತ್ವಜ್ಞಾನಿಗಳು, ದಾರ್ಶನಿಕರು, ಅನುಭಾವಿಗಳು ; ಕೂಡಲ ಸಂಗಮದೇವ ವಚಾನಾಂಕಿತ ಬಸವಣ್ಣನವರ ದೇವರ ಕಲ್ಪನೆಗೆ ಹೊಂದುವುದಿಲ್ಲ ಎಂಬುದನ್ನು ಮನಗಂಡು ಲಿಂಗದೇವ ಬಳಸಿದ್ದಾರೆ. ಆದರೆ ಅವರು ವಚನದಲ್ಲಿ ಕೂಡಲ ಸಂಗಮದೇವ ಇದ್ದಲ್ಲಿ ವ್ಯಾಖ್ಯಾನದಲ್ಲಿ ಪರ್ಯಾಯವಾಗಿ ಲಿಂಗದೇವ ಬಳಸಿದ್ದಾರೆ, ವಚನಾಂಕಿತ ಬದಲಾಯಿಸಬಾರದೆಂಬ ಶಿಷ್ಟಾಚಾರಕ್ಕೆ ಕಟ್ಟುಬಿದ್ದೋ ಅಥವಾ ಸಂಪ್ರದಾಯ ಜನರನ್ನು ಎದುರು ಹಾಕಿಕೊಳ್ಳಲು ಇಷ್ಟವಿಲ್ಲದೆಯೋ ಅವರು ಹೀಗೆ ಮಾಡಿರಬಹುದು. ಈ ಸುತ್ತು ಬಳಸಿನ ಬದಲಾವಣೆ ಟ್ಯುಬ್ ಲೈಟ್ ತಲೆಯ ಲಿಂಗಾಯತರಿಗೆ ಬೇಗನೇ ತಿಳಿಯದೆಂದು ನಾವು ನೇರವಾಗಿ ಮಾಡಿದೆವು. ಹೀಗಾಗಿ ನಮ್ಮ ಮೇಲಿನ ಮಾತ್ಸರ್ಯ ಪ್ರದರ್ಶನಕ್ಕೆ ಈ ವಚನಾಂಕಿತ ಬದಲಾವಣೆ ಕೆಲವರಿಗೆ ಒಂದು ನೆಪವಾಗಿದೆ ಅಷ್ಟೆ. ನಾನು ಈ ಬದಲಾವಣೆ ಮಾಡಿ ಬಸವ ವಚನ ದೀಪ್ತಿ ಮುದ್ರಿಸುವಾಗ ಲಿಂ|| ಶರಣ. ಹರ್ಡೇಕರ್ ಮಂಜಪ್ಪನವರ "ಬಸವ ಬೋಧಾಮೃತ" ನನಗೆ ಸಿಕ್ಕಿರಲಿಲ್ಲ. ಸಿಕ್ಕಿದ್ದರೆ "ಅವರ ಅನಿಸಿಕೆಯೂ ಹೀಗೆ ಇತ್ತು" ಎಂದು ಬಹು ದೊಡ್ಡ ಆಧಾರವಾಗಿ ಉಲ್ಲೇಖಿಸುತ್ತಲಿದ್ದೆ. ಅಂತರ್ ಪ್ರೇರಣೆಯಿಂದ "ಲಿಂಗದೇವ" ಎಂಬ ಅನರ್ಘ್ಯ ಪದ ನನಗೆ ಸಿಕ್ಕಿತು. ಆದರೆ ಧರ್ಮಪಿತರು ಅಂಥ ಪ್ರೇರಣೆಯನ್ನು ಶರಣ. ಹರ್ಡೇಕರ್ ಮಂಜಪ್ಪನವರಿಗೂ ಬಹು ಹಿಂದೆಯೇ ನೀಡಿದ್ದಾರೆ. ಅವರು ಗ್ರಹಿಸಿಕೊಂಡರೂ ಅರ್ಧಮಾತ್ರ ಚಲಾವಣೆಗೆ ತಂದಿದ್ದಾರೆ ವ್ಯಾಖ್ಯಾನದಲ್ಲಿ ಬಳಸುವ ಮೂಲಕ. ಧರ್ಮಪಿತರ ಅಪೇಕ್ಷೆಯನ್ನು ಪೂರ್ಣಗೊಳಿಸುವ ಭಾಗ್ಯ ನನ್ನದಾಯಿತು.

✉ ನೀಲಕಂಠ ಕಿಚಡಿ, ದೇಶನೂರು-591147. - ಗುಲಬರ್ಗಾ ಜಿಲ್ಲೆಯಿಂದ ಹೊರಡುವ ಒಂದು ಪತ್ರಿಕೆಯಲ್ಲಿ ಅನುಭವ ಮಂಟಪ ಎಂಬ ಶೀರ್ಷಿಕೆಯಡಿಯಲ್ಲಿ ವಿಹಾರಿ ಎಂಬುವವರು ಶರಣ - ಶರಣೆ ಎಂಬ ಪದವನ್ನು ಎಲ್ಲರಿಗೂ ಬಳಸಬಹುದೆ ಎಂಬ ಪ್ರಶ್ನೆ ಕೇಳಿದ್ದು, ಇದಕ್ಕೆ ಹಲವರು ಉತ್ತರಿಸಿದ್ದಾರೆ. ಇದನ್ನು ಎಲ್ಲರಿಗೂ ಬಳಸಬಾರದು ಎಂದು ಶ್ರೀ ಪಂಡಿತಾರಾಧ್ಯ

ಶಿವಾಚಾರ್ಯರು ಹೇಳಿದ್ದರೆ, ಈ ಪದ ಬಳಕೆ ಹೆಚ್ಚಾಗಬೇಕು ಎಂದು ಭಾಲ್ಕಿ ಶ್ರೀಗಳು ಹೇಳಿದ್ದಾರೆ. ತಮ್ಮ ಅಭಿಪ್ರಾಯವೇನು ?

★ 'ಶರಣ' ಎಂಬ ಪದದ ವಾಚ್ಯಾರ್ಥ ಏನೆಂದರೆ ದೇವನಿಗೆ ಶರಣಾದವನು ಎಂದು. ಸಾಧನೆಯ ದೃಷ್ಟಿಯಿಂದ ಷಟಸ್ಥಲದಲ್ಲಿ 5ನೆಯ ಸ್ಥಲವಾದ ಶರಣ ಸ್ಥಲದಲ್ಲಿ ನಿಂತವನು ಎಂದು. ಎಲ್ಲರೂ ಶರಣ ಸ್ಥಲಕ್ಕೆ ಏರಿದವರಾಗದಿದ್ದರೂ, ದೇವನಿಗೆ ಶರಣಾದವರು ಎಂದು ಹೇಳುವುದರಲ್ಲಿ ಯಾವ ತಪ್ಪು ಇಲ್ಲ. ಪ್ರತಿ ಧರ್ಮಕ್ಕೂ ಒಂದು ವಿಶೇಷ ಸಂಸ್ಕೃತಿ ಇದೆ. ಆ ಚೌಕಟ್ಟಿನಲ್ಲಿ, ಉಣ್ಣುವುದು ಊಟವಲ್ಲ 'ಪ್ರಸಾದ', ಲಿಂಗಾಯತನು ಸಾಯುವುದಿಲ್ಲ, 'ಲಿಂಗೈಕ್ಯನಾಗುತ್ತಾನೆ'. ಹಾಗೆ ಬಸವ ಪಥಿಕನಾದವನು ಶರಣ. ಆದ್ದರಿಂದ ಶರಣ ಪದವನ್ನು ಎಲ್ಲರಿಗೂ ಅನ್ವಯಿಸಿ ಗೌರವಿಸುವುದು ಒಳ್ಳೆಯದು. ಒಬ್ಬ ದುಷ್ಟನೇ ಇರಲಿ ಅವನನ್ನು ಶರಣ ಎಂದಾಗ ಆ ಪದದ ಪ್ರಭಾವದಿಂದಲಾದರೂ ಒಳ್ಳೆಯವನಾಗಲು ಅವನು ಯತ್ನಿಸುವನು.

✉ ವೀರಣ್ಣ ಕೊರ್ಲ್ಹಳ್ಳಿ, ಬೆಳಗಾಂವ. -ವೀರಶೈವ, ಲಿಂಗಾಯತ ಬೇರೆ ಬೇರೆ ಎಂದು ಹೇಳುವ ಮೂಲಕ ನೀವು ಸಮಾಜವನ್ನು ಒಡೆಯುತ್ತಿದ್ದೀರೆಂದು ಕೆಲವರ ತೀವ್ರ ಟೀಕೆ !

★ ಇಲ್ಲ ಮಾರಾಯ್ರೆ, ಗೊಂದಲ ಪರಿಹರಿಸುತ್ತಿದ್ದೇವೆ. ಜಮೀನು ಅಥವಾ ಸೈಟಿನ ಸೀಮೆ ಆಕ್ರಮಣವಾಗಿದೆ ಎಂದು ಒಬ್ಬರಿಗೊಬ್ಬರು ಜಗಳವಾಡುವಾಗ ಸರ್ವೇಯವರು ನಕ್ಷೆ, ಟಿಪ್ಪಣಿ ಕಾಪಿ ತಂದು ಅಳತೆ ಮಾಡಿ, ಗಡಿ ಗುರುತಿಸಿ ಇಬ್ಬರ ಮಧ್ಯದ ಜಗಳ ಬಗೆ ಹರಿಸುವುದಿಲ್ಲವೆ ? ಹಾಗೆ ನಾವು ವಚನ ಸಾಹಿತ್ಯ ಎಂಬ ನಕ್ಷೆ, ಟಿಪ್ಪಣಿ ಕಾಪಿ ಹಿಡಿದು ತತ್ತ್ವಗಳೆಂಬ ಸೀಮೆಕಲ್ಲು ನಿಲ್ಲಿಸಿ ಇದು ನಿಮ್ಮದು ಅದು ಅವರದು ಎಂದು ವೈಜ್ಞಾನಿಕವಾಗಿ ರೇಖೆ ಎಳೆಯುತ್ತಿದ್ದೇವೆ. ಇಷ್ಟು ದಿನದ ಜಗಳ ಮುಗಿದು ಉಭಯತರೂ ಅವರವರ ಪಾಡಿಗೆ ನೆಮ್ಮದಿಯಾಗಿ ಇರಲಿ ಎಂಬುದೇ ನಮ್ಮ ಸದುದ್ದೇಶ !

✉ ಎಸ್. ಪುಟ್ಟಣ್ಣ, ಅಮ್ಮಸಂದ್ರ.- ನಾನು ಹುಟ್ಟು ಲಿಂಗಾಯತ ಆದರೆ ಇಷ್ಟಲಿಂಗ ಧಾರಣೆಯಿಲ್ಲ. ಅಮ್ಮಸಂದ್ರದಲ್ಲಿ ಪೂಜ್ಯ ಮಾತೆ ಮಂಗಳಾದೇವಿಯವರ ಪ್ರವಚನ ಕೇಳಿದ ಬಳಿಕ ಬಸವ ಧರ್ಮದ ಅನುಯಾಯಿಯಾಗಿದ್ದೇನೆ. ಲಿಂಗಧಾರಣೆ ಮಾಡಿಕೊಳ್ಳಲು ಕೆಲವು ತೊಡಕುಗಳಿವೆ. ಲಿಂಗಧಾರಣೆ ಇಲ್ಲದೆ ಬಸವ ಧರ್ಮದ ಅನುಯಾಯಿಯಾಗಿ ಇರಬಹುದೊ? ಇಲ್ಲವೊ?

★ ಲಿಂಗಾಯತವು ಒಂದು ಜಾತಿಯಲ್ಲ, ಧರ್ಮ. ಜಾತಿಯು ಹುಟ್ಟಿನಿಂದ ಬಂದರೆ ಧರ್ಮವು ಸಂಸ್ಕಾರದಿಂದ ಬರುತ್ತದೆ. ಲಿಂಗವಂತತ್ವ, ಲಿಂಗಾಯತತ್ವ ಬರುವುದು ಇಷ್ಟಲಿಂಗಧಾರಣೆಯಿಂದ. ಅಂಗದ ಮೇಲೆ ಲಿಂಗವಿದ್ದವ ಲಿಂಗವಂತ. ಗುರುವಿನ ಮೂಲಕ ದೀಕ್ಷೆ ಪಡೆದು ಲಿಂಗವನ್ನು ಆಯತ ಮಾಡಿಕೊಂಡವನು ಲಿಂಗಾಯತ. ಇಷ್ಟಲಿಂಗಧಾರಣೆ ಮಾಡಿಕೊಳ್ಳದೆ ಬಸವ ಧರ್ಮದ ಅನುಯಾಯಿಯಾಗಲು ಸಾಧ್ಯವೇ ಇಲ್ಲ, ಬಹಳವೆಂದರೆ ಬಸವ ಧರ್ಮದ ಅಭಿಮಾನಿ ಎನಿಸಿಕೊಳ್ಳಬಹುದು. ಅಧಿಕೃತವಾಗಿ ಮದುವೆಯಾಗದೆ ಇದ್ದರೆ ಪತಿ-ಪತ್ನಿ ಎಂಬ ಶುಭನಾಮವಿರದೆ ಪ್ರಿಯ-ಪ್ರೇಯಸಿ ಎಂಬ ಪದ ಉಳಿದಿರುವಂತೆ ಇಷ್ಟಲಿಂಗವೆಂಬ ದೇವರ ಕುರುಹು ಧರಿಸದೆ ಬಸವ ಧರ್ಮಾನುಯಾಯಿಯಾಗಲು ಅಸಾಧ್ಯ. ಸೃಷ್ಟಿಕರ್ತನ ಆರಾಧನೆಯೇ ಈ ಧರ್ಮದ ಜೀವಾಳ. ಇಷ್ಟಲಿಂಗ ಧಾರಣೆಗೆ ಯಾವುದೇ ತೊಡಕು ಇಲ್ಲ, ಇದ್ದರೆ ಭ್ರಾಂತಿ ಇರಬಹುದು. ಎಲ್ಲ ತೊಡಕುಗಳನ್ನು ದಾಟದ ಉಪಾಸ್ಯ ಮಾರ್ಗ ಲಿಂಗಾಂಗಯೋಗ. ಇನ್ನು ಸಮಯವನ್ನು ವ್ಯರ್ಥ ಮಾಡದೆ ಲಿಂಗಾಯತರಾಗಿರಿ ! ಒಂದೊಂದು ದಿನವೂ ಅಮೂಲ್ಯ.

ರಾಯಚೂರಿನ ವೀರಶೈವ ಭಕ್ತವೃಂದದ ಪತ್ರಕ್ಕೆ ಉತ್ತರ

ವೀರಶೈವ ಪದದೊಡನೆ ವಿಚ್ಛೇದನಕ್ಕಿದು ಸಕಾಲ

- ಮಾತಾಜಿ

ಓರ್ವ ಸುಂದರನು ಸುಪುಷ್ಟನು ಸದ್ಗುಣಿಯೂ ಆದ ವರನನ್ನು ಕೈ ಹಿಡಿದು ಕನ್ಯೆಯೊಬ್ಬಳು ಹೆಂಡತಿಯಾಗಿ ಆಶ್ರಯಕ್ಕೆ ಬರುತ್ತಾಳೆ. ಆಕೆ ಅಷ್ಟೇನೂ ಚೆಲುವೆಯಲ್ಲದಿದ್ದರೂ ಸದ್ಗುಣಿಯಾದ ಪತಿಯು ಚೆನ್ನಾಗಿ ನೋಡಿಕೊಳ್ಳುತ್ತಾನೆ. ಸೌಂದರ್ಯವಿಲ್ಲದಿದ್ದರಷ್ಟೇ ಸದ್ಗುಣವೂ ಇರಬಾರದೆ ? ಬಂದು ಮನೆಗೆ ಕಾಲಿಟ್ಟ ದಿನದಿಂದಲೂ ಕಿರುಕುಳವೇ ! ಗಂಡನಿಗೆ ಮೋಸ ಮಾಡುತ್ತ ಅತ್ತೆ-ಮಾವಂದಿರಿಗೂ ದ್ರೋಹ ಬಗೆಯುತ್ತ ಮನೆಯಲ್ಲಿ ಕಳ್ಳತನ ಮಾಡುವುದು, ಪ್ರತ್ಯೇಕವಾಗಿ ಗಂಟುಕಟ್ಟುವುದು, ಹೀಗೆಯೇ ಮಾಡಿಕೊಳ್ಳುತ್ತಾ ಸಂಸಾರ ಸಾಗಿರುವಾಗ ಮಕ್ಕಳಲ್ಲಿ ಎರಡು ಗುಂಪು ಮಾಡಿದಳು. ತಂದೆಯನ್ನು, ಅಜ್ಜ-ತಾತಂದಿರನ್ನು, ಪರಿವಾರದ ಇನ್ನಿತರರಾದ ಚಿಕ್ಕಪ್ಪಂದಿರು, ಚಿಕ್ಕಮ್ಮಂದಿರನ್ನು ಕೆಲಮಕ್ಕಳು ದ್ವೇಷ ಮಾಡುವಂತೆ, ಅನಾದರ ತೋರುವಂತೆ ಪ್ರಚೋದಿಸಿದಳು, ಮಾತ್ರವಲ್ಲ ಮಕ್ಕಳಿಗೆ ಎಂಥಾ ಬುದ್ಧಿ ಕಲಿಸುವಳು ಎಂದರೆ ತನ್ನ ತಂದೆಯನ್ನು ಅಪ್ಪ ಎನ್ನಲು ಅವರು ಸಿದ್ಧರಿಲ್ಲ, ಅಜ್ಜಿ-ಅಜ್ಜರನ್ನು ಕಾಲು ಕಸಕ್ಕಿಂತಲೂ ಕಡಿಮೆಯಾಗಿ ಕಾಣುವಂತಹ ಒರಟುತನ. ಇಂಥ ಸನ್ನಿವೇಶದಲ್ಲಿ ಇರುವ ಪರಿಹಾರವೇನು ? ಒಂದು ಮನೆಯನ್ನು ಅವ್ಯವಸ್ಥೆಯ ಆಗರವನ್ನಾಗಿ ಮಾಡಿ ನಿತ್ಯವೂ ಅಸುಖಿಗಳಾಗಿ ಗೋಳಾಡುವ ಬದಲು ಪತ್ನಿಗೆ ವಿವಾಹ ವಿಚ್ಛೇದನ ಕೊಟ್ಟು ಮನೆಯ ಯಜಮಾನನಿಗೆ ನಿಷ್ಠರಾಗಿದ್ದುಕೊಂಡು, ಅಜ್ಜ-ಅಜ್ಜಿಯರನ್ನು ಗೌರವಿಸುವ, ಸೇವೆ ಮಾಡುವ ಮಕ್ಕಳೊಡನೆ ಕುಟುಂಬವನ್ನು ಸುಖ-ಶಾಂತಿಯಿಂದ ಇರಿಸುವಂತೆ ಮಾಡುವುದು. 12ನೆಯ ಶತಮಾನದಲ್ಲಿ ಅಪ್ಪ ಬಸವಣ್ಣ, ತಾಯಿ ವಚನಾಂಬಿಕೆಯ ಮಗನಾಗಿ ಲಿಂಗಾಯತ ಧರ್ಮ ಹುಟ್ಟಿತು. ಲಿಂಗಾಯತ ಧರ್ಮ ಎಂಬ ವರನನ್ನು ವೀರಶೈವ ಪಂಥ ಎಂಬ ಕನ್ಯೆ ಇಷ್ಟಲಿಂಗ ಎಂಬ ತಾಳಿಯನ್ನು ಆಯತ ಮಾಡಿಕೊಳ್ಳುವ ಮೂಲಕ ವರಿಸಿದಳು. ವೀರಶೈವರನ್ನು ಹಿಡಿದು ಅನೇಕ ಶೈವ ಮಾರ್ಗಿಗಳು ಬಂದು ಲಿಂಗಾಯತ ಸಮಾಜ ಎಂಬ ಮನೆತನವನ್ನು ಸೇರಿಕೊಂಡರೂ ಹೊಕ್ಕ ಮನೆಗೆ ಅನುಗುಣವಾಗಿ ನಡೆಯದೆ ತೌರಿನ (ವೀರಶೈವ) ಮೋಹವನ್ನು ಹಾಗೆಯೇ ಉಳಿಸಿಕೊಂಡರು. ಪತಿ-ಲಿಂಗದೇವನನ್ನು ಏಕನಿಷ್ಠೆಯಿಂದ ಆರಾಧಿಸಲಿಲ್ಲ, ಮಾವ-ಧರ್ಮಗುರು ಬಸವಣ್ಣನವರನ್ನು ಗೌರವಿಸಲಿಲ್ಲ, ಅತ್ತೆ-ಧರ್ಮಸಂಹಿತೆ ವಚನ ಸಾಹಿತ್ಯವನ್ನು ಮನ್ನಿಸಲಿಲ್ಲ ; ಈ ಪರಂಪರೆಯ ಚಿಕ್ಕಪ್ಪ-ಚಿಕ್ಕಮ್ಮಂದಿರಂತೆ ಇದ್ದ ಅಲ್ಲಮ ಪ್ರಭು, ಸಿದ್ಧರಾಮೇಶ್ವರ, ಚನ್ನಬಸವಣ್ಣ, ಅಕ್ಕಮಹಾದೇವಿ ಮುಂತಾದವರನ್ನು ಹೃತ್ಪೂರ್ವಕವಾಗಿ ಗೌರವಿಸಲಿಲ್ಲ. ವೈದಿಕ-ಶೈವದ ಕೊಳಕನ್ನೆಲ್ಲ ತಂದು ಲಿಂಗಾಯತ ಸಮಾಜದ ಮನೆಯೊಳಗೆ ಹಾಕಿದ ಅಪರಾಧ ಮಾಡಿದ್ದಲ್ಲದೆ ವೀರಶೈವ ಎಂಬ ಹೆಂಡತಿ ಗುರು-ವಿರಕ್ತರೆಂಬ ಗುಂಪುಗಳನ್ನು ಸೃಷ್ಟಿಸಿದಳು. ಪಂಚಪೀಠದ ಅನುಯಾಯಿಗಳು, ಬಸವಾನುಯಾಯಿಗಳು ಎಂಬ ಎರಡು ಗುಂಪುಗಳನ್ನು ಸೃಷ್ಟಿಸಿದಳು. ಕಟ್ಟಿಕೊಂಡ ಇಷ್ಟ ಲಿಂಗದೇವನೆಂಬ ಪತಿಯ ಬಗ್ಗೆ ನಿಷ್ಠೆ ಬೆಳಸಿಕೊಳ್ಳದೆ ಕಂಡಕಂಡ ದೇವತೆಗಳನ್ನು ಆರಾಧಿಸುವ

ಸ್ತ್ರೀಯಂತಾದಳು. 800 ವರ್ಷಗಳ ಅಶಾಂತಿ ಇನ್ನು ಸಾಕು. ಸಾಯುವವರೆಗೆ ಬೆರಣಿ ಆಯುವುದರಲ್ಲೇ ಹೋದರೆ ಇನ್ನು ಅಟ್ಟು, ಉಣ್ಣುವುದು ಯಾವಾಗ ? ಬೇರೆ ಧಾರ್ಮಿಕ ಸಮಾಜಗಳವರು ತಮ್ಮ ಧರ್ಮವನ್ನು ತಿಳಿದು ಆಚರಿಸುವ ಮೇಧಾವಿಗಳಾಗಿದ್ದರೆ, ವೀರಶೈವವನ್ನು ಆಲಂಗಿಸಿ ಬಿಗಿದು ಕೊಂಡ ಲಿಂಗಾಯತರು ಇನ್ನು ಮೊದಲನೆಯ ಪ್ರಶ್ನೆ ಧರ್ಮಗುರು ಯಾರು ? ಎಂದು ಕೇಳುವುದರಲ್ಲಿ, ಅಲ್ಲೇ ಹೊಡೆದಾಟ ಶುರುವಾಗಿ ಇನ್ನು 'L'ಕೆ.ಜಿಯಲ್ಲೇ ಇರುವ ಮಕ್ಕಳಾಗಿದ್ದಾರೆ. ಆದ್ದರಿಂದ ಇಂಥ ವಿಪರ್ಯಾಸಕ್ಕೆ ಪೂರ್ಣವಿರಾಮ ಇಡುವುದು ಬಹಳ ಅಗತ್ಯವೆನಿಸಿದೆ.

ಮೇಲಿನ ಕಥೆಯನ್ನು ಹಿನ್ನೆಲೆಯಾಗಿ ಇಟ್ಟುಕೊಂಡು ನಾನು ರಾಯಚೂರಿನ ವೀರಶೈವ ಭಕ್ತವೃಂದದ ಪತ್ರಕ್ಕೆ ಉತ್ತರಿಸುತ್ತೇನೆ. ಅವರು ಪ್ರಶ್ನೆ ಕೇಳಿರುವುದು ಕಾಶಿಪೀಠದ ಜಗದ್ಗುರು ಡಾ|| ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳಿಗಾದರೂ, ಈ ಪ್ರಶ್ನೆಗಳು ವೈಯಕ್ತಿಕವಾಗಿ ಇರದೆ ಲಿಂಗಾಯತ ಮತ್ತು ವೀರಶೈವ ಎರಡೂ ಸಮಾಜಗಳಿಗೆ ಅನ್ವಯಿಸುವ ಕಾರಣ ಶ್ರೀಗಳು ಉತ್ತರಿಸದೆ ತಪ್ಪಿಸಿಕೊಂಡು ಹೋಗಿದ್ದರೂ ನಾನು ಉತ್ತರಿಸುವ ಆಶಯ ಹೊತ್ತಿದ್ದೇನೆ.

★ವೀರಶೈವ ಭಕ್ತವೃಂದದ ಅರಿಕೆ ಪ್ರಶ್ನೆ 1. ವೀರಶೈವ/ಲಿಂಗಾಯತ ಸಿಖ್, ಬೌದ್ಧ ಧರ್ಮಗಳಂತೆ ಸ್ವತಂತ್ರ ಧರ್ಮವೆಂದು ಭಕ್ತರೆಲ್ಲರು ತಿಳಿದುಕೊಂಡಿದ್ದಾರೆ. ಅಥವಾ ಹಿಂದು (ವೈದಿಕ) ಧರ್ಮದ ಒಂದು ಅಂಗವೆ ? ಹಿಂದು ಧರ್ಮದ ಒಂದು ಅಂಗವಾಗಿದ್ದರೆ ನಾವು ಯಾವ ವರ್ಣದಲ್ಲಿ ಸೇರ್ಪಡೆಯಾಗುತ್ತೇವೆ ? ವೀರಶೈವ/ಲಿಂಗಾಯತ ಧರ್ಮವು ಒಂದು ಸ್ವತಂತ್ರ ಧರ್ಮವೆಂದು ನಂಬಿ, ಜಂಗಮರನ್ನು ಆರಾಧಕರನ್ನಾಗಿ ಅನುಸರಿಸಿದ್ದೇವೆ. ಜಂಗಮ ಮೂರ್ತಿ (ಲಿಂಗ)ಯನ್ನು ಬಿಟ್ಟು ಬೇರೆ ದೇವರುಗಳು ಇಲ್ಲವೆಂದು ನಂಬಿದ್ದೇನೆ. ನಮ್ಮನ್ನು ಶೈವ ಜಾತಿಗೆ ಸೇರ್ಪಡಿಸುವುದರಿಂದ, ನಮ್ಮ ಸ್ವತಂತ್ರಧರ್ಮವು ಅತಂತ್ರವಾಗುತ್ತದಲ್ಲವೆ ?

ಮಾತಾಜಿ : ಲಿಂಗಾಯತ ಧರ್ಮವು ಸಿಖ್, ಬೌದ್ಧ, ಜೈನ ಧರ್ಮಗಳಂತೆ ಸ್ವತಂತ್ರ ಧರ್ಮವೇ ವಿನಾ ವೀರಶೈವವು ಸ್ವತಂತ್ರ ಧರ್ಮವಲ್ಲ. ಅದು ಹಿಂದು ಧರ್ಮ ಎಂಬ ಏಕವೃಕ್ಷದೊಳಗಿನ ಶೈವ ಎಂಬ ಕೊಂಬೆಯಲ್ಲಿ ಇರುವ ಸಪ್ತಶೈವಗಳೆಂಬ ಶಾಖೆಗಳಲ್ಲಿ ಇದೂ ಒಂದು. ಹಿಂದೂ ಧರ್ಮವು 33 ಕೋಟಿ ದೇವತೆಗಳನ್ನು ನಂಬುವ, ಪ್ರಧಾನವಾಗಿ ತ್ರಿಮೂರ್ತಿಗಳಾದ ಬ್ರಹ್ಮ-ವಿಷ್ಣು-ಮಹೇಶ್ವರರನ್ನು ಒಪ್ಪಿ, ಪೂಜಿಸುವ ಧರ್ಮ. ಹಿಂದೂ ದೇವತಾ ಸಮೂಹದಲ್ಲಿ ಯಾವುದೇ ದೇವತೆಯ ಆರಾಧಕರಾಗಿದ್ದರೂ ಅವರು ಹಿಂದುಗಳು ; ಲಿಂಗಾಯತ ಧರ್ಮವು ತ್ರಿಮೂರ್ತಿಗಳನ್ನಾಗಲೀ, ಇನ್ನಿತರ ದೇವತೆಗಳನ್ನಾಗಲೀ ಪೂಜಿಸದೆ ಸೃಷ್ಟಿಕರ್ತ ಲಿಂಗದೇವನನ್ನು ಪೂಜಿಸಲು ಹೇಳುವ ಧರ್ಮ. ಆದ್ದರಿಂದ ಏಕದೇವತೋ(ಶಿವೋ)ಪಾಸನೆ ಮಾಡುವ ವೀರಶೈವವು ಹಿಂದು ಧರ್ಮದ ಅಂಗವೇ ಸರಿ ; ಆದರೆ ಲಿಂಗಾಯತವು ಸ್ವತಂತ್ರ ಧರ್ಮ. ಆಂಧ್ರ, ತಮಿಳುನಾಡು, ಕೇರಳಗಳಲ್ಲಿರುವ ವೀರಶೈವರಲ್ಲಿ ಇಂದಿಗೂ ಬ್ರಾಹ್ಮಣ ವೀರಶೈವ, ಶೂದ್ರ ವೀರಶೈವ ಎಂಬ ವಿಭಜನೆಗಳಿವೆ. ವೀರಶೈವದಲ್ಲಿ ಅಸ್ಪೃಶ್ಯರಿಗೆ ದೀಕ್ಷೆ ನಿಷಿದ್ಧ. ಕೇರಳ ವೀರಶೈವರಲ್ಲಿ 7 ಗುಂಪುಗಳಿದ್ದು, ಅದರಲ್ಲಿ 3 ಗುಂಪುಗಳು ಸಸ್ಯಾಹಾರಿಗಳು, 4 ಗುಂಪಿನವರು ಮಾಂಸಾಹಾರಿಗಳು,

ಅವರ ಅಂಗದ ಮೇಲೆ ಲಿಂಗಧಾರಣೆ ಇಲ್ಲ ; ಮಾತ್ರವಲ್ಲ ಇಷ್ಟಲಿಂಗದ ಬಗ್ಗೆ ಅವರಿಗೆ ಏನೂ ಗೊತ್ತಿಲ್ಲ. ಅಷ್ಟಾವರಣ, ಪಂಚಾಚಾರ, ಷಟಸ್ಥಲಗಳ ಗಂಧವೂ ಇಲ್ಲ. ಲಿಂಗಾಯತರು ಚತುರ್ ವರ್ಣಗಳ ವ್ಯಾಪ್ತಿಗೆ ಮೀರಿದವರು. ಹಿಂದು ಧರ್ಮವು ಚತುರ್ ವರ್ಣಾಧಾರಿತ ಸಾಮಾಜಿಕ ವ್ಯವಸ್ಥೆ ; ಈ ವ್ಯವಸ್ಥೆಯಲ್ಲಿ ಪಂಚಮ ವರ್ಣೀಯರೆಂದು ಅಸ್ಪೃಶ್ಯರನ್ನು ಪರಿಶಿಷ್ಟ ಜಾತಿಯನ್ನಾಗಿ ಇಡಲಾಗಿದೆ. ಲಿಂಗಾಯತರು ಹಿಂದುಗಳೆಂದರೆ ಹಾಗಾದರೆ ಚತುರ್‌ವರ್ಣ ವ್ಯವಸ್ಥೆಯಲ್ಲಿ ಇವರು ಯಾವ ವರ್ಣಕ್ಕೆ ಸೇರಿದವರಾಗುವರು ? ದ್ವಿಜ ದೀಕ್ಷೆ, ಜನಿವಾರವಿಲ್ಲದ ಕಾರಣ ಶೂದ್ರರಾಗುವುದಷ್ಟೆ ಅವರಿಗೆ ಉಳಿದುದು. ಆದುದರಿಂದ ಲಿಂಗಾಯತ ಧರ್ಮೀಯರಿಗೆ ಹೇಳುವುದಿಷ್ಟೇ "ವೀರಶೈವ ಪದವನ್ನು ತಗುಲಿ ಹಾಕಿಕೊಂಡು ಲಿಂಗಾಯತ ಧರ್ಮದ ಸ್ವತಂತ್ರ ಅಸ್ತಿತ್ವವನ್ನು ಕಳೆಯಬೇಡಿರಿ ಅರ್ಥಾತ್ ಅತಂತ್ರವಾಗಬೇಡಿರಿ"

ಪ್ರ. 2.ಅಖಿಲ ಭಾರತ ವೀರಶೈವ ಮಹಾಸಭೆಯು ವೀರಶೈವ/ಲಿಂಗಾಯತ ಧರ್ಮವು ಸ್ವತಂತ್ರ ಧರ್ಮವೆಂದು ಘೋಷಿಸಿದ್ದಾರೆ. ಸ್ವತಂತ್ರ ಧರ್ಮವಾಗಿದ್ದರೆ, ವೇದೋಪನಿಷತ್ತು ಆಗಮಗಳನ್ನು ಅನುಸರಿಸುವ ಅವಶ್ಯಕತೆ ಇದೆಯೆ ? ಯಜ್ಞ, ಹೋಮಾದಿಗಳನ್ನು ಆಚರಿಸುವ ಅವಶ್ಯಕತೆ ಇದೆಯೆ?

ಮಾತಾಜಿ : ಅ.ಭಾ.ವೀ. ಮಹಾಸಭೆಯವರು ಲಿಂಗಾಯತ ಸಮಾಜಕ್ಕೆ ದ್ರೋಹ ಬಗೆಯುತ್ತಲಿದ್ದಾರೆ. ತಮ್ಮ ಸಮಾಜಕ್ಕೆ ಸಂಬಂಧಿಸದ ವೀರಶೈವ ಪದವನ್ನು ತಂದು ಜೋಡಿಸಿಕೊಂಡು ಲಿಂಗಾಯತ ನಾಮದ ಬಲದ ಮೇಲೆ ವೀರಶೈವಕ್ಕೂ ಸ್ವತಂತ್ರ ಧರ್ಮದ ಮಾನ್ಯತೆ ದೊರಕಿಸಿ ಕೊಳ್ಳಬೇಕು, ಇಲ್ಲವೇ ತಾನೇ ಒಂದು ಪಾಶವಾಗಿ ಲಿಂಗಾಯತ ಧರ್ಮಕ್ಕೆ ಮಾನ್ಯತೆ ಸಿಗದಂತೆ ನೋಡಿಕೊಳ್ಳಬೇಕು ಎಂಬ ಸಂಚನ್ನು ಮಾಡುತ್ತಿದ್ದಾರೆ.

ಈ ಎರಡನೆಯ ಪ್ರಶ್ನೆಯನ್ನು ರಾಯಚೂರು ಭಕ್ತವೃಂದದವರು ಕಾಶಿ ಸ್ವಾಮಿಗಳಿಗೆ ಕೇಳುವುದಕ್ಕಿಂತ ವೀರಶೈವ ಮಹಾಸಭೆಯವರಿಗೆ ಕೇಳಬೇಕಾದುದು ಅವಶ್ಯವಿದೆ. ವೀರಶೈವ ವಿದ್ಯಾಭಿವೃದ್ಧಿ ನಿಧಿ ಸಂಸ್ಥೆಯವರು ದಿ. 18.8.2001 ರಂದು ಎಸ್.ಜೆ.ಎಮ್.ಟವರ್ಸ್ ಉದ್ಘಾಟಿಸಿದರು. ಇದಕ್ಕೆ ಪೂರ್ವಭಾವಿಯಾಗಿ ಧಾರ್ಮಿಕ ವಿಧಿ ವಿಧಾನ ನಡೆಸಿದಾಗ ಒಂದೂವರೆ ಲಕ್ಷ ರೂಪಾಯಿಗಳಷ್ಟು ಬೆಲೆ ಬಾಳುವ ವಸ್ತುಗಳನ್ನು ಹೋಮಕುಂಡದಲ್ಲಿ ಆಹುತಿ ನೀಡಿದರಂತೆ. ಇದಕ್ಕಿಂತಲೂ ಪರಮಪಾತಕ ಲಿಂಗಾಯತರಿಗೆ ಇನ್ನಾವುದು ಅಲ್ಲ. ವೀರಶೈವರು ಸಂಯೋಜಿಸಿದ್ದ ಒಂದೂವರೆ ಲಕ್ಷ ರೂಪಾಯಿಗಳ ಸಾಮಗ್ರಿ, ಸುಟ್ಟ ಹೋಮವು ಲಿಂಗಾಯತ ಧರ್ಮಕ್ಕೆ ಆಘಾತಕಾರಿ, ಪಾಪಮಯ ಎಂದು ಏಕೆ ಅನ್ನಿಸಲಿಲ್ಲವೊ ? ಯಾರೋ ಕೇಳಿದ್ದಕ್ಕೆ "ನಾವು ವೀರಶೈವರು, ಮಾಡಿಕೊಳ್ಳುತ್ತೇವೆ." ಎಂಬ ಧಾರ್ಷ್ಟ್ಯದ ಉತ್ತರವನ್ನು ಸಂಯೋಜಕರು ಕೊಟ್ಟರಂತೆ. ಇಂಥ ವೀರಶೈವದೊಡನೆ ಪ್ರಗತಿಪರ ದೃಷ್ಟಿಯ ಲಿಂಗಾಯತವನ್ನು ಸಮೀಕರಿಸುವ ಕೆಲಸವನ್ನು ರಾಯಚೂರಿನ ಭಕ್ತವೃಂದದವರು ಕೈ ಬಿಡುವುದು ಒಳ್ಳೆಯದು.

ಪ್ರಶ್ನೆ 3. "ಕಾಯಕವೇ ಕೈಲಾಸ", "ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ" ಮುಂತಾದ ವಿಚಾರಧಾರೆಗಳನ್ನು ಶಿವಶರಣರು ಕೊಟ್ಟ ವಚನಶಾಸ್ತ್ರವು ನಮ್ಮ ವೀರಶೈವ/

ಲಿಂಗಾಯತ ಧರ್ಮಗ್ರಂಥಗಳಲ್ಲವೇ ? ಅವುಗಳು ನಮಗೆ ದಾರಿದೀಪಗಳಂತೆ, ನಮ್ಮ ಧರ್ಮವನ್ನು ಸ್ವತಂತ್ರ ಧರ್ಮವೆಂದು ಸಾರಿ ಹೇಳಿವೆ.

ಪ್ರಶ್ನೆ 4. ವಿಶ್ವಾತ್ಮನ ಕುರುಹಾದ "ಇಷ್ಟಲಿಂಗ"ದ ಮತ್ತು ಗುರು ಜಂಗಮರ ಹೊರತು ಇನ್ನಿತರ ದೇವರನ್ನು ಆರಾಧಿಸುವ ಅವಶ್ಯಕತೆ ಇದೆಯೆ ? ಹಾಗಾದರೆ ಬಹುದೇವತೋಪಾಸನೆ ಮಾಡಿದಂತಾಗಲಿಲ್ಲವೆ ? ಅದು ನಮ್ಮ ಧರ್ಮದ ವಿರೋಧವಲ್ಲವೆ ?

ಪ್ರಶ್ನೆ 5. "ಮಾನವ ಧರ್ಮಕ್ಕೆ ಜಯವಾಗಲಿ" ಎಂದು ಶ್ರೀ ಪಂಚಾಚಾರ್ಯರ ಘೋಷಣೆ ಇದೆ ಈ ಘೋಷಣೆ ಯಾವ ಧರ್ಮಕ್ಕೆ ಅನ್ವಯಿಸುತ್ತದೆ ? ಜಾತಿಯನ್ನು ಆಧರಿಸಿ, ಅನೇಕ ಉಪ ಪಂಗಡಗಳು ತಮ್ಮ ತಮ್ಮ ಗುಂಪು ಕಟ್ಟಿಕೊಂಡು ಸಮಾಜವನ್ನು ಒಡೆಯುತ್ತಿವೆ. ಇದಕ್ಕೆ ನಮ್ಮವರೇ ಆದ ಕೆಲವು ಮಠಾಧೀಶ್ವರರು, ಜಗದ್ಗುರುಗಳು ಪ್ರೋತ್ಸಾಹ ಕುಮ್ಮಕ್ಕು ನೀಡುತ್ತಿದ್ದಾರೆ. ಇದನ್ನು ಹೋಗಲಾಡಿಸಲು ತಮ್ಮ ಕಡೆಯಿಂದ ಏನಾದರೂ ಪ್ರಯತ್ನ ನಡೆದಿದೆಯೇ ?

ಪ್ರಶ್ನೆ 6. ಅಂಗದ ಮೇಲೆ ಲಿಂಗವಿದ್ದವರೆಲ್ಲ ಸಮಾನರಲ್ಲವೆ ? ಹುಟ್ಟಿದ ಜಾತಿಯ ಆಧಾರದ ಮೇಲೆ ಮೇಲು ಕೀಳು ಮಾಡಬಹುದೆ ? ಇದರಲ್ಲಿ ಈಗಿದ್ದ ಒಳಪಂಗಡಗಳನ್ನು ಒಗ್ಗೂಡಿಸುವುದೇ ತಮ್ಮ ಆದ್ಯ ಕರ್ತವ್ಯವೆಂದು ನಂಬಿದ್ದೇವೆ. ತಾವುಗಳು ಈ ದಿಸೆಯಲ್ಲಿ ಪ್ರಯತ್ನಿಸಿದರೆ, ಈ ಧರ್ಮವು ಬೃಹತ್ತಾಗಿ ಇತರ ಧರ್ಮಗಳಂತೆ ಬೆಳೆಯಬಹುದಲ್ಲವೆ ?

ಪ್ರಶ್ನೆ 7. ಇಹಲೋಕ ಪರಲೋಕದ ಬಗ್ಗೆ ಮತ್ತು ಪಾಪ ಪುಣ್ಯಗಳು ಜನ್ಮಕ್ಕೆ ಅಂಟಿಕೊಂಡು ಬರುತ್ತವೆ. ಎಂಬ ವಿಚಾರಕ್ಕೆ ತಮ್ಮ ಅಭಿಪ್ರಾಯವೇನು ? ಜೀವರಿಗೆ ಪರಮಾತ್ಮನೇ ಪ್ರೇರಕನು, ಸಾಕ್ಷಿಭೂತನಾದ ಮೇಲೆ ಪಾಪ ಪುಣ್ಯಗಳ ಫಲ ಎಲ್ಲಿಯದು ?

ಮಾತಾಜಿ : ಪ್ರಶ್ನೆ 3,4,5,6,7, ಕೇಳಿರುವ ಪ್ರಶ್ನೆಗಳು ಲಿಂಗಾಯತ ಧರ್ಮಕ್ಕೆ ಸಂಬಂಧಿಸಿದವು. ಇವನ್ನು ವೀರಶೈವ ಗುರುಗಳಿಗೆ, ಮಹಾಸಭೆಗೆ ಹಾಕುವುದೇ ಮೊದಲ ತಪ್ಪು.

ಪ್ರಶ್ನೆ : 8 ನಮ್ಮ ಸಮಾಜದಲ್ಲಿ ಅನೇಕ ಧರ್ಮಗುರುಗಳು ವಿವಿಧ ತರಹದ ಬೋಧನೆಗಳಿಂದ ಗೊಂದಲ ಉಂಟುಮಾಡಿದ್ದಾರೆ. ಇದನ್ನು ನಿವಾರಿಸಲು ಎಲ್ಲ ಧರ್ಮಗುರುಗಳು ಒಂದಾಗಿ ಚರ್ಚಿಸಿ ಒಂದು ನಿರ್ಣಯಕ್ಕೆ ಬಂದು ದಾರಿ ತೋರಿಸಿದರೆ, ನಮ್ಮಂಥ ಅಜ್ಞಾನಿ ಭಕ್ತರಿಗೆ ಸಮಂಜಸವಲ್ಲವೆ ? ಈ ನಿಟ್ಟಿನಲ್ಲಿ ತಮ್ಮ ಕಡೆಯಿಂದ ಪ್ರಯತ್ನ ತಾವು ನಡೆಸಿದ್ದಿರೆಂದು ನಮ್ಮ ನಂಬಿಕೆ.

ಮಾತಾಜಿ : "ಹಾವು ಸಾಯಲಿಲ್ಲ, ಕೋಲು ಮುರಿಯಲಿಲ್ಲ" ಎಂಬ ಈ ಪ್ರಶ್ನೆ ಲಿಂಗಾಯತ ಸಮಾಜದಲ್ಲಿ ಎಂದೂ ಉತ್ತರ ಕಂಡುಕೊಳ್ಳಲಾರದಂತಹುದು. ಗುರುಗಳು ನೂರಾರುಭಿನ್ನಾಭಿಪ್ರಾಯ ಹೊಂದಿದ್ದು ಅವರೆಂದೂ ಒಂದು ವೇದಿಕೆಗೆ ಬರುವುದಿಲ್ಲ. ಇವರು ಒಂದು ವೇದಿಕೆಗೆ ಬಂದು ನಿರ್ಣಯ ತೆಗೆದುಕೊಳ್ಳುವವರೆಗೆ ಸಮಾಜವು ಕಾಯ್ದರೆ ಅದರ ಗತಿ ಏನಾದೀತು ? ಸರಕಾರಗಳು ಬರ ಪರಿಹಾರಕ್ಕೆ ಸಮಿತಿಗಳನ್ನು ನೇಮಕ ಮಾಡಿ, ಅಧ್ಯಯನ, ಕೇಂದ್ರ ಮುಂದಾಗಬೇಕೋ, ರಾಜ್ಯ ಮುಂದಾಗಬೇಕೋ ಎಂದೆಲ್ಲ ಚರ್ಚಿಸುವುದರಲ್ಲಿ ಬದುಕಿರುವ

ಅಷ್ಟಿಷ್ಟು ಜಾನುವಾರುಗಳು ಕಸಾಯಿ ಖಾನೆಗಾದರೂ ಹೋಗಿರುತ್ತವೆ, ಇಲ್ಲದಿದ್ದರೆ ಮೇವು-ನೀರು ಇಲ್ಲದೆ ಸಾಯುವಂತೆ ಆಗುತ್ತಿದೆ. ಆದಕಾರಣ ಪ್ರಾಜ್ಞ ಜನರೇ ಈಗ ಮುಂದಾಗಬೇಕೇ ವಿನಾ ಗುರುಗಳ ಮುಖ ನೋಡುತ್ತ ಕೂತರೆ ಆಗದು.

ಪ್ರಶ್ನೆ 9 : 12ನೇ ಶತಮಾನದಲ್ಲಿ ಹುಟ್ಟುಹಾಕಿದ ಬಸವಾದಿ ಪ್ರಮಥರ ಶಿವಶರಣರ ಸಾಮಾಜಿಕ ಕ್ರಾಂತಿಯನ್ನು ತಾವುಗಳು ಮುಂದುವರಿಸಿಕೊಂಡು ಹೋಗುವುದು ಸೂಕ್ತವಲ್ಲವೆ ? ಅದರಿಂದ ನಮ್ಮ ಧರ್ಮ ಇಮ್ಮಡಿಯಾಗಿ, ಮುಮ್ಮಡಿಯಾಗಿ, ಕ್ರೈಸ್ತ, ಮುಸ್ಲಿಂ, ಬೌದ್ಧ ಧರ್ಮಗಳಂತೆ ಜಗತ್ತಿನ ತುಂಬ ಪ್ರಸಾರವಾಗಬಹುದು.

ಮಾತಾಜಿ : ಪಾಪ, ಕಟುಕನ ಮುಂದೆ ಕುರಿಯು ಪ್ರಾಣಭಿಕ್ಷೆ ಬೇಡಿದಂತೆ ರಾಯಚೂರಿನ ವೀರಶೈವ ಭಕ್ತ ವೃಂದದವರು ಕಾಶೀ ಜಗದ್ಗುರುಗಳಿಗೆ ಎಂಥಾ ಕಳಕಳಿಯ ಸೂಚನೆ ನೀಡಿ 12ನೇ ಶತಮಾನದ ಬಸವಾದಿ ಪ್ರಮಥರ ಸಾಮಾಜಿಕ ಕ್ರಾಂತಿ ಮುಂದುವರಿಸಲು ವಿನಂತಿಸಿದ್ದಾರೆ. ಲಿಂಗಾಚಾರ-ಏಕಲಿಂಗನಿಷ್ಠೆಯಿಂದ ಕೂಡಿದ ಏಕದೇವೋಪಾಸನೆ, ಸದಾಚಾರ - ಕಾಯಕ - ದಾಸೋಹಗಳಿಂದ ಕೂಡಿದ ಆರ್ಥಿಕ ಸಮಾನತೆ, ಶಿವಾಚಾರ-ಧಾರ್ಮಿಕ /ಸಾಮಾಜಿಕ ಸಮಾನತೆ, ಗಣಾಚಾರ - ಅನ್ಯಾಯ ಅಸಮಾನತೆಯ ವಿರುದ್ಧ ಹೋರಾಟ, ಭೃತ್ಯಾಚಾರ - ವ್ಯಕ್ತಿಗಿಂತ ಸಮಾಜ ಶ್ರೇಷ್ಠ ಎಂದು ದಾಸೋಹಂಭಾವದಿಂದ ವ್ಯಕ್ತಿ ಮಾಡಬೇಕಾದ ಸೇವೆ ; ಈ ಪಂಚಾಚಾರಗಳನ್ನು ಕಂಡರೆ ಪಂಚಾಚಾರ್ಯ ಸ್ವಾಮಿಗಳು ಸಿಡಿದು ಬೀಳುವರು. ಇವರು ಇತರರ ಹೆಗಲೇರಿ ಅಡ್ಡಪಲ್ಲಕ್ಕಿ ಹತ್ತಿ ಮಾನವ ಧರ್ಮಕ್ಕೆ ಜಯವಾಗಲಿ ಎಂದು ಘೋಷಿಸುವವರು 12ನೆಯ ಶತಮಾನದ ಕ್ರಾಂತಿಯನ್ನು ಮುಂದುವರಿಸುವರೆ ?. "ಅಕ್ಕಿ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ", ಅಕ್ಕಿಯೂ ಸವೆಯಬಾರದು ನೆಂಟರೂ ಮುನಿಯಬಾರದು, ಎಂಬ ಧೋರಣೆಯನ್ನು ವೀರಶೈವ ಭಕ್ತ ವೃಂದವು ಮೊದಲು ಕೈಬಿಡುವುದು ಒಳ್ಳೆಯದು. 12ನೆಯ ಶತಮಾನದ ಶರಣರ ಪ್ರಗತಿಪರ ಧೋರಣೆ ಮುಂದುವರಿದು ಲಿಂಗಾಯತ ಧರ್ಮವು ಇಮ್ಮಡಿ, ಮುಮ್ಮಡಿಯಾಗಿ ಬೆಳೆದು ಕ್ರೈಸ್ತ, ಮುಸ್ಲಿಂ, ಬೌದ್ಧಧರ್ಮಗಳಂತೆ ಜಗತ್ತಿನಲ್ಲಿ ಪ್ರಚಾರವಾಗಬೇಕು ಎಂಬ ಅಪೇಕ್ಷೆ ಈ ಭಕ್ತವೃಂದಕ್ಕೆ ಕರಪತ್ರದಲ್ಲಿ ಮುದ್ರಿಸಿರುವಂತೆ ಇದ್ದರೆ ಅವರು ತಾವು ಮಾಡಬಹುದಾದ ಮೊದಲ ಕಾರ್ಯವೆಂದರೆ ವೀರಶೈವ/ ಲಿಂಗಾಯತ ಎಂದು ಬರೆಯುವುದನ್ನು ಬಿಡಬೇಕು. ನಂತರ ಕಾಶಿ ಸ್ವಾಮಿಗಳಿಗೆ ಪ್ರಶ್ನೆ ಕೇಳಬೇಕು. ಶರಣ ಮಾರ್ಗಿಗಳಾದ ಲಿಂಗಾಯತರು ಪ್ರವಾಸ ಹೋಗಿರುತ್ತಾರೆ ಎಂದುಕೊಳ್ಳುವ. ಹೋದೆಡೆಯಲ್ಲೆಲ್ಲ ಲಿಂಗಾಯತರ ಹೋಟೆಲ್ ಇವರಿಗೆ ಸಿಗುವುದಿಲ್ಲ. ಆಗ ಕಡೆಗೆ ಸಸ್ಯಾಹಾರಿ ಹೋಟೆಲನ್ನು ಹುಡುಕುತ್ತಾರೆ. ವೆಜ್/ನಾನ್ ವೆಜ್ ಎಂದಿದ್ದರೆ ಅಲ್ಲಿಗೆ ಹೋಗುವುದಿಲ್ಲ. ಕೇವಲ ವೆಜ್-ಸಸ್ಯಾಹಾರಿ ಎಂದಿದ್ದಲ್ಲಿ ಮಾತ್ರ ಹೋಗುತ್ತಾರೆ. ಹಾಗೆ ಲಿಂಗಾಯತ/ವೀರಶೈವ ಎಂಬುದು ಸಹ ವೆಜ್/ನಾನ್‌ವೆಜ್ ಎಂದಂತೆ ಆಗುತ್ತದೆ. ನಾವು ಕೇರಳಕ್ಕೆ ಹೋದಾಗ ಅಲ್ಲಿಯ ವೀರಶೈವರು ಬಹುಪಾಲು ಮಾಂಸಾಹಾರಿಗಳೇ ಆದ್ದರಿಂದ ನಮ್ಮನ್ನು ಪ್ರಸಾದಕ್ಕೆ ಕರೆಯಲಾಗದೆ ಶಂಕರಾಚಾರ್ಯರ ಮಠದಲ್ಲಿ ಉಳಿಸಿ, ಪ್ರಸಾದ ವ್ಯವಸ್ಥೆ ಮಾಡಿಸಿದ್ದರು.

10. ವಿವಾಹ ಮತ್ತು ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳಲ್ಲಿ, ಸಂಸ್ಕೃತ ಮಂತ್ರಗಳನ್ನು

ನಿಷೇಧಿಸಿ, ಕನ್ನಡ ಭಾಷೆಯಲ್ಲಿ ಸರ್ವಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಉಪದೇಶ ಮಾಡಿದರೆ ಅದರ ಲಾಭ ಪಡೆಯಬಹುದು. ಲಗ್ನ ಸಮಾರಂಭದ ಮೊದಲು ವಧುವರರಿಗೆ ಲಿಂಗಧಾರಣೆಯನ್ನು ಕಡ್ಡಾಯವಾಗಿ ಮಾಡಿಸಬೇಕೆಂದು ಪರಿಪರಿಯಾಗಿ ತಮ್ಮಲ್ಲಿ ಬೇಡಿಕೊಳ್ಳುತ್ತೇವೆ.

11. ನಾವು ಸತ್ಯ ನಿಷ್ಠ ಕಾಯಕದಲ್ಲಿ ನಂಬಿಕೆ ಇಡಬೇಕೆ ? ಅಥವಾ ಜ್ಯೋತಿಷ್ಯ, ಮಂತ್ರ, ತಂತ್ರಗಳನ್ನು ನಂಬಬೇಕೆ ?

12. ಭಕ್ತಸ್ಥಲದಿಂದ ಮಹೇಶ್ವರ ಸ್ಥಲಕ್ಕೆ, ಮಹೇಶ್ವರ ಸ್ಥಲದಿಂದ, ಗುರುಸ್ಥಲಕ್ಕೆ ಬರಲು, ಮಾಡಬೇಕಾಡ ಸಾಧನೆಯ ಮಾನದಂಡವೇನು ? ಹಲವಾರು ಶಿವಶರಣರು ಸಾಧನೆಮಾಡಿ ಪೂಜ್ಯರಾಗಿ ಧರ್ಮವನ್ನು ಉದ್ದರಿಸಿದರು. ಕಲಬುರ್ಗಿಯ ಪೂಜ್ಯ ಶ್ರೀ ಶರಣಬಸವೇಶ್ವರರು ಮತ್ತು ಸಜ್ಜಲಗುಡ್ಡದ ಶರಣಮ್ಮನವರು ಸಾಧಕರಲ್ಲವೆ ?

13. 'ಮನೆಗೆದ್ದು ಮಾರುಗೆದಿ' ಎಂಬ ನಾಣ್ಣುಡಿಯಂತೆ, ಹೆಂಡರು ಮಕ್ಕಳನ್ನುಸನ್ಮಾರ್ಗಕ್ಕೆ ಹಚ್ಚುವುದೇ ವೀರಶೈವ ಧರ್ಮಸಾರವೆಂದು, ಶರಣರು ಸಾರಿ ಹೇಳಿದ್ದಾರೆ. ಅಜ್ಞಾನಿಗಳಾದ ನಮಗೆ ಸರಳ, ಸುಲಭವಾದ ಧರ್ಮದ ಅವಶ್ಯಕತೆ ಇದೆ. ಅದನ್ನು ಸರಳರೂಪದಲ್ಲಿ ಅನುಸರಿಸಿಕೊಂಡು ಹೋಗುವದೇ ನಮ್ಮ ಧ್ಯೇಯವೆಂದು ನಂಬಿದ್ದೇವೆ. ದಯಮಾಡಿ ಈ ದಿಶೆಯಲ್ಲಿ ಆಶೀರ್ವದಿಸುವರೆಂದು ನಂಬಿದ್ದೇವೆ.

14. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಜಂಗಮ (ಮಹೇಶ್ವರ) ಕ್ಷೇಮಾಭಿವೃದ್ಧಿ ಸಂಘವನ್ನು ಸ್ಥಾಪಿಸಿಕೊಂಡು, ಅಲ್ಲಲ್ಲಿ ಅನೇಕ ಸಮಾವೇಶಗಳನ್ನು ಮಾಡಿಕೊಂಡು, ತಮ್ಮ ಜಾತಿ ಜನರಿಗಾಗಿ ಪ್ರತ್ಯೇಕ ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕೆ ಪಂಚ ಪೀಠದ ಎಲ್ಲ ಮಠಾಧೀಶ್ವರರ ಬೆಂಬಲವಿದೆ ಹಾಗೂ ಲಿಂಗಾಯತ/ವೀರಶೈವ ಧರ್ಮದ ಭಕ್ತರನ್ನು ಕಡೆಗಣಿಸಿದ್ದಾರೆ. ವೀರಶೈವರಿಂದ ಪ್ರತ್ಯೇಕವಾಗಿದ್ದಾರೆ. ಅಂತೆಯೇ ಹಿಂದು ಬೇಡಜಂಗಮರೆಂದು ಸಾರಿ ಹೇಳಿದ್ದಾರೆ. ಬೇಲಿಯೇ ಎದ್ದು ಹೊಲ ಮೆಯಿದಂತಾಗುತ್ತದೆ. ಧರ್ಮಾಧಿಕಾರಿಗಳೇ ಧರ್ಮವನ್ನು ಬಿಟ್ಟುಹೋಗುವಾಗ ನಮ್ಮಂಥ ಭಕ್ತರ ಪಾಡೇನು ? ಸ್ವಾಮಿಗಳನ್ನು ನಿರ್ಮಿಸುವ, ಜಂಗಮ ಜಾತಿಗೆ ಸೀಮಿತವಾಗಲಿಕ್ಕೆ ಹತ್ತಿದ್ದಾರೆ. ಇಲ್ಲಿಯವರೆಗೆ ಪಂಚ ಪೀಠಾಧೀಶರು ಸಮಾಜಕ್ಕೆ ಏನು ಮಾಡಿದ್ದಾರೆ ? ರಾಜ್ಯದಲ್ಲಿ ಹಿರಿಯ ಕಿರಿಯ ಒಟ್ಟು 33 ಸಾವಿರ ಸ್ವಾಮಿಗಳಿದ್ದಾರೆ. ಒಬ್ಬ ಸ್ವಾಮಿಯು ವಾಲಂಟರಿಯಾಗಿ, ಭಕ್ತರ ಮನೆಗೆ ಹೋಗಿ, ಅಷ್ಟಾವರಣ, ಪಂಚಾಚಾರ, ಷಟಸ್ಥಲ ವಿಚಾರವನ್ನೇ ಹೇಳಿಕೊಟ್ಟಿಲ್ಲ, ಭಕ್ತರೆಂದರೆ ಅಜ್ಞಾನದಿಂದ ಕೂಡಿದ ಗುಲಾಮರೆಂದು ಭಾವಿಸಿದ್ದಾರೆ. ಸಮಾಜದಲ್ಲಿರುವ ಒಳಪಂಗಡಗಳನ್ನು ಕೂಡಿಸಲಿಲ್ಲ ಒಕ್ಕಟ್ಟು, ಪ್ರೀತಿ, ಭಾವೈಕ್ಯತೆ ಬೆಳೆಸಲಿಲ್ಲ, ಶಿಷ್ಯನಲ್ಲಿ ಗುರುವನ್ನು ಮೀರಿಸುವ ಜ್ಞಾನ ಸಂಪನ್ನತೆ , ಆಳವಾದ ಅನುಭವ, ದೈವಾನುಕೂಲತೆಗಳನ್ನು ಪಡೆದ ದೈವತ್ವದ ಗುಣಗಳನ್ನು ಕಂಡರೂ, ಇವರನ್ನು ಯಾವ ಮಠಕ್ಕೂ ಸ್ವಾಮಿಗಳನ್ನಾಗಿ ಮಾಡಲಿಲ್ಲ. ವೀರಶೈವ ಧರ್ಮವು ಪುನಃ ಜಾತಿ ವ್ಯವಸ್ಥೆಯನ್ನು ಮುಂದೆ ಮಾಡಿ, ಜಾತಿ-ಜಂಗಮರಿಗೆ ಪುರೋಹಿತ ಶಾಹಿಯನ್ನು ವಹಿಸಿದರೆ

ಸಮಾಜದವರು ಏನು ಮಾಡಬೇಕು ? ಭಕ್ತರೆ ಬರದಿದ್ದರೆ ಮಠಗಳಿಗೆ ಬರಗಾಲವಲ್ಲವೆ ?

15. ತಮ್ಮ ಈ 14 ದಿನಗಳ ಶ್ರೀ ಸಿದ್ಧಾಂತ ಶಿಖಾಮಣಿ ಆಶೀರ್ವಚನ ಕಾರ್ಯಕ್ರಮದಲ್ಲಿ, ಲಿಂಗಾಯತರಲ್ಲದ ಅನ್ಯ ಧರ್ಮೀಯರಿಗೆ ಲಿಂಗಧಾರಣೆ ಮಾಡುವ ದೀಕ್ಷೆ ಕೊಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವಿರಾ. ತಾವು ಸಕಲ ಧರ್ಮಸಮ್ಮೇಳನವೆಂದು ಪದೇ ಪದೇ ಘೋಷಿಸುತ್ತಿರುವಿರಿ. ತಮ್ಮ ಈ ಕರೆಗೆ ಓಗೊಟ್ಟು ಅನ್ಯ ಧಾರ್ಮಿಕರಾದ, ಸವರ್ಣೀಯರು, ಕ್ರೈಸ್ತರು, ಮುಸ್ಲಿಂಮರು ಬಂದು ಧರ್ಮ ಸ್ವೀಕಾರ ಮಾಡಿದ್ದಾರೆಯೇ ?

ಮಾತಾಜಿ : ಮಾತೃ ಭಾಷೆಯಲ್ಲಿ ಧಾರ್ಮಿಕ ವಿಧಿ - ವಿಧಾನ ನೆರವೇರಿಸಬೇಕು ಎಂಬ ಆಲೋಚನಾ ವಿಧಾನವಾಗಲಿ. (ಪ್ರಶ್ನೆ.10) ಜೋತಿಷ್ಯ ಮಂತ್ರ ತಂತ್ರ ನಂಬಬಾರದು., (ಪ್ರಶ್ನೆ.11) ಜಂಗಮತ್ವವು ಜಾತಿಯಿಂದಲ್ಲ ಸಾಧನೆಯಿಂದ ಬರುವಂಥದು. (12) ಲಿಂಗಾಯತರಲ್ಲಿ ಒಳಪಂಗಡಗಳನ್ನು ಪ್ರೋತ್ಸಾಹಿಸಬಾರದು, ಜಂಗಮ ಎನ್ನುವುದು ಜಾತಿಯಿಂದ ಬರದು; ಜಂಗಮರು ಅಥವಾ ಮಹೇಶ್ವರರು ಲಿಂಗಾಯತರಲ್ಲಿನ ಪುರೋಹಿತ ವೃತ್ತಿಯವರು ಅವರು ಹಿಂದುದೊಳಗಣ ಒಂದು ಪ್ರತ್ಯೇಕ (ಪರಿಶಿಷ್ಟ) ಜಾತಿಯಲ್ಲ ; ಎಂಬುವುವೆಲ್ಲ ಪ್ರಗತಿಪರ ಲಿಂಗಾಯತ ಧರ್ಮದ ಆಲೋಚನಾ ಸರಣಿ. ಆದ್ದರಿಂದ ಲಿಂಗಾಯತರು ಮತ್ತು ವೀರಶೈವರು ತಮ್ಮ ತಮ್ಮ ಧಾರ್ಮಿಕ, ಸೈದ್ಧಾಂತಿಕ ಸೀಮೆಕಲ್ಲು (border stones) ಗಳನ್ನು ಸ್ಪಷ್ಟವಾಗಿ ಗುರುತಿಸಿಕೊಂಡು ನೆಮ್ಮದಿಯಿಂದಿರುವುದು ಒಳ್ಳೆಯದು. ಕೇವಲ ಸದಸ್ಯತ್ವದ ಹಣ ಸಂಗ್ರಹಣೆ ಮಾಡುವ ಏಕೈಕ ಗುರಿಯಿಂದ ಲಿಂಗಾಯತ ಧರ್ಮೀಯರನ್ನು ವೀರಶೈವರೆಂದು ಕರೆದುಕೊಳ್ಳಲು ಪ್ರಚೋದಿಸುತ್ತಿರುವ ವೀರಶೈವ ಮಹಾಸಭೆ ತನ್ನ ಸಮಾಜ-ಧರ್ಮಕ್ಕೆ ಯಾವ ಅನ್ಯಾಯ ಮಾಡುತ್ತಿದ್ದೇನೆ ಎಂಬ ಅರಿವನ್ನು ಹೊಂದಿಲ್ಲದುದು ನಿಜಕ್ಕೂ ವಿಷಾದನೀಯ.

ಸಂಖ್ಯಾ ಬಲಕ್ಕಿಂತ ಸತ್ವ ಬಲ ಬಹಳ ಮುಖ್ಯ

ಆಂತರಿಕ ವ್ಯತ್ಯಾಸ, ವೈರುಧ್ಯಗಳಿಂದ ಕೂಡಿ ಸದಾ ತಿಕ್ಕಾಡುವ ವಿಚಾರಧಾರೆ ಹೊಂದಿದವರೆಲ್ಲರನ್ನು ವೀರಶೈವ/ಲಿಂಗಾಯತ ಎಂದು ಕರೆಯುತ್ತ ಬಹು ದೊಡ್ಡ ಸಂಖ್ಯೆ ಇದೆ ಎಂದು ತೋರಿಸಿಕೊಳ್ಳುವುದಕ್ಕಿಂತಲೂ ಸೈದ್ಧಾಂತಿಕ, ಆಚಾರ-ವಿಚಾರಗಳಲ್ಲಿ ಶುಚಿತ್ವ ಹೊಂದಿದ ಒಂದು ಜಾಗೃತಗೊಂಡ ಸಮೂಹವನ್ನು ಸಂಘಟಿಸುವುದು ಒಳ್ಳೆಯದು. ಓರ್ವ ಧರ್ಮಗುರು (ಧರ್ಮಪಿತ ಬಸವಣ್ಣನವರು) ಒಂದು ಧರ್ಮ ಸಂಹಿತೆ (ವಚನ ಸಾಹಿತ್ಯ) ಒಂದು ಧರ್ಮಲಾಂಛನ (ಇಷ್ಟಲಿಂಗ) ಒಬ್ಬ ದೇವ(ಲಿಂಗದೇವ) ನಲ್ಲಿ ವಿಶ್ವಾಸ - ಹೀಗೆ ಒಮ್ಮತವು ಮೂಡಿದರೆ ಆಗ ಈ ಧರ್ಮವನ್ನು ಆಳವಾಗಿ, ವಿಸ್ತಾರವಾಗಿ ಅಭ್ಯಾಸ ಮಾಡಲು, ಅನುಷ್ಠಾನ ಮಾಡಲು, ಪ್ರಚಾರ ಮಾಡಲು ಸಾಧ್ಯವಾಗುತ್ತದೆ. ಈಗಲೂ ಲಿಂಗಾಯತರು ಎಚ್ಚೆತ್ತುಕೊಳ್ಳದಿದ್ದರೆ ಧರ್ಮಗುರು ಬಸವಣ್ಣನವರಿಗೆ ದ್ರೋಹ ಮಾಡಿದ ಪಾಪದಿಂದ ಪಾರಾಗರು, ಆದಿ ಶರಣರ ಆಶೋತ್ತರವನ್ನು ಪೂರೈಸರು.

ಕಲ್ಯಾಣ ಕಿರಣದ ಪ್ರತಿಗಳು ಎರಡು ಬರುತ್ತಿದ್ದರೆ ಅವಶ್ಯವಾಗಿ ಒಂದರ ಚಂದಾ ನಂಬರ ತಿಳಿಸಿ ಪತ್ರ ಬರೆಯಿರಿ. -ವ್ಯವಸ್ಥಾಪಕರು



ಕುಂಬಳಗೋಡು ಬಳಿಯ ಬಸವ ಗಂಗೋತ್ರಿಯಲ್ಲಿ
ದಿ. 14-10-2001ರಿಂದ 28-10-2001ರವರೆಗೆ.

ಬಸವ ತತ್ತ್ವ ತರಬೇತಿ ಕಮ್ಮಟ

ಸದುಪಯೋಗಪಡಿಸಿಕೊಳ್ಳಲು ಕರೆ

ಧರ್ಮವು ಸೈದ್ಧಾಂತಿಕ ಮುಖವನ್ನು ಒಳಗೊಂಡಂತೆ ಆಚಾರಾತ್ಮಕ ಮುಖವನ್ನೂ ಹೊಂದಿದೆ. ಮಾನವನ ಹುಟ್ಟಿನಿಂದ ಸಾವಿನವರೆಗೆ ವಿವಿಧ ಚಟುವಟಿಕೆಗಳು ಅನಿವಾರ್ಯವಾಗಿರುತ್ತವೆ. ಆ ಚಟುವಟಿಕೆಗಳಿಗೆ ಧಾರ್ಮಿಕ ಸ್ವರೂಪ ಕೊಡುವುದು ಅತ್ಯಂತ ಅಗತ್ಯವಾಗಿರುತ್ತದೆ. ಬಹುಮುಖಿಯಾದ ಉದ್ದೇಶವನ್ನು ಇರಿಸಿಕೊಂಡು ಬಸವ ತತ್ತ್ವ ತರಬೇತಿ ಕಮ್ಮಟವನ್ನು ವಿಶ್ವಕಲ್ಯಾಣ ಮಿರ್ಷನ್ ಸಂಸ್ಥೆಯು 2001ರ ಅಕ್ಟೋಬರ್ 14 ರಿಂದ 28 ರವರೆಗೆ ಏರ್ಪಡಿಸಿದೆ.

1. 15 ದಿವಸಗಳ ಕಾಲ ವಚನ ಸಾಹಿತ್ಯದ ಅಧ್ಯಯನ , ಬರಹ , ಚಿಂತನ ನಡೆಯಲಿದೆ.
2. ಪ್ರಾಯೋಗಿಕವಾಗಿ ನಾಮಕರಣ , ಗೃಹ ಪ್ರವೇಶ , ವಿವಾಹ, ಶವಸಂಸ್ಕಾರ ಮುಂತಾದ ಧಾರ್ಮಿಕ ವಿಧಿ - ವಿಧಾನಗಳ ನಿರ್ವಹಣೆಯ ತರಬೇತಿ, ಉಪನ್ಯಾಸ ಮಾಡುವ ತರಬೇತಿ.
3. ಇಷ್ಟಲಿಂಗಾರ್ಚನೆ , ಪ್ರಾರ್ಥನೆ , ಧ್ಯಾನ ಮತ್ತು ಬಸವೇಶ್ವರ ಪೂಜಾವ್ರತದ ತರಬೇತಿ.
4. ಯೋಗಾಸನ, ಪ್ರಾಣಾಯಾಮ, ಧ್ಯಾನದ ತರಬೇತಿ ಮತ್ತು ಯೋಗಶಿಕ್ಷಕ ತರಬೇತಿ.
5. ನೈಸರ್ಗಿಕ ಮತ್ತು ಆರೋಗ್ಯಕರ ಆಹಾರ ಪದ್ಧತಿಯ ತರಬೇತಿ. ನಿಸರ್ಗ ಚಿಕಿತ್ಸೆಯ ಮೂಲಕ ಆರೋಗ್ಯ ಸಂರಕ್ಷಣೆಯ ತರಬೇತಿ ನೀಡಲಾಗುವುದು. ಪ್ರತಿನಿತ್ಯ ಆಯಾ ವಯಸ್ಸಿಗೆ ತಕ್ಕಂತಹ ಆಟಗಳನ್ನು ಆಡಿಸಲಾಗುವುದು.
6. ಶಾರೀರಿಕ ವ್ಯಾಯಾಮದೊಡನೆ ಯುವ ವಯಸ್ಕರಿಗೆ ಆತ್ಮರಕ್ಷಣೆಯ ಸಾಧನವಾದ ಕರಾಟೆ, ಲಾಠಿ ಮುಂತಾದವುಗಳ ತರಬೇತಿಯನ್ನು ನೀಡಲಾಗುವುದು. ದೈಹಿಕ, ಮಾನಸಿಕ,ಯೋಗಿಕ,ಅಧ್ಯಾತ್ಮಿಕ ಮುಂತಾಗಿ ಸಮಗ್ರ ವ್ಯಕ್ತಿತ್ವವನ್ನು ಬೆಳೆಸುವ ಶಿಕ್ಷಣವನ್ನು ಪ್ರಸ್ತುತ ಬಸವ ತತ್ತ್ವ ತರಬೇತಿ ಕಮ್ಮಟದಲ್ಲಿ ನೀಡಲಾಗುತ್ತಿದೆ.

ಕಮ್ಮಟದಲ್ಲಿ ತರಬೇತಿ ನೀಡಲಿರುವವರು :

1. ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು
2. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು
3. ಪೂಜ್ಯ ಶ್ರೀ ಸದ್ಗುರು ಅಲ್ಲಮಪ್ರಭು ಸ್ವಾಮಿಗಳು
4. ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು
5. ಶರಣ. ಮಹಾಂತೇಶ ಯೋಗಾಚಾರ್ಯರು
6. ಶರಣ. ಟಿ.ಎ. ದಾಸಪ್ಪನವರು, ತಿಪಟೂರು
7. ಶರಣ. ಅರಕೇರಿಯವರು, ಕರಾಟೆ ಶಿಕ್ಷಕರು.

8. ಶರಣ. ವೀರಣ್ಣ ಕೊರ್ಲ್ಹಳ್ಳಿ, ಕೊಪ್ಪಳ,

ಮತ್ತು ಇತರರು

15 ದಿವಸಗಳ ಕಾಲ ನಡೆಯಲಿರುವ ತರಬೇತಿ ಕಮ್ಮಟದ ಶಿಬಿರ ಶುಲ್ಕ ಒಬ್ಬರಿಗೆ 350(ಮೂರುನೂರಾ ಐವತ್ತು)ರೂಪಾಯಿಗಳು. ವಿದ್ಯಾರ್ಥಿಗಳಿಗೆ ಮತ್ತು ಆರ್ಥಿಕವಾಗಿ ಅಶಕ್ತರಾದವರಿಗೆ 200(ಎರಡು ನೂರು)ರೂಪಾಯಿಗಳು. ಆರ್ಥಿಕವಾಗಿ ತೀರಾ ದುರ್ಬಲರಿದ್ದವರಿಗೆ ಉಚಿತವಾದ ಪ್ರವೇಶಾವಕಾಶವೂ ಇದೆ.

ವಿಶೇಷ ಸೂಚನೆ

1. ಊಟ -ವಸತಿ-ತರಬೇತಿ ಶಿಕ್ಷಕರ ಗೌರವ ಧನ ಇತ್ಯಾದಿಗಳ ಖರ್ಚು ಬಹಳ ಬರುತ್ತಿದ್ದು ಆರ್ಥಿಕ ಅನುಕೂಲತೆ ಇರುವವರು ತಪ್ಪದೆ ತಮ್ಮ ಶಿಬಿರ ಶುಲ್ಕವನ್ನು ಕೊಡಬೇಕು.
2. ಧರ್ಮಪ್ರಚಾರಕರನ್ನು ತರಬೇತಿಗೊಳಿಸುವ ಉದ್ದೇಶದಿಂದ ನಡೆಯುವ ಈ ತರಬೇತಿ ಕಮ್ಮಟದ ನಿರ್ವಹಣೆಗಾಗಿ ಉದಾರವಾದ ದೇಣಿಗೆಯನ್ನು ದಾನಿಗಳು ಕೊಡಲು ಮುಂದಾಗಬೇಕೆಂದು ಕೋರುತ್ತೇವೆ.
3. ಕೆಲವರು ಪ್ರತಿಭಾವಂತ ವಾಗ್ಮಿಗಳು ಆರ್ಥಿಕವಾಗಿ ಸಂಕಷ್ಟದಲ್ಲಿರುತ್ತಾರೆ. ಬರುವ ಹೋಗುವ ವೆಚ್ಚ ಶಿಬಿರಶುಲ್ಕ ಭರಿಸಲು ಅವರಿಗೆ ಸಾಧ್ಯವಿರುವುದಿಲ್ಲ. ತರಬೇತಿ ಪಡೆದಾನಂತರ ಧರ್ಮಪ್ರಚಾರ ಕಾರ್ಯದಲ್ಲಿ ಪ್ರಾಮಾಣಿಕವಾಗಿ ದುಡಿಯಬಲ್ಲವರಾಗಿರುತ್ತಾರೆ. ಆದ್ದರಿಂದ ಅಂಥವರ ಗಾಡಿ ಖರ್ಚು, ಶಿಬಿರ ಶುಲ್ಕ ಭರಿಸಿ , ರಾಷ್ಟ್ರೀಯ ಬಸವ ದಳಗಳವರು ತರಬೇತಿ ಕೊಡಿಸಬೇಕು..
4. ಕ್ರಿಯಾಮೂರ್ತಿಗಳಾಗಿ ತರಬೇತಿ ಹೊಂದಿ ಧಾರ್ಮಿಕ ವಿಧಿ-ವಿಧಾನ ನೆರವೇರಿಸುವವರ ಸಂಖ್ಯೆ ಬೆಳೆಯಬೇಕಾಗಿದೆ. ತರಬೇತಿ ಕಮ್ಮಟವು ಸರ್ವಾಂಗೀಣ ತರಬೇತಿ ನೀಡುತ್ತದೆ. ತರಬೇತಿಯ ಬಳಿಕ ಕ್ರಿಯಾಮೂರ್ತಿದೀಕ್ಷೆ ನೀಡಿ, ಪ್ರಮಾಣ ಪತ್ರ, (certificate) ಕೊಡಲಾಗುವುದು.
5. 3-4 ವರ್ಷಗಳ ಮಕ್ಕಳಿಂದ ಮೇಲಿನ ವಯಸ್ಸಿನ ಮಕ್ಕಳಿರುವವರು ಅವರನ್ನು ಕಾಯಲೋಸುಗ ಮನೆಯಲ್ಲಿ ಕೂರದೆ ಅವರನ್ನು ಕರೆತಂದರೆ ಮಕ್ಕಳದೇ ಒಂದು ತಂಡವನ್ನು ಮಾಡಿ ಅವರಿಗೆ ತರಬೇತಿ ನೀಡಲಾಗುವುದು.
6. ಶಿಬಿರಾರ್ಥಿಗಳು ತಮ್ಮ ವೈಯಕ್ತಿಕ ಉಪಯೋಗಕ್ಕೆ ಕೆಳಕಾಣಿಸಿದ ಸಾಮಗ್ರಿಗಳನ್ನು ತರಬೇಕು.

★ ಹಾಸಿಗೆ, ಸೊಳ್ಳೆಯ ಪರದೆ, ಊಟದ ತಟ್ಟೆ ಲೋಟ, ಯೋಗಾಸನ ಕಲಿಯುವ ಮಹಿಳೆಯರು ಚೂಡಿದಾರ, ನೋಟ್ ಪುಸ್ತಕ ಮತ್ತು ಪೆನ್ನು , ಸಾಮೂಹಿಕ ಪ್ರಾರ್ಥನೆ, ಪೂಜಾವ್ರತ ಮತ್ತು ದೇವಪೂಜಾ ವಿಧಾನ ಮುಂತಾದ ಪುಸ್ತಕಗಳು.

★ ವಿಶೇಷ ಸಂದರ್ಭಗಳಲ್ಲಿ ಉಪಯೋಗಿಸಲು ಬಿಳಿಯ ಸಮವಸ್ತ್ರಗಳು, ಕಾವಿಯ ಸ್ಕಾರ್ಫ್, ಷಟ್ಕೋನ ಚಿತ್ರದ ಟೋಪಿ

★ ಶಿಬಿರಾರ್ಥಿಗಳು ಮಾತ್ರವಲ್ಲದೆ ದಿ.28-10-2001ರ ಸಾಮೂಹಿಕ ಇಷ್ಟಲಿಂಗ ಪೂಜೆಯಲ್ಲಿ

ಭಾಗವಹಿಸುವ ಸ್ವತಃ ಪೂಜೆ ಮಾಡುವ ಮತ್ತು ನೋಡುವ ಶ್ರದ್ಧಾವಂತರು ಸಹ ಬಿಳಿಯ ಬಣ್ಣದ ಭಾರತೀಯ ಪೂಜೆಯ ಉಡುಪುಗಳನ್ನು ಧರಿಸಬೇಕೆಂದು ಕೋರುತ್ತೇವೆ.

ಧರ್ಮಜಾಗೃತಿಯ ಕಾರ್ಯ ಸರಿಯಾಗಿ ನಡೆಯದೆ ಲಿಂಗಾಯತ ಸಮಾಜದಲ್ಲಿ ತಾತ್ತ್ವಿಕ ಶೈಥಿಲ್ಯ, ಆಚರಣೆಯಲ್ಲಿ ಅಶ್ರದ್ಧೆ, ಅತ್ಯಂತ ಶ್ರೇಷ್ಠವಾಗಿದ್ದರೂ ಇಂಥ ಧರ್ಮದ ಬಗ್ಗೆ ಅಜ್ಞಾನ , ತಪ್ಪು ಕಲ್ಪನೆಗಳಿಂದಾಗಿ ವಿಲಕ್ಷಣ ಪರಿಸ್ಥಿತಿ ಎದುರಾಗಿದೆ. ಆದ್ದರಿಂದ ಮಕ್ಕಳಿಗೆ ಧಾರ್ಮಿಕ ತರಬೇತಿ ಸಿಕ್ಕುವಂತಾಗಲು, ತಾವೂ ಪಡೆಯಲು ಶರಣ ಬಂಧುಗಳು ತೀವ್ರ ಆಸಕ್ತಿ ವಹಿಸಬೇಕಾಗಿದೆ.

2001 ಅಕ್ಟೋಬರ್ 14, ಭಾನು(ದೇವ)ವಾರದಿಂದ ಅಕ್ಟೋಬರ್ 28 ಭಾನು (ದೇವ)ವಾರದವರೆಗೆ 15 ದಿವಸಗಳ ಕಾಲ ನಡೆಯಲಿರುವ ಬಸವ ತತ್ತ್ವ ತರಬೇತಿ ಕಮ್ಮಟದ ಉದ್ಘಾಟನಾ ಸಮಾರಂಭವು ದಿ.14-10-2001 ರಂದು ಬೆಳಿಗ್ಗೆ 10-30ಕ್ಕೆ ನೆರವೇರಲಿದೆ.

ಭಕ್ತಿಪಕ್ಷ ಸಮ್ಮೇಳನ.

2001ರ ಅಕ್ಟೋಬರ್ 27 ಶನಿ(ಶರಣ)ವಾರ ಮತ್ತು 28 ಭಾನು(ದೇವ)ವಾರದಂದು ಎರಡು ದಿವಸಗಳ ಕಾಲ ಭಕ್ತಿಪಕ್ಷ ಸಮ್ಮೇಳನ ಜರುಗಲಿದೆ. ಸಮ್ಮೇಳನ ಶುಲ್ಕ ಒಬ್ಬರಿಗೆ 60 ರೂ. ದಿ.27-10-2001 ರಂದು ಬೆಳಿಗ್ಗೆ 10-30ಕ್ಕೆ ಉದ್ಘಾಟನಾ ಸಮಾರಂಭ.

ಮಧ್ಯಾಹ್ನ 4 ರಿಂದ ಚಿಂತನಗೋಷ್ಠಿ-1, ಸಂಜೆ 7 ರಿಂದ ನೆನಹು ಮತ್ತು ಚಿಂತನಗೋಷ್ಠಿ-2 ಮೇಲ್ಕಂಡ ತರಬೇತಿ ಕಮ್ಮಟ ಮತ್ತು ದಿ. 27-28ರಂದು ನಡೆಯುವ ಭಕ್ತಿ ಪಕ್ಷ ಸಮ್ಮೇಳನವು ಕುಂಬಳಗೋಡು ಬಳಿ ಇರುವ ಬಸವ ಗಂಗೋತ್ರಿಯಲ್ಲಿ ನಡೆಯಲಿದೆ. ಬಸವ ಗಂಗೋತ್ರಿಯು ಬೆಂಗಳೂರು - ಮೈಸೂರು ಹೆದ್ದಾರಿಯಲ್ಲಿ ಬೆಂಗಳೂರಿನಿಂದ 21 ನೆಯ ಕಿಲೋಮೀಟರ್ ದೂರದಲ್ಲಿದೆ. ಬೆಂಗಳೂರು ಕಡೆಯಿಂದ ಬರುವವರಿಗೆ ಸಿಟಿ ಬಸ್ ಸೌಲಭ್ಯವಿದ್ದು ಕುಂಬಳಗೋಡು ಗ್ರಾಮಕ್ಕೆ ಮೊದಲೇ ಬಸವಗಂಗೋತ್ರಿಯ ಪ್ರವೇಶದ್ವಾರವಿದೆ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಮಧ್ಯೆ ಇರುವ ಬಸವ ಗಂಗೋತ್ರಿಗೆ ಬಸ್ ನಿಲುಗಡೆ ಇದೆ. ಸಿಟಿ ಮಾರ್ಕೆಟ್‌ನಿಂದ 227, 228, 229, 231 ರೂಟ್ ನಂಬರಿನ ಬಸ್ಸುಗಳು ಬರುತ್ತವೆ. ಬೆಂಗಳೂರು ಬಸ್ ನಿಲ್ದಾಣದಿಂದ ಹೊರಟು ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ಬಸ್ಸುಗಳು ನಿಲ್ಲುತ್ತವೆ.

ದಿ. 28-10-2001ರಂದು

ಸಾಮೂಹಿಕ ಇಷ್ಟಲಿಂಗಪೂಜೆ ಮತ್ತು ಸಮಾರೋಪ ಸಮಾರಂಭ

10-30 ರಿಂದ 1-30 ರವರೆಗೆ ಸಾಮೂಹಿಕ ಇಷ್ಟಲಿಂಗಪೂಜೆ ಮತ್ತು ಬಸವ ತತ್ತ್ವ ಸಮಾವೇಶ. ನಂತರ ಗಣ ಪ್ರಸಾದ. ಮಧ್ಯಾಹ್ನ 3 ಗಂಟೆಯಿಂದ 6 ಗಂಟೆಯವರೆಗೆ ಸಮಾರೋಪ ಸಮಾರಂಭ.

ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶರಣಬಂಧುಗಳು ಭಾಗಿಗಳಾಗಿ . ಅವಕಾಶದ ಸದುಪಯೋಗ ಮಾಡಿಕೊಳ್ಳಬೇಕು. ಪೂಜೆಯಲ್ಲಿ

ಭಾಗವಹಿಸುವವರು ಮತ್ತು ನೋಡುವವರು ಉಭಯತರಿಗೂ ಅವಕಾಶವಿದೆ. ತಾವೂ ಪೂಜೆಗೆ ಕುಳಿತುಕೊಳ್ಳುವವರು ಸಂಗಡ ಒಂದು ಆಸನ, ಮಜ್ಜನ ಪಾತ್ರೆ, ಲೋಟ, ವಿಭೂತಿ, ಪತ್ರೆ (108ಪುಷ್ಪಾರ್ಚನೆಗಾಗಿ) ಪುಷ್ಪ, ಕರ್ಪುರ, ಕಲ್ಲು ಸಕ್ಕರೆ, ಮುಂತಾಗಿ ತರಬೇಕು. ಪೂಜೆಯ ನಂತರ ಗಣಪ್ರಸಾದದ ವ್ಯವಸ್ಥೆ ಇರುತ್ತದೆ. ಇಷ್ಟಲಿಂಗಾರ್ಚನೆಯಲ್ಲಿ ಭಾಗವಹಿಸಲು ಯಾವುದೇ ಪ್ರವೇಶ ಶುಲ್ಕವಿಲ್ಲ. ಸ್ವಯಂ ಪ್ರೇರಣೆಯಿಂದ ಕಾಣಿಕೆ ಕೊಡಬಹುದು. ಪೂಜಾ ಸ್ಥಳದಲ್ಲಿ ಇಷ್ಟ ಲಿಂಗ, ವಿಭೂತಿ ಮುಂತಾದವು ಮಾರಾಟಕ್ಕೆ ಲಭ್ಯವಿರುತ್ತವೆ. ಮಧಾಹ್ನ 3 ರಿಂದ ಬಸವ ತತ್ತ್ವ ತರಬೇತಿ ಕಮ್ಮಟದ ಸಮಾರೋಪ ಸಮಾರಂಭ. ಕಾರ್ಯಕ್ರಮದ ನಂತರ ಶಿಬಿರಾರ್ಥಿಗಳಿಗೆ ತಮ್ಮ ತಮ್ಮ ಊರುಗಳಿಗೆ ತೆರಳಲು ಅವಕಾಶವಿರುತ್ತದೆ. 2002ರ ಜನವರಿ 11 ರಿಂದ 15 ರವರೆಗೆ ನಡೆಯುವ 15ನೆಯ ಶರಣ ಮೇಳದ ಭಿತ್ತಿಪತ್ರ , ಕರಪತ್ರ, ದೇಣಿಗೆ ಸಂಗ್ರಹಕ್ಕಾಗಿ ರಸೀದಿ ಪುಸ್ತಕಗಳನ್ನು ಶರಣ ಬಂಧುಗಳಿಗೆ ವಿತರಿಸಲಾಗುವುದು.

ದೇಣಿಗೆಗಾಗಿ ಕೋರಿಕೆ.

ದಿ.28-10-2001 ದೇವ (ಭಾನು)ವಾರದಂದು ಸಹಸ್ರ ಶರಣರಾದರೂ ಕುಳಿತು ವಿಶ್ವಶಾಂತಿ ಸ್ಥಾಪನೆ ಮತ್ತು ಲಿಂಗಾಯತ ಧರ್ಮದ ಸರ್ವಾಂಗೀಣ ಬೆಳವಣಿಗೆಗಾಗಿ ಸಂಕಲ್ಪಿಸಿ ಇಷ್ಟಲಿಂಗಾರ್ಚನೆ ಮತ್ತು ಗುರು ಬಸವಾರ್ಚನೆ ಮಾಡಿ ಧನ್ಯರಾಗಬೇಕೆಂಬ ಉದ್ದೇಶದಿಂದ ಸಾಮೂಹಿಕ ಇಷ್ಟಲಿಂಗಾರ್ಚನೆಯನ್ನು ಏರ್ಪಡಿಸಲಾಗಿದೆ. ವಿಸ್ತಾರವಾದ ಪೆಂಡಾಲ್ ಹಾಕಲು, ಪೂಜಾ ವೇದಿಕೆ ನಿರ್ಮಿಸಲು ಮತ್ತು ಗಣಪ್ರಸಾದ(ಊಟ)ದ ವ್ಯವಸ್ಥೆ ಮಾಡಲು ಸಹೃದಯರು ಉದಾರವಾದ ಕಾಣಿಕೆ ನೀಡಲು ಕೆಳಗಿನಂತೆ ಅವಕಾಶವಿದೆ.

ವಿಶೇಷ ದಾನಿಗಳು	5000-00	ಹಿತೈಷಿ	500-00
ಮಹಾಪೋಷಕ	3000-00	ವಿಶೇಷ ದಾಸೋಹಿ	250-00
ಪೋಷಕ	1000-00	ಸಹಜ ದಾಸೋಹಿ	100-00

ಉದಾರವಾದ ಧನ ಸಹಾಯ ಮಾಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಹೃತ್ಪೂರ್ವಕವಾಗಿ ಕೋರುತ್ತೇವೆ.

ಎನ್. ಪುಟ್ಟರುದ್ರ,
ಅಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ

ಪೂಜ್ಯ ಶ್ರೀ ಸದ್ಗುರು ಅಲ್ಲಮಪ್ರಭು ಸ್ವಾಮಿಗಳು
ಪ್ರಧಾನ ಕಾರ್ಯದರ್ಶಿ
ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ
2035, 20ನೇ ಮೇನ್. ಕಾರ್ಡ್‌ರಸ್ತೆ,
ರಾಜಾಜಿನಗರ, ಬೆಂಗಳೂರು - 560010
ದೂರವಾಣಿ ಸಂಖ್ಯೆ : 3325335/3322790

ಬಸವ ವಚನಾಮೃತ

ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಬಳಗವೆಲ್ಲವ,
ಕೋಳಿ ಒಂದು ಕುಟುಕ ಕಂಡಡೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವ,
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಗಳಿಗಿಂತ ಕರಕಷ್ಟ ಲಿಂಗದೇವಾ.
ಧರ್ಮಪಿತ ಬಸವಣ್ಣನವರು

ಶರಣರ ಬರವೆಮಗೆ ಪ್ರಾಣ ಜೀವಾಳ

ಬೀದರ ನಗರದಲ್ಲಿ ಅದ್ದೂರಿಯಿಂದ ನಡೆದ ಶ್ರಾವಣ ಮಾಸದ ಪ್ರವಚನ ಸಮಾರೋಪ ಹಾಗೂ ರಾಷ್ಟ್ರೀಯ ಬಸವ ದಳಗಳ ಸಮಾವೇಶ

ಬೀದರ ನಗರದ ಬಸವ ಮಂಟಪದಲ್ಲಿ ಲಿಂಗಾಯತ ಸಮಾಜ ಹಾಗೂ ರಾಷ್ಟ್ರೀಯ ಬಸವ ದಳ, ಬಸವ ಮಂಟಪದ ಸಂಯುಕ್ತ ಆಶ್ರಯದಲ್ಲಿ ಶ್ರಾವಣ ಮಾಸದ ನಿಮಿತ್ತ ನಡೆಸಲಾದ ವಿಶ್ವಧರ್ಮ ಪ್ರವಚನದ ಸಮಾರೋಪ ಸಮಾರಂಭ ಹಾಗೂ ರಾಷ್ಟ್ರೀಯ ಬಸವ ದಳಗಳ ಸಮಾವೇಶವು ಭಾನು(ದೇವ)ವಾರ ದಿ. 9-9-2001 ರಂದು ಅದ್ದೂರಿಯ ಯಶಸ್ಸಿನಿಂದ ಜರುಗಿತು.

ಪ್ರಾರಂಭದಲ್ಲಿ ಆದಿ ಪ್ರಮಥ ವಿಶ್ವಗುರು ಬಸವಣ್ಣನವರ ಹಾಗೂ ಜಗನ್ಮಾತಾ ಅಕ್ಕಮಹಾದೇವಿಯವರ ಪೂಜೆ, ಪ್ರಾರ್ಥನೆಗಳು ನಡೆದವು. ಬಂದ ಸಕಲ ಶರಣ ಬಂಧುಗಳನ್ನು ಎಲ್ಲ ಅತಿಥಿಗಳನ್ನು ಶರಣ ಶ್ರೀ ಡಾ|| ಶಿವಶರಣಪ್ಪ ಪಾಟೀಲ, ಬಗದಲ ಸ್ವಾಗತಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶರಣ ಶ್ರೀ ಗಂಗಶೆಟ್ಟಿ ಪಾಟೀಲ, ನ್ಯಾಯವಾದಿಗಳು "ಬಸವ ತತ್ತ್ವವನ್ನು ಎತ್ತಿ ಹಿಡಿಯುವಲ್ಲಿ ಬಸವ ಧರ್ಮ ಪೀಠ ಸಕ್ರಿಯ ಪಾತ್ರ ವಹಿಸುತ್ತಿದೆ" ಎಂದರು. ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ ಬಸವ ಧರ್ಮ ಪೀಠದ ಪೂಜ್ಯ ಚನ್ನಬಸವರಾಜ ಸ್ವಾಮಿಗಳು ಸಮಾಜದ ಗೊಂದಲಗಳ ಬಗ್ಗೆ ಪ್ರಸ್ತಾಪಿಸುತ್ತಾ "ಒಂದೊಂದು ಪ್ರಾಣಿಗಳಲ್ಲಿ ಒಂದೊಂದು ವಿಶೇಷ ಗುಣಗಳಿವೆ, ಆದರೆ ಎಲ್ಲ ಪ್ರಾಣಿಗಳ ವಿಶೇಷ ಗುಣಗಳನ್ನು ಮಾನವನಲ್ಲಿ ಕಾಣಬಹುದು. ಹಾಗಾಗಿ ಮಾನವರ ಸಮಾನತೆಗಾಗಿ ಗುರು ಬಸವಣ್ಣನವರು ಅವಿಶ್ರಾಂತವಾಗಿ ಶ್ರಮಿಸಿದರು, ಬಸವ ಧರ್ಮ ಪೀಠವು ಲಿಂಗಾಯತ ಧರ್ಮದ ಮಾನ್ಯತೆಗೆ ಒತ್ತು ಕೊಟ್ಟು ವಚನ ಸಾಹಿತ್ಯದೆಡೆಗೆ ದೃಷ್ಟಿ ಹರಿಸಿ, ವಚನಗಳಲ್ಲಿ ಸಿಕ್ಕಿಕೊಂಡ ಮಲಿನತೆಗಳನ್ನು ಶುದ್ಧಿಮಾಡುವಲ್ಲಿ ಕ್ರಮಕೈಗೊಳ್ಳುತ್ತಿದೆ. ಸುಮಾರು ಎಂಟು ನೂರು ವರ್ಷಗಳಲ್ಲಿ ಲಿಂಗಾಯತ ಧರ್ಮವು ತುಳಿತಕ್ಕೆ ಒಳಗಾಗಿದ್ದು ವಚನ ಪಿತಾಮಹ ಪೂಜ್ಯ ಲಿಂಗೈಕ್ಯ ಫ.ಗು. ಹಳಕಟ್ಟಿ ಹಾಗೂ ಪ್ರವಚನ ಪಿತಾಮಹ ಲಿಂಗೈಕ್ಯ ಪರಮ ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳು ವಚನ ಸಾಹಿತ್ಯವನ್ನು ನಾಡಿನ ಮೂಲೆ ಮೂಲೆಗೂ ತೆಗೆದುಕೊಂಡು ಹೋದ ಕೀರ್ತಿ ಅವರಿಗೆ ಮಾತ್ರ ಸಲ್ಲುತ್ತದೆ. ಶ್ರೀಮಂತ ಮಠಾಧೀಶರಿಂದ ಧರ್ಮದ ಬಗ್ಗೆ ತಿಳುವಳಿಕೆ ನೀಡುವುದು ಸಾಧ್ಯವಿಲ್ಲವೆಂದು ಮನಗಂಡು ಹೆಚ್ಚಿನ ಕೆಲಸವು ಬಸವ ಭಕ್ತರಿಂದಲೇ ಆಗಬೇಕಾಗಿದೆ ಎಂದು ತಿಳಿದು ರಾಷ್ಟ್ರೀಯ ಬಸವ ದಳವನ್ನು ಸ್ಥಾಪಿಸಿದರು. ಪೂಜ್ಯ ಲಿಂಗಾನಂದ ಸ್ವಾಮಿಗಳ ಅಂದಿನ ಶ್ರಮದ ಫಲವಾಗಿ ಇಂದು 800 ರಾಷ್ಟ್ರೀಯ ಬಸವ ದಳಗಳ ಶಾಖೆಗಳು ರಾಷ್ಟ್ರಾದ್ಯಂತ ಬಸವ ತತ್ತ್ವ ಪ್ರಚಾರದಲ್ಲಿ ತೊಡಗಿವೆ. ಬಸವಣ್ಣನವರ ರಾಜಕೀಯ ಸಿದ್ಧಾಂತದ ಬಗ್ಗೆ ಇನ್ನೂ ಅಧ್ಯಯನವಾಗಬೇಕಾಗಿದೆ. ಇಂದು ರಾಜಕೀಯ ಹಾಗೂ ಧರ್ಮ ಒಟ್ಟಿಗೆ ಕೂಡಿ ಹೋದರೆ ಮಾತ್ರ ಕಲ್ಯಾಣ ರಾಜ್ಯ ನಿರ್ಮಾಣವಾಗುವುದು." ಎಂದು ರಾಜಕಾರಣಿಗಳಿಗೆ ಉಪದೇಶಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಔರಾದ ಶಾಸಕ ಶರಣ ಗುಂಡಪ್ಪ ಬಿರಾದಾರ ಮಾತನಾಡುತ್ತ "ಈ ಸಮಾಜದಲ್ಲಿ ಮನುಷ್ಯರು ಇವನಾರವ ಇವನಾರವ ಎಂದೆನಿಸದೆ ಇವ

ನಮ್ಮವ ಇವ ನಮ್ಮವ ಎಂದೆನಿಸಯ್ಯಾ ಎನ್ನುವ ಹಾಗೆ ಒಬ್ಬರನ್ನೊಬ್ಬರು ಪ್ರೀತಿಸಿ ಭ್ರಾತೃತ್ವದಲ್ಲಿ ಬೆಳೆಯುವಂತೆ ಬಸವ ಭಕ್ತರು ಶ್ರಮವಹಿಸಬೇಕೆಂದರು, ಸಮಾಜದಲ್ಲಿ ಯಾವತ್ತೂ ಒಳ್ಳೆಯ ಹಾಗೂ ಕೆಟ್ಟ ಜನರು ಇರುತ್ತಾರೆ. ಆದರೆ ಜಯ ಒಳ್ಳೆಯ ಆಚಾರ ವಿಚಾರ ಇರುವವರಿಗೆ ಆಗುತ್ತದೆ. ಕ್ಷಣಿಕವಾಗಿ ಒಳ್ಳೆಯ ವಿಚಾರದವರಿಗೆ ಅಪಜಯವೆನಿಸಿದರೂ ಮನಸ್ಥೈರ್ಯದಿಂದ ಮುನ್ನುಗ್ಗಬೇಕು ಎಂದು ಕರೆ ನೀಡಿದರು. ಜೀವನದಲ್ಲಿ ಬದುಕಲು ಗಾಳಿ ಆಹಾರ ಎಷ್ಟು ಮುಖ್ಯವೋ ಧರ್ಮ ಸಹ ಅಷ್ಟೇ ಮುಖ್ಯ ಎಂದರು. ಮುಂದುವರೆದು ಶಾಸಕರು ತಾಯಿ ಮಗುವಿಗೆ ಒಂದೊಂದು ಅಕ್ಷರಗಳನ್ನು ಕಲಿಸುವ ಹಾಗೆ ಧರ್ಮ ಪೀಠಾಧಿಕಾರಿಗಳು ಭಕ್ತರಿಗೆ ಒಂದೊಂದಾಗಿ ಧರ್ಮದ ತಿಳಿವು ಮತ್ತು ಸಂಸ್ಕಾರಗಳನ್ನು ಮತ್ತೆ ಮತ್ತೆ ಜನರಿಗೆ ತಿಳಿಸಿಕೊಡಬೇಕೆಂದು ಬಿನ್ನವಿಸಿಕೊಂಡರು. ಸಮಾಜದಲ್ಲಿ ಕೆಲವರು ತಮ್ಮ ಸ್ವಾರ್ಥಕ್ಕಾಗಿ ಧರ್ಮವನ್ನು ಬಳಸಿಕೊಳ್ಳುತ್ತಿದ್ದಾರೆ. ಇಂತಹ ದುಷ್ಟ ಕೂಟಗಳಿಂದ ನಾವು ಸದಾ ಎಚ್ಚರದಿಂದರಬೇಕೆಂದು ತಿಳಿಸಿದರು.

ಜಿಲ್ಲೆಯ ಜನಪ್ರಿಯ ಸಂಸದರೂ 92 ವರ್ಷದ ನವಯುವಕರಾದ ಶರಣ ರಾಮಚಂದ್ರ ವೀರಪ್ಪಾ ಇವರು ಮಾತನಾಡುತ್ತಾ ಬಸವ ತತ್ತ್ವವನ್ನು ಪ್ರಸಾರ ಮಾಡಬೇಕಾದ ಇಂದಿನ ಕೆಲವು ಮಠಾಧೀಶರು ಬಸವ ಚಿಂತನೆಯನ್ನು ಮರೆತು, ಭೋಗ ಜೀವನದಲ್ಲಿ ಸಾಗುತ್ತಿರುವದು ಬಹಳ ಖೇದಕರ ಎಂದು ವಿಷಾದಿಸಿದರು. ಸಮಾಜ ಬಂಧುಗಳೇ ನೀವು ಧರ್ಮ ಬೆಳೆಸಲು ತ್ಯಾಗ, ಬಲಿದಾನಗಳನ್ನು ಮೈಗೂಡಿಸಿಕೊಳ್ಳಬೇಕು" ಎಂದು ಮನವಿ ಮಾಡಿಕೊಂಡರು. ಕುರಿಯು ಕಹಿ ಎಲೆ ಸೇವಿಸಿ ಹಾಲು ಕೊಡುವುದು, ಹಾವು ಹಾಲು ಕುಡಿದು ವಿಷ ಕಕ್ಕುವುದು ; ಅದರಂತೆ ಬಸವ ಭಕ್ತರು ತಮ್ಮ ಧರ್ಮದ ಸಾಹಿತ್ಯವನ್ನು ಎತ್ತಿ ಹಿಡಿದು, ನೋವು ಅನುಭವಿಸಿಯೂ ಸಹ ಇತರರಿಗೆ ನಲಿವಿನ ಹಾಲನ್ನು ಕೊಡುವ ಸ್ವಭಾವ ಬೆಳೆಸಿಕೊಳ್ಳಬೇಕೆಂದು ತಿಳಿಸಿದರು.

ಇನ್ನೊಬ್ಬ ಅತಿಥಿಗಳಾದ ಬಿ.ಜೆ.ಪಿ ಧುರೀಣರಾದ ಶರಣ ಶ್ರೀ ಪಾಂಡುರಂಗ ಸೂರ್ಯವಂಶಿ ಮಾತನಾಡುತ್ತಾ ವಚನ ಸಾಹಿತ್ಯದ ಶುದ್ಧೀಕರಣವು ಇಂದಿನ ಕಾಲದಲ್ಲಿ ಅತ್ಯವಶ್ಯಕವಾದ ಕೆಲಸವಾಗಿದೆ ಎಂದು ಹೇಳುತ್ತಾ, ಲಿಂಗದೇವ ವಿರೋಧಿಗಳಿಗೆ ಕಿವಿ ಮಾತು ಹೇಳುತ್ತಾ ಸಾಹಿತ್ಯಾಧಾರಿತವಾಗಿ ವಿರೋಧಿಸಬೇಕೇ ವಿನಾ ವಿರೋಧಕ್ಕೆ ವಿರೋಧಿಸುವದು ತಮ್ಮ ಚಾರಿತ್ರ್ಯಕ್ಕೆ ಶೋಭೆ ತರುವ ಸಂಗತಿ ಅಲ್ಲ ಎಂದು ತಿಳಿಸಿದರು. ನಾವುಗಳೆಲ್ಲರೂ ಪೂಜ್ಯ ಮಾತಾಜಿಯವರ ಅರ್ಥಗರ್ಭಿತವಾದ ಕ್ರಾಂತಿಕಾರಕ ವಿಚಾರಗಳನ್ನು ಕೂಲಂಕುಶವಾಗಿ ಮನಗಂಡು ಅಳವಡಿಸಿಕೊಳ್ಳಬೇಕೆಂದು ಅವರು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ನಗರದ ಬಸವೇಶ್ವರ ವೃತ್ತದ ಮುಂದಿನ ಹತ್ತು ವರ್ಷಗಳ ಅವಧಿಗೆ ಸಂರಕ್ಷಣೆ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಿಕೊಂಡಿರುವ ದಿ.ಗಾಂಧಿ ಗಂಜ ಸಹಕಾರ ಬ್ಯಾಂಕ್ ನಿ; ಬೀದರಿನ ಅಧ್ಯಕ್ಷರಾದ ಶರಣ ಡಿ.ವಿ.ಸಿಂದೋಲ ಹಾಗೂ ಆಡಳಿತ ಮಂಡಳಿಯ ಸದಸ್ಯರನ್ನು ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿ ಡಿ.ವಿ.ಸಿಂದೋಲ ಇವರು

ಮಾತನಾಡುತ್ತ ನಾವೆಲ್ಲರೂ ಬಸವಣ್ಣನವರು ತೋರಿಸಿದ ದಾರಿಯಲ್ಲಿ ಇಡೀ ಸಮಾಜದ ಏಳಿಗೆಗಾಗಿ ಶ್ರಮಿಸುವುದಾಗಿ ತಿಳಿಸಿದರು. ಬಸವಣ್ಣನವರ ಪುತ್ಥಳಿಯ ಸಂರಕ್ಷಣೆಯ ಗುರುತರ ಜವಾಬ್ದಾರಿಯನ್ನು ವಹಿಸಿಕೊಟ್ಟು ಬಸವ ಗುರುವಿಗೆ ಗೌರವ ಸಲ್ಲಿಸಲು ಅವಕಾಶ ಮಾಡಿಕೊಟ್ಟ ಲಿಂಗಾಯತ ಸಮಾಜ ಮತ್ತು ರಾಷ್ಟ್ರೀಯ ಬಸವ ದಳ ಹಾಗೂ ಎಲ್ಲ ಬಸವ ಭಕ್ತರಿಗೆ ಧನ್ಯವಾದಗಳನ್ನು ಅರ್ಪಿಸಿದರು.

ಇದೇ ಸಂದರ್ಭದಲ್ಲಿ ಬೀದರನ 150 ಜನರಿಗೆ ಪೂರ್ಣಯೋಗ ತರಬೇತಿ ನೀಡಿದ ಬೆಂಗಳೂರಿನ ಶ್ರೀ ಬಸವೇಶ್ವರ ದಿವ್ಯ ಜ್ಞಾನ ವಿದ್ಯಾಲಯದ ಶ್ರೀ ಮಹಾಂತೇಶ ಯೋಗಾಚಾರ್ಯ ಧಾರವಾಡ, ಸುಮಾರು 52 ದಿನಗಳ ವರೆಗೆ ನಿರಂತರವಾಗಿ ಪ್ರವಚನ ನಡೆಸಿದ ಪೂಜ್ಯ ಶ್ರೀ ಚನ್ನಬಸವರಾಜ ಮಹಾಸ್ವಾಮಿಗಳು, ಬಸವ ಧರ್ಮಪೀಠ, ಕೂಡಲಸಂಗಮ ಹಾಗೂ ಪೂಜ್ಯ ಶ್ರೀ ಚನ್ನಯ್ಯಸ್ವಾಮಿಗಳು, ಬಸವ ಮಂಟಪ ಬೀದರ. ಇವರನ್ನು ಸನ್ಮಾನಿಸಲಾಯಿತು. ವೇದಿಕೆ ಮೇಲೆ ಶರಣೆ ಶ್ರೀಮತಿ ಚಂದ್ರಮ್ಮ ಪಾಟೀಲ ಗಾದಗಿ ಅಧ್ಯಕ್ಷರು, ರಾ. ಬ. ದಳ, ಬೀದರಿನ ಶರಣ ಶ್ರೀ ರಾಮಲಿಂಗಪ್ಪ ದೇವಣೆ ಅಧ್ಯಕ್ಷರು, ಲಿಂಗಾಯತ ಸಮಾಜ, ಬೀದರ ಹಾಗೂ ಶರಣ ಶ್ರೀ ಶಿವರಾಜ ಪಾಟೀಲ ಅತಿವಾಳ ಉಪಾಧ್ಯಕ್ಷರು, ಲಿಂಗಾಯತ ಧರ್ಮ ಮಹಾ ಸಭಾ, ಕರ್ನಾಟಕ ರಾಜ್ಯ ಇವರುಗಳು ಉಪಸ್ಥಿತರಿದ್ದರು.

ಕೊನೆಯಲ್ಲಿ ರಾಷ್ಟ್ರೀಯ ಬಸವ ದಳದ ಪ್ರಧಾನ ಕಾರ್ಯದರ್ಶಿಗಳಾದ ಶರಣ ಶ್ರೀ ಕುಶಲರಾವ ಪಾಟೀಲ ಇವರು ಶರಣು ಸಮರ್ಪಿಸಿದರು.

ಮಧ್ಯಾಹ್ನ ಪ್ರಸಾದದ ನಂತರ ರಾಷ್ಟ್ರೀಯ ಬಸವ ದಳಗಳ ಸಮಾವೇಶ ಶರಣೆ ಚಂದ್ರಮ್ಮ ಪಾಟೀಲ ಗಾದಗಿ ರಾಷ್ಟ್ರೀಯ ಬಸವ ದಳ, ಬೀದರ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ರಾ.ಬ. ದಳ ನಿರ್ಣಾದ ಅಧ್ಯಕ್ಷರಾದ ಶರಣ ಶ್ರೀ ಡಾ|| ರಾಜೇಂದ್ರ ಪಾಟೀಲ ಧ್ವಜಾರೋಹಣ ನೆರವೇರಿಸಿದರು. ಶರಣ ಶ್ರೀ ರಾಜೇಂದ್ರ ಜೊನ್ನಿಕೇರಿ ಇವರು ಸ್ವಾಗತ ಕೋರಿದರು. ಪೂಜ್ಯ ಶ್ರೀ ಚನ್ನಬಸವರಾಜ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಪೂಜ್ಯ ಶ್ರೀ ಚನ್ನಯ್ಯ ಸ್ವಾಮಿಗಳು, ಬಸವ ಮಂಟಪ, ಬೀದರ ಇವರು ನೇತೃತ್ವ ವಹಿಸಿದ್ದರು. ಪೂಜ್ಯ ಶ್ರೀ ಸಿದ್ಧೇಶ್ವರಾನಂದ ಮಹಾಸ್ವಾಮಿಗಳು, ಅಲ್ಲಮ ಪ್ರಭುಮಠ, ಚಟ್ನಳ್ಳಿ ಇವರು ವೇದಿಕೆ ಮೇಲೆ ಉಪಸ್ಥಿತರಿದ್ದರು. ರಾಷ್ಟ್ರೀಯ ಬಸವ ದಳದ ಆಂಧ್ರ ಪ್ರದೇಶದ ಅಧ್ಯಕ್ಷರಾದ ಶರಣ ಶ್ರೀ ಸುಭಾಷ ಪಾಟೀಲ ಹೈದ್ರಾಬಾದ , ರಾ.ಬ.ದಳ ಉದಗೀರ, ಗುಲಬರ್ಗಾ, ಜಹಿರಾಬಾದ , ಸಂಗಮ, ಠಾಣಾ ಕುಶನೂರ, ಗಾದಗಿ, ಸಿದ್ಧೇಶ್ವರ, ಸಿದ್ಧೇಶ್ವರವಾಡಿ ಹಾಗೂ ಇನ್ನಿತರ ರಾ.ಬ.ದಳದ ಪ್ರತಿನಿಧಿಗಳು ಹಾಜರಿದ್ದು, ರಾ.ಬ.ದಳದ ನಿರಂತರ ಕ್ರಿಯಾಶೀಲತೆಗೆ ಉತ್ತೇಜನ ಹಾಗೂ ಬರ ಪರಿಸ್ಥಿತಿಯಲ್ಲಿ ರಾ.ಬ.ದಳದ ಪಾತ್ರಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. ಕೊನೆಯಲ್ಲಿ ಪುನರ್ಘಟಿತವಾದ ರಾ.ಬ.ದಳದ ನಗರ ಘಟಕದ ನಗರ ಪದಾಧಿಕಾರಿಗಳಿಗೆ ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು.

ವರದಿ : ನಾಗಶೆಟ್ಟಿ, ಕೆ. ಶೆಟಕಾರ, ಕಾರ್ಯದರ್ಶಿ

ಬೈಲಹೊಂಗಲದಲ್ಲಿ ಅದ್ದೂರಿಯ ವಿಶ್ವಧರ್ಮ ಪ್ರವಚನ ಕಾರ್ಯಕ್ರಮ

ವರದಿ : ಶಿವಕುಮಾರ ಡಾಕುಳಗೆ

ಬೆಳಗಾಂವ ಜಿಲ್ಲೆಯ ಬೈಲಹೊಂಗಲ ಶರಣರು ನಡೆದಾಡಿದ ಪುಣ್ಯಭೂಮಿ, ವಚನ ಸಾಹಿತ್ಯದ ಸಂರಕ್ಷಣೆಗಾಗಿ ಶರಣರು ಬಿಜ್ಜಳನ ಸೈನ್ಯದೊಡನೆ ಕಾದಾಡಿದ ಕಾದರವಳ್ಳಿ, ಮುರುಗೋಡು ಅತ್ಯಂತ ಸಮೀಪ. ಚನ್ನಬಸವಣ್ಣನವರು ವಾಸ್ತವ್ಯ ಮಾಡಿದ ಸ್ಥಳ ಮರಡಿ ಬಸವಣ್ಣನ ಗುಡಿಯನ್ನು ಹೊಂದಿದ್ದರೆ, ವೀರಮಾತೆ ನಾಗಲಾಂಬಿಕೆಯ ವಾಸ್ತವ್ಯ ಅನುಷ್ಠಾನದ ಸ್ಥಳ ಮರಡಿ ನಾಗಲಾಪುರ. ಹುತಾತ್ಮ ಶರಣ ಹರಳಯ್ಯನವರ ಧರ್ಮಪತ್ನಿ ಶರಣೆ ಕಲ್ಯಾಣಮ್ಮನವರ ದೇಹವನ್ನಿಟ್ಟ ಸಮಾಧಿ ಸ್ಥಳ ತಿಗಡಿ. ಪೂಜ್ಯ ಶ್ರೀ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಈಗಾಗಲೇ 3 ಸಲ ಪ್ರವಚನ ಮಾಡಿ ಪ್ರಭಾವ ಬೀರಿದ್ದ ಬೈಲಹೊಂಗಲದಲ್ಲಿ ಸೋಮವಾರ ದಿ. 6-8-2001ರಂದು ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಪೀಠದ ದ್ವಿತೀಯ ಮಹಿಳಾ ಜಗದ್ಗುರು ಪೂಜ್ಯ ಶ್ರೀ ಮಾತೆ ಗಂಗಾದೇವಿಯವರ ಪ್ರವಚನವು ಪ್ರಾರಂಭವಾಯಿತು. ದಿನದಿನಕ್ಕೂ ಅಧಿಕಧಿಕ ಸಂಖ್ಯೆಯಲ್ಲಿ ಶ್ರೋತೃಗಳನ್ನು ಆಕರ್ಷಿಸಿದ ವಿಶ್ವಧರ್ಮ ಪ್ರವಚನದ ಮುಕ್ತಾಯ ಸಮಾರಂಭವು ದೇವ(ಭಾನು)ವಾರ ದಿ.16-9-2001ರಂದು ನೆರವೇರಿತು. ತನ್ನಿಮಿತ್ತ ಬೆಳಿಗ್ಗೆ ಶರಣ ಸಂಗಮ-ಸಾಮೂಹಿಕ ಪ್ರಾರ್ಥನೆ ನೆರವೇರಿತು. ಶರಣ. ಲಿಂಗಪ್ರಕಾಶ ವಾಲಿಯವರು ಬಸವ ಧ್ವಜಾರೋಹಣವನ್ನು ಮಾಡಿದರು. ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಬಸವ ತತ್ತ್ವ ಸಮಾವೇಶವು ಜರುಗಿತಲ್ಲದೆ, ಅತಿಥಿಗಳಾಗಿ ಪೂಜ್ಯ ಶ್ರೀ ಬಸವಕುಮಾರ ಸ್ವಾಮಿಗಳು, ಗೋಕಾಕ, ಶರಣ. ವೀರಣ್ಣ ಕೊರ್ಲ್ಹಳ್ಳಿ, ಕೊಪ್ಪಳ, ಶರಣ. ಡಾ|| ಶಿವಗೌಡ ಪಾಟೀಲ್, ಸಂಕೇಶ್ವರ, ಶರಣೆ. ಮಾಲೂತಾಯಿ ಚಂದ್ರಕಾಂತ ಸ್ವಾಮಿ ಲಿಂಗಾಯತ, ಇಚಲಕರಂಜಿ, ಶರಣ. ಕೃಷ್ಣಪ್ಪ ಭರಮಪ್ಪ ಮುಸಳೆ, ಗಡಹಿಂಗ್ಲಾಜ್, ಶರಣೆ ಮಂಗಳಾ ನಂದಿ, ಬೆಳಗಾಂವ ಭಾಗವಹಿಸಿದ್ದರು. ವಿಶೇಷ ಆಹ್ವಾನಿತರಾಗಿ ಶರಣ. ಬಿ.ಜಿ.ಹೊಸಗೌಡರು, ಹುಬ್ಬಳ್ಳಿ, ಶರಣ ಶಿವಣ್ಣ ಶಿರೂರು, ಧಾರವಾಡ, ಶರಣ. ಸೂರ್ಯಕಾಂತ ಶೀಲವಂತರು, ಹುಬ್ಬಳ್ಳಿ, ಶರಣ. ಕಲ್ಯಾಣಪ್ಪ ಪರಮಾದಿ, ಹುಬ್ಬಳ್ಳಿ, ಶರಣ. ಲಿಂಗರಾಜ ಇಂಗಳಳ್ಳಿ, ಹುಬ್ಬಳ್ಳಿ, ಶರಣ. ಎಸ್.ಬಿ. ಜೋಡಳ್ಳಿ, ಹುಕ್ಕೇರಿ, ಶರಣ. ಅಶೋಕ ಅಳ್ನಾವರ, ಅವರಾದಿ, ಶರಣ ಕಲ್ಲಪ್ಪ ಕೂಗಟಿ, ಕಿತ್ತೂರು, ಶರಣ ಶಿವಶಂಕರ ವರ್ಜಿ, ಗೋಕಾಕ್, ಭಾಗವಹಿಸಿದ್ದರು.

ಬಸವ ತತ್ತ್ವ ಸಮಾವೇಶದಲ್ಲಿ ಅನೇಕ ರಾಷ್ಟ್ರೀಯ ಬಸವ ದಳಗಳ ಸದಸ್ಯರು ಭಾಗವಹಿಸಿದ್ದರು. ಬೆಳಗಾಂವ ಜಿಲ್ಲೆಯ ಬೆಳಗಾಂವ, ಚಿವುಟಗುಂಡಿ, ಹೊಸೂರು, ಸಂಕೇಶ್ವರ, ನಿಪ್ಪಾಣಿ, ಖಿವಟಕೊಪ್ಪ, ಶೇಗುಣಸಿ, ಯಲ್ಲಾರಟ್ಟಿ, ಕಿತ್ತೂರು, ಅವರಾದಿ. ಬಚ್ಚನಕೇರಿ, ಗೋಕಾಕ್, ಬೀರನಗಡ್ಡಿ, ಉಳ್ಳಾಗಡ್ಡಿ ಖಾನಾಪುರ, ದರೂರು, ಸಂಕರಟ್ಟಿ, ತಾಂವಶಿ, ನೇರಲಿ, ಹಣಜ್ಯಾನಟ್ಟಿ, ಸದಲಗಾ, ಜುಗುಳ, ತೇಲಸಂಗ, ಬೆಟಗೇರಿ, ಎತ್ತಿನಕೇರಿ, ಮರಡಿ ಶಿವಾಪುರ, ಮುರಗೋಡು, ಬೆಳವಿ, ಸಿದ್ದಾಪುರ, ಹುಲಗಬಾಳು, ಘಟನಟ್ಟಿ, ಕಟಗೇರಿ, ಕೆ.ಕೆ.ಕೊಪ್ಪ, ಮಲ್ಲಾಪುರ(ಕೆ.ಎ), ಹಿಡಕಲ್, ಬಸಾಪುರ, ತಲ್ಲೂರು, ಬೆಣಚಿನಮರಡಿ, ಯರಡಾಲ, ಘಟಪ್ರಭಾ, ಒಕ್ಕುಂದ, ಮಮದಾಪುರ, ಕೊಳವಿ, ಅಂಕಲಗಿ, ಕೌಜಲಗಿ, ನೇಸರಗಿ, ಮಧುವಾಲ, ನಂದಗಾಂವ, ತಿಮ್ಮಾಪುರ, ಗಿರಿಯಾಲ, ಮಲ್ಲಾಪುರ, ಕರ್ಲಟ್ಟಿ, ಐನಾಪುರ, ಹುಣಸ್ಯಾಳ, ಹಾಲಹಳ್ಳಿ, ಹಳ್ಯಾಳ, ಅಡಹಳಹಟ್ಟಿ, ಕುರುಣಿ, ಲಕ್ಕುಂಡಿ, ನದಿ ಇಂಗಳಗಾಂವ, ಬುಡರಕಟ್ಟಿ . ಮಹಾರಾಷ್ಟ್ರ ರಾಜ್ಯದ ಇಚಲಕರಂಜಿ, ಗಡಹಿಂಗ್ಲಾಜ್, ಮೈಸಾಳ್, ಹೇರವಾಡ, ಶೇಡಶ್ಯಾಳ, ರಾಜಾಪುರ, ಅರ್ಜುನವಾಡ, ಶಿರೋಳ, ಪುಣೆ, ಮೀರಜ್, ನೀಲಜಿ, ಮಾದ್ಯಾಳ,


ಕುರಂದವಾಡ, ಮಾಲಗಾಂವ, ತಾಸಗಾಂವ, ಅಂಬಪ್, ಅಕ್ಕಿವಾಟ ಕುಂಭೋಜ, ನಾಗಾ ನ
ದಾನೋಳಿ, ಖಿದ್ರಾಪುರ, ಆಬ್ದುಲ್ಲಾಟ್, ಶಿರದವಾಡ, ದತ್ತವಾಡ, ಕೋತಳಿ, ಕರ್ನಾಟಕದ ವಿವಿಧ
ಭಾಗಗಳಾದ ಧಾರವಾಡ-ಹುಬ್ಬಳ್ಳಿ, ಕಲಘಟಗಿ, ಗಾಮನಗಟ್ಟಿ, ಬೀದರ್, ದಾವಣಗೆರೆ, ಚಿತ್ರದುರ್ಗ,
ತುಮಕೂರು, ಹಿರಿಯೂರು, ಚಳ್ಳಕೆರೆ, ಬಿಜಾಪುರ, ಬಳ್ಳಾರಿ, ಗುಲಬರ್ಗಾ, ಕೊಪ್ಪಳ, ನಂದಿಕಟ್ಟಿ,
ಗದಗ, ಬೆಟಗೇರಿ, ಮುಂತಾದ ಊರಿನ ರಾಷ್ಟ್ರೀಯ ಬಸವ ದಳಗಳವರು ಭಾಗವಹಿಸಿದ್ದರು.

ಸುಮಾರು ಮೂರು ಸಾವಿರ ಜನರು ವಿವಿಧ ಊರುಗಳಿಂದ ಸಮಾವೇಶವಾಗಿದ್ದ ದೃಶ್ಯ ಅಪೂರ್ವವಾಗಿತ್ತು. ಸಮಾವೇಶದ ನಂತರ ಗಣಪ್ರಸಾದ, ಪ್ರಸಾದದ ಬಳಿಕ ಶರಣ ಬಂಧುಗಳು ಧರ್ಮಪಿತ ಬಸವಣ್ಣನವರ ಭಾವಚಿತ್ರ, ಇಷ್ಟಲಿಂಗ, ಷಟ್ಕೋನ ಪಟಗಳೊಡನೆ ಜಯಘೋಷ ಕೂಗುತ್ತ ಬೈಲಹೊಂಗಲ ನಗರದ ಮುಖ್ಯ ರಸ್ತೆಗಳಲ್ಲಿ ಪಥಸಂಚಲನ ಮಾಡಿದರು. ವೀರರಾಣಿ ಕಿತ್ತೂರು ಚೆನ್ನಮ್ಮನ ಪುತ್ಥಳಿಗೆ ಪೂಜ್ಯ ಶ್ರೀ ಮಾತಾಜಿಯವರು ಪೂಜ್ಯ ಮಾತೆ ಗಂಗಾದೇವಿಯವರು, ಪೂಜ್ಯ ಬಸವಕುಮಾರ ಸ್ವಾಮಿಗಳು, ಶರಣೆ ಮಾಲೂತಾಯಿ ಮಾಲಾರ್ಪಣೆ ಮಾಡಿದರು.


ಸಂಜೆ ಸಮಾರೋಪ ಸಮಾರಂಭ, ಪ್ರವಚನ ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ ರಾಷ್ಟ್ರೀಯ ಬಸವ ದಳ ಗೌರವಾಧ್ಯಕ್ಷ ಶ್ರೀ ಅಣ್ಣಪ್ಪ ವಾಲಿಯವರನ್ನು, ಪ್ರವಚನಕ್ಕೆ ಜಾಗ ನೀಡಿದ ಶ್ರೀ ದಯಾನಂದ ಮಾಳಿ, ಶ್ರೀ ದಯಾನಂದ ಜೋಗಾರ್ ಅವರನ್ನು ಸತ್ಕರಿಸಲಾಯಿತು. ಪ್ರವಚನಕ್ಕೆ ಸಕ್ರಿಯವಾಗಿ ಶ್ರಮಿಸಿದ ವಿಜಯಲಕ್ಷ್ಮಿ ತೋಟಗಿ, ಈರಣ್ಣ ಹೊಸಮನಿ, ಬಸವರಾಜ ಮಡಿವಾಳರ, ಶ್ರೀಶೈಲ ಆಲದ ಕಟ್ಟಿ, ಹರಳಯ್ಯ ಸಮಾಜ ಮಂದಿರದ ಅಧ್ಯಕ್ಷ ಹರಿಶ್ಚಂದ್ರ ಮುರುಗೋಡ ಅವರನ್ನು ಶಾಲು ಹೊದ್ದಿಸಿ, ಮಾಲಾರ್ಪಣೆ ಮಾಡಿ ಸತ್ಕರಿಸಲಾಯಿತು. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರನ್ನು ಶರಣ ಬಂಧುಗಳು ಗೌರವಪೂರ್ವಕವಾಗಿ ಸತ್ಕರಿಸಿ, ಅಭಿನಂದಿಸಿದರು. ಧಾರವಾಡದ ಶರಣ ಕುಮಾರಿಯರಾದ ಪ್ರತಿಭಾ ಗರಗದ, ಮಮತಾ ಮುಮ್ಮಿಗಟ್ಟಿ ಮಾಡಿದ ನೃತ್ಯಾಭಿನಯ ಶರಣರಿಗೆ ಮುದ ನೀಡಿತು.

ಮಳೆಯ ಪವಾಡ

ಅಲ್ಲಿಯವರೆಗೆ ಒಟ್ಟು ಮಳೆಯೇ ಆಗಿರದೆ ಸುಡುಬಿಸಿಲು ಎಲ್ಲರನ್ನು ದಹಿಸುತ್ತಿತ್ತು. ಅಂದಿನ ಸಾಮೂಹಿಕ ಪ್ರಾರ್ಥನೆಯಲ್ಲಿ ಪೂಜ್ಯ ಮಾತಾಜಿಯವರು ಎರಡು ಸಂಕಲ್ಪ ಮಾಡಿದರು. 1. ಅಮೇರಿಕದಲ್ಲಿ ಭಯೋತ್ಪಾದಕರ ವಿಮಾನದಾಳಿಯಲ್ಲಿ ಸತ್ತವರ ಆತ್ಮಕ್ಕೆ ಶಾಂತಿ ಕೋರಿ. 2. ಬರಗಾಲದಿಂದ ತತ್ತರಿಸಿರುವ ಕರ್ನಾಟಕ ಈ ಸಂಕಷ್ಟದಿಂದ ಪಾರಾಗುವಂತೆ ದೃಢ ಸಂಕಲ್ಪ ಮಾಡಿ ಪ್ರಾರ್ಥಿಸೋಣ ಎಂದು ಪೂಜ್ಯ ಮಾತಾಜಿ ಹೇಳಿ, ಲಿಂಗದೇವನ ನಾಮಸ್ಮರಣೆ ಮಾಡತೊಡಗಿದರು. ಪ್ರಾರ್ಥನೆ ಮುಗಿದ ಮೇಲೆ ಹನಿಗಳು ಉದುರ ತೊಡಗಿದವು. ಶರಣರು ನಡೆವ ಹಾದಿಯನ್ನು ತಂಪಾಗಿಸಲು ನಡೆಮಡಿ ಹಾಸಿದಂತೆ ಮಳೆ ಉದುರಿತು. ಪಥ ಸಂಚಲನಕ್ಕೆ ತೊಂದರೆಯಾಗದಂತೆ ನಿಂತಿತು. ಎಲ್ಲ ಶರಣರು ಪಥ ಸಂಚಲನ ಮುಗಿಸಿ ಪೆಂಡಾಲನ್ನು ಪ್ರವೇಶಿಸಿ ಕುಳಿತುಕೊಳ್ಳುತ್ತಲೇ ಧೋ ಧೋ ಎಂದು ಮಳೆ ಸುರಿಯ ತೊಡಗಿತು. ಜನರಿಗೆ ಹರ್ಷವು ಮೇರೆ ಮೀರಿತ್ತು. ಅಂಥ ಧಾರಾಕಾರ ಮಳೆಯಲ್ಲೂ ವಿದ್ಯುತ್ ನಿಲ್ಲದುದು ಒಂದು ಪವಾಡ. ಸೇರಿದ ಜನ ಸಮೂಹವು ಅಪಾರವಾಗಿತ್ತು. ರತ್ನ ಸಿಕ್ಕಿತಮ್ಮ ಎಂಬ ಹಾಡಿಗೆ ಮಮತಾ -ಪ್ರತಿಭಾ ನೃತ್ಯ ಮಾಡುವಾಗ ಗುಡುಗುತ್ತ ಮಳೆಯಾಗುತ್ತಿದ್ದುದು ಖುಷಿಯಿಂದ ಸೃಷ್ಟಿಕರ್ತ ಲಿಂಗದೇವನೇ ತಾಳ ಹಾಕುತ್ತಿರುವನೇನೊ ಎನಿಸುವಂತಿತ್ತು. ಪ್ರವಚನವು ಲಿಂಗದೇವನ, ಧರ್ಮಗುರುವಿನ ಮಹಿಮೆ ಮೆರೆಸುತ್ತ ಮಂಗಳದೊಡನೆ ಮುಕ್ತಾಯವಾಯಿತು. ●



ಬಸವ ತತ್ತ್ವ ಸಮಾವೇಶದಲ್ಲಿ ಧ್ವಜಾರೋಹಣ ಶರಣ. ಲಿಂಗಪ್ರಕಾಶ ವಾಲಿ ಇವರಿಂದ




ಶ್ರೀ ಬಸವೇಶ್ವರ ಆಯಿಲ್ ಮಿಲ್ ಮಾಲಿಕರಾದ ಅಣ್ಣಪ್ಪ ವಾಲಿಯವರ ಪರಿವಾರದಿಂದ
ಪೂಜ್ಯ ಮಾತಾಜಿಯವರ ಪಾದಪೂಜೆ



ಪೂಜ್ಯ ಮಾತಾಜಿಯವರಿಗೆ ಭವ್ಯ ಸ್ವಾಗತ




ಬಸವ ತತ್ತ್ವ ಸಮಾವೇಶಕ್ಕೆ ಆಗಮಿಸಿದ ಪೂಜ್ಯ ಮಾತಾಜಿಯವರನ್ನು
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಸ್ವಾಗತಿಸುತ್ತಿದ್ದಾರೆ



ಸದ್ಭಕ್ತರಿಂದ ಉಭಯ ಮಹಿಳಾ ಜಗದ್ಗುರುಗಳಿಗೆ ಮಾಲಾರ್ಪಣೆ



ಬಸವ ತತ್ತ್ವ ಸಮಾವೇಶದ ಉದ್ಘಾಟನೆ ಪೂಜ್ಯ ಮಾತಾಜಿಯವರಿಂದ.
ಗೋಕಾಕದ ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು, ಪೂಜ್ಯ ಶ್ರೀ ಜಗದ್ಗುರು ಮಾತೆ
ಗಂಗಾದೇವಿಯವರೂ ಚಿತ್ರದಲ್ಲಿದ್ದಾರೆ.



ವೀರರಾಣಿ ಕಿತ್ತೂರು ಚನ್ನಮ್ಮನ ಮೂರ್ತಿಗೆ ಮಾಲಾರ್ಪಣೆ ಮಾಡಿ
ಗೌರವ ಸಲ್ಲಿಸುತ್ತಿರುವ ಪೂಜ್ಯ ಮಾತಾಜಿಯವರು ಮತ್ತು ಮಾತೆ ಗಂಗಾದೇವಿಯವರು.



ಬೈಲಹೊಂಗಲದ ರಾಷ್ಟ್ರೀಯ ಬಸವ ದಳದ ಗೌರವಾಧ್ಯಕ್ಷರಾದ
ಶರಣ. ಅಣ್ಣಪ್ಪ ವಾಲಿಯವರನ್ನು ಶಾಲು ಹೊದ್ದಿಸಿ ಸತ್ಕರಿಸಲಾಯಿತು

ಆಗಸ್ಟ್-ಸೆಪ್ಟಂಬರ್ ತಿಂಗಳಲ್ಲಿ ಧನ ದಾಸೋಹ ಮಾಡಿದ ಶರಣ ಬಂಧುಗಳು.

ಬಸವ ಧರ್ಮಪೀಠದ ಕಟ್ಟಡನಿಧಿಗೆ

ಶರಣರುಗಳಾದ :

1. ಶಾಂತಮ್ಮ,ನಿಂ.ಪಾಶ್ಚಾಪುರ, ಬೈಲಹೊಂಗಲ (ಸಿಂಗಲ್ ರೂಂ)	51000-00
2. ಗಂಗಮ್ಮ ಮತ್ತು ಜಿ.ಚನ್ನಯ್ಯನವರು, ಚಿತ್ರದುರ್ಗ(ಕಲ್ಯಾಣಿಯ ನಿರ್ಮಾಣಕ್ಕಾಗಿ)	5000-00
3. ಬಸವರಾಜ ರಮೇಶ ಬಾಳೇಕುಂದರಗಿ,ಬೈಲಹೊಂಗಲ	5000-00
4. ಮಾಣಿಕ್ಯಮ್ಮ ಅಶೋಕ ಮೂಗಿ, ಬೈಲಹೊಂಗಲ	5000-00
5. ಪಂಚಪ್ಪ ಮಲ್ಲೇಶಪ್ಪ ಬೆಲ್ಲದ, ಬೈಲಹೊಂಗಲ (ಧರ್ಮಗ್ರಂಥ ನಿಧಿ)	5000-00
6. ದಯಾನಂದ ಮಾಳಿ, ಬೈಲಹೊಂಗಲ	2501-00
7. ಮಾಳೇಶ್ವರ ಶಿವಪುತ್ರಪ್ಪ ಇಂಚಲ, ಬೈಲಹೊಂಗಲ	2501-00

ಗುರು ಕಾಣಿಕೆ

ಶರಣ ಸೂರ್ಯಕಾಂತ ಶೀಲವಂತರು, ಹುಬ್ಬಳ್ಳಿ ಸುಮಾರು 15000 ರೂ ಬೆಲೆ ಬಾಳುವ ವೈಯಕ್ತಿಕ ಕೊಡುಗೆಗಳನ್ನು (ಪೂಜಾ ಸಾಮಗ್ರಿ) ಪೂಜ್ಯ ಮಾತೆ ಮಹಾದೇವಿಯವರು ಮತ್ತು ಪೂಜ್ಯ ಮಾತೆ ಗಂಗಾದೇವಿಯವರಿಗೆ ಸಲ್ಲಿಸಿದ್ದಾರೆ.

ವಿಶ್ವಕಲ್ಯಾಣ ಮಿಷನ್ ಬಸವ ಮಂಟಪದ ಮೇಲೆ ಕಟ್ಟಿಸಲಾಗುತ್ತಿರುವ ಶ್ರೀ ಸಿದ್ಧಲಿಂಗೇಶ್ವರ ದಾಸೋಹ ನಿಲಯಕ್ಕೆ

ಶರಣರುಗಳಾದ :

1. ರಾಷ್ಟ್ರೀಯ ಬಸವ ದಳ, ಬೆಂಗಳೂರು ಘಟಕ.	60000-00
2. ಹನುಮಂತೇಗೌಡರು, ನಾಗಶೆಟ್ಟಿಹಳ್ಳಿ	15000-00
3. ನಾಗರತ್ನ ದುಶ್ಯಂತ, ಬೆಟ್ಟಹಲಸೂರು	4000-00
4. ಪುಟ್ಟಮ್ಮ ಸೋಮಣ್ಣ, ಬೆಟ್ಟಹಲಸೂರು	3000-00
5. ಮಹಾದೇವ, ರಾಮಚಂದ್ರಪ್ಪ ಪೂಜೇರ, ಬೈಲಹೊಂಗಲ (ಪುಸ್ತಕ ಮುದ್ರಣ)	10000-00
6. ಸುಂದರಾಬಾಯಿ ಹರಿಶ್ಚಂದ್ರ ಮುರುಗೋಡ, ಬೈಲಹೊಂಗಲ (ಪುಸ್ತಕ ಮುದ್ರಣ)	5000-00
7 ವಿಶಾಲಾ-ಕಾಟನ್ ಟ್ರೇಡರ್ಸ್, ಬೈಲಹೊಂಗಲ (ಪುಸ್ತಕ ಮುದ್ರಣ)	5000-00
8. ಲಕ್ಷ್ಮಿ ಮೋಹನ್ ಮುರುಗೋಡು, ಬೈಲಹೊಂಗಲ (ಪುಸ್ತಕ ಮುದ್ರಣ)	5000-00
9. ಪ್ರಮೀಳಾದೇವಿ ಬಸವರಾಜ ಮಡಿವಾಳರ, ಬೈಲಹೊಂಗಲ (ಪುಸ್ತಕ ಮುದ್ರಣ)	5000-00
10. ಸುಶೀಲಾ ಲಿಂ॥ ನಾಗಪ್ಪ ಗಣಾಚಾರಿ, ಬೈಲಹೊಂಗಲ (ಪುಸ್ತಕ ಮುದ್ರಣ)	5000-00
11. ಬಸವ ಪ್ರಭು ನಿಂಗಪ್ಪ ಈಟಿ, ಬೈಲಹೊಂಗಲ (ಪುಸ್ತಕ ಮುದ್ರಣ)	5000-00
12. ಗಂಗಮ್ಮ, ಕಲ್ಮೇಶ್ವರ ಅಮರಶೆಟ್ಟಿ ಅಮ್ಮಿನಭಾವಿ (ಪುಸ್ತಕ ಮುದ್ರಣ)	5000-00

ಶರಣಮೇಳಕ್ಕೆ ದಾಸೋಹದ ಪುದುವಟ್ಟಿಗೆ : ಶರಣರುಗಳಾದ

1. ಶಿವಮ್ಮ ಕಂಬಳಿಸ್ವಾಮಿ ಮಠ, ಕೋಲಾರ	5000-00
2. ನಂಜಮ್ಮ ಲಿಂ॥ ಎಸ್.ವಿ.ಪುಟ್ಟೇಗೌಡ, ಆನೇಕಲ್	5000-00

3.	ಬಸವನಗೌಡ ನಿಂಗನಗೌಡ ಪಾಟೀಲ್, ಮುಗಳಿ	5000-00
4.	ಬಾಬು ಮಲ್ಲಪ್ಪ ಮಲ್ಕನ್ನವರ್, ಮೀರಜ್	5000-00
5.	ಜಯವಂತ ದತ್ತಾತ್ರೇಯ ಮೊತುಗಡೆ,ಮೀರಜ್	5000-00
6.	ಬಸಪ್ಪ ತಮ್ಮಣ್ಣ ಕುರನೆ, ಮೀರಜ್	5000-00
7.	ರಾಮನಗೌಡ ಭೀಮನಗೌಡ ಪಾಟೀಲ್, ಬೈಲಹೊಂಗಲ	5000-00
8.	ವಿರುಪಾಕ್ಷಲಿಂಗ ದೇಮಪ್ಪ ಮಿಂಡೊಳ್ಳಿ, ಬೈಲಹೊಂಗಲ	5000-00
9.	ಶಂಕರ್ ಮಲ್ಲೇಶಪ್ಪ ಬೆಣಚಮರಡಿ, ಬೈಲಹೊಂಗಲ	5000-00
10.	ರಾಜಶೇಖರ್ ಬಸವಣ್ಣೆಪ್ಪ ಇಂಗಳಗಿ, ಬೈಲಹೊಂಗಲ	5000-00
11.	ವೀರಪ್ಪ ಬಾಳಪ್ಪ ತೋರಣಗಟ್ಟಿ, ಬೈಲಹೊಂಗಲ	5000-00
12.	ಸರೋಜಮ್ಮ ಮಲ್ಲಯ್ಯ ಯಾದವಾಡ, ಬೈಲಹೊಂಗಲ	5000-00
13.	ಶಿವಬಸಪ್ಪ ಜೋಗೂರ, ಚಿವುಟಗುಂಡಿ, ಬೈಲಹೊಂಗಲ	5000-00
14.	ಡಾ|| ಎಫ್.ಬಿ.ಕಾಡಣ್ಣನವರ್, ನೇಸರಗಿ	5000-00
15.	ನಾಗನಗೌಡ ಸಿದ್ಧನಗೌಡ ಪಾಟೀಲ್, ಬೈಲಹೊಂಗಲ	5000-00
16.	ಬಸವಂತ ದುಂಡಪ್ಪ ಬೈಲವಾಡ. ಬೈಲಹೊಂಗಲ	5000-00

ಬಸವ ಧರ್ಮಪೀಠದ ನಿತ್ಯದಾಸೋಹ ನಿಧಿಗೆ 1111ರೂ ಕೊಟ್ಟ ದಾಸೋಹಿಗಳು

ಶರಣರುಗಳಾದ :

ನಾಗಶೆಟ್ಟಿಹಳ್ಳಿ

1. ಚಂದ್ರಮ್ಮ ಎನ್.ಎಸ್.ನಂಜೇಗೌಡ
2. ವೆಂಕಮ್ಮ ಪಿ.ರುದ್ರಪ್ಪ
3. ಸರೋಜಮ್ಮ ಈಶ್ವರಪ್ಪ
4. ಯಶೋದಮ್ಮ ಮುನ್ನೇಗೌಡರು
5. ಆನಂದಮ್ಮ ಲೇ|| ದೊಡ್ಡನರಸಪ್ಪ
6. ನಾರಾಯಣಮ್ಮ ಗೌಡರ ಮುನಿಯಪ್ಪ
7. ಶಾರದಾ ಜಿ.ಹೆಚ್.ಮೂರ್ತಿ
8. ಜಲಜಾಕ್ಷಮ್ಮ ಶಿವಣ್ಣ
9. ಅಂಜನಮ್ಮ.ಬಿ.ರುದ್ರಪ್ಪ, ತಿಂಡ್ಲು
10. ಲಕ್ಷ್ಮಿದೇವಮ್ಮ ಎರ್ರತಿಪ್ಪಯ್ಯ, ಕೊಡಿಗೇಹಳ್ಳಿ
11. ಉಷಾಶಂಕರ್ ಕುಮಾರ್, ಜಾಲಹಳ್ಳಿ
12. ಮಮತಾ ಮಹೇಶ್ ಕೊಡಿಗೇಹಳ್ಳಿ
13. ಬಿ.ಜಗದೀಶ್, ಜೆ.ಪಿ.ನಗರ, ಬೆಂಗಳೂರು
14. ಕೋಸಗಿ ರಾಮಲಿಂಗಪ್ಪ, ಆದವಾನಿ
15. ಕೆ. ಸೂಗೂರಪ್ಪ, ಆದವಾನಿ
16. ನೆಟ್ಟೇಕಲ್ ಬಸವರಾಜಪ್ಪ, ಆದವಾನಿ
17. ಕೋಸಗಿ ಮಲ್ಲಿಕಾರ್ಜುನ, ಆದವಾನಿ
18. ಎನ್.ಬಸವಕಿರಣ,ಯರಿಂಗಳಿ
19. ಕರೆಪ್ಪ.ನಿಂ.ಸೋರಗಾಂವ, ಬೆಂಗಳೂರು-40
20. ಆಶಾ ಕಾಂತರಾಜು, ಬೆಂಗಳೂರು-79
21. ಗಂಗಮ್ಮನವರು
    ಲಿಂ|| ಜಿ.ಎಸ್.ಗುರುಮಲ್ಲಪ್ಪ, ಬೆಂಗಳೂರು
22. ಟಿ.ಎನ್.ಶಿವಪ್ರಕಾಶ್, ತುಮಕೂರು
23. ಶ್ರೇಣಿಕ್ ಧನಪಾಲ್ ಅಕ್ಕಿವಾಟ, ಶಿರವಾಡ
24. ಸಾಂಬಾಜಿ ಬಾಳಯ್ಯಸ್ವಾಮಿ, ಮಣಕಾಪುರ
25. ಬಾಬೂರಾವ್ ವಿರುಪಾಕ್ಷಸ್ವಾಮಿ, ಮಣಕಾಪುರ

ಮೀರಜ್, ಮಹಾರಾಷ್ಟ್ರ

26. ಬಸಯ್ಯ ಶಿವಪ್ಪ ಬಿಂದಗಿ
27. ಚಂದ್ರಕಾಂತ ಅಣ್ಣಾ ಪಾಟೀಲ್
28. ಅಪ್ಪಾಸಾಹೇಬ್ ಅಣ್ಣಪ್ಪ ಕೇಶರ್‌ಖಾನೆ
29. ಸದಾಶಿವ ಅಲ್ಲಪ್ಪ ಗುಡ್ಡಿ
30. ಕಂದಪ್ಪ ನಾಗಪ್ಪ ಇಶಾಪುರೆ
31. ನಾರಾಯಣ ಅಣ್ಣಪ್ಪ ಹೋಳ್ಕರ್
32. ರಾಮಹರಿ ಬರಗಾಳೆ
33. ಮಹಾದೇವ ರಾಮ ಬರಗಾಳೆ

ಮೀರಜ್, ಮಹಾರಾಷ್ಟ್ರ

34. ಮಹಾದೇವ ರಾಮಚಂದ್ರ ಜಂಡೆ
35. ಬಾಬು ಶಿವಪ್ಪ ಹವಾಲ್ದಾರ್
36. ಪಾರ್ವತಿಬಾಯಿ ಗಂಗಾರಾಂ ಮಾನೆ
37. ಶಂಕರ್ ಬಾಬೂ ಕುರನೆ
38. ಸದಾನಂದ ಗುರುಪಾದ ತೊರವಿ
39. ಲಕ್ಷ್ಮಣ ಬಳವಂತ ಪಾಟೀಲ್
40. ಡಾ|| ಅಶೋಕ್ ಮಹಾದೇವ ಪಾಟೀಲ್
41. ಮಹಾನಂದ ರಾಮಚಂದ್ರ ಪಾಟೀಲ್
42. ಶಂಕರ್ ಮಲ್ಲಪ್ಪ ಮಿರ್ಜೆ
46. ಅಶೋಕ ಬಂಡೋಬ ಪುಣೇಕರ್
47. ಶಿವಾನಂದ ತಮ್ಮಣ್ಣ ತುರತುರೆ
43. ಧರಗೊಂಡ ಕಲಗೊಂಡ ಪಾಟೀಲ್
46. ಸುಭಾಷ್ ಪರಪ್ಪ ಸಾಯಗಾಂವ
47. ಸುಭಾಷ್ ಪರಪ್ಪ ಸಾಯಗಾಂವ
48. ಸಂಗಪ್ಪ ಪರಪ್ಪ ಸಾಯಗಾಂವ
49. ಗೌರವ್ವ ಭೀಮಣ್ಣ ಗಾಳಿ
50. ಬಸವರಾಜ್ ದುಂಡಪ್ಪ ಸಿಂದಗಿ
51. ಅಜಿತಕುಮಾರ್ ಶೇಷಲಿಂಗ ಕುಂಬಾರ್
52. ಶಂಕರ್‌ರಾವ್ ಬಾಬೂರಾವ್ ಚಿಕ್ಕೋಡೆ
53. ಡಾ|| ಎಸ್.ವಿ.ಸೊರಟೂರ್
54. ಡಾ|| ಎಸ್.ಎಂ.ಮಾಳಿ
55. ಚಂದ್ರಕಾಂತ್ ಅಪ್ಪಣ್ಣ ಹವಾಲದಾರ
56. ಸದಾಶಿವ ಲಕ್ಷ್ಮಣ ವಾಲಿ
57, ನಾರಾಯಣ ಭಂಡೂ ಮಾಳಿ
58. ಕೃಷ್ಣಾ ಸಖಾರಾಂ ಭಂಡಾರೆ
59. ಚಂದ್ರಾಬಾಯಿ ಗಣಪತಿ ಜುಗುಳ್‌ಕರ್
60. ಮಹಾದೇವ ಮಹತ್ರೆ
61. ರಜನಿ ಭರತ್ ಕುರಾಡ
62. ಶಿವಶರಣ ಪರಪ್ಪ ಸಾಯಗಾಂವ್
63. ರಾಚಪ್ಪ ಈರಪ್ಪ ಗುಗರಿ
64. ಸಾಕಮ್ಮ, ರಾಜಾಜಿನಗರ, ಬೆಂಗಳೂರು
67. ಗಿರಿಜಾ.ಬಿ.ಎಂ.ಉಮೇಶ್,ಬೆಟ್ಟಹಲಸೂರು
66. ಸುಶೀಲಮ್ಮ ಮುನೇಗೌಡರು
67. ರುಕ್ಮಿಣಿ ಸೇತುರಾಂ. ಬೆಂಗಳೂರು
68. ಎಂ.ಸುಕನ್ಯಾ, ಬೆಟ್ಟಹಲಸೂರು
69. ಜಯಮ್ಮ ಬಿ.ಎಂ.ಕೃಷ್ಣಪ್ಪಗೌಡ, ''
70. ಗೌರಮ್ಮ ಬಿ.ಎಂ.ಶ್ರೀನಿವಾಸ್, ''
71. ರತ್ನಮ್ಮ ಬಿ.ಎಂ.ರಾಜಣ್ಣ, ''
72. ವಿಜಯಕುಮಾರ್, ಚಿಕ್ಕಜಾಲ, ''
73. ಹೇಮಲತಾ ಸೋಮಶೇಖರ್, ಚಿಕ್ಕಜಾಲ
74. ಡಿ.ಶಿವಣ್ಣ, ರಾಜಾನುಕುಂಟೆ.

ಬೈಲಹೊಂಗಲ

75. ಪುಂಡಲೀಕ ಹನುಮಂತಪ್ಪ ರಾಯಭಾಗ
76. ಅರ್ಜುನಾ ಹನುಮಂತಪ್ಪ ರಾಯಭಾಗ
77. ಕಾಶವ್ವ ಅಡಿವೆಪ್ಪ ಹುಬ್ಬಳ್ಳಿ, ಬೈಲಹೊಂಗಲ
78. ಪಾರ್ವತಮ್ಮ ಮಲ್ಲಿಕಾರ್ಜುನ ಕೊಪ್ಪದ
79. ಉಳಿವೆಪ್ಪ ಶಿವಲಿಂಗಪ್ಪ ಚಪ್ಪಳ್ಳಿ
80. ರಾಮನಗೌಡ ಲಿಂಗನಗೌಡ ಪಾಟೀಲ
81. ಗಿರಿಜಾ ಅಶೋಕ್ ರಾಚೋಟಿಮಠ
82. ರುದ್ರಪ್ಪ ಗಂಗಪ್ಪ ತೋಟಗಿ
83. ಚನ್ನಪ್ಪ ದುಂಡಪ್ಪ ಅಂಗಡಿ
84. ಶಶಿಕುಮಾರ್ ಎಂ.ಮೂಗಿ
85. ಶ್ರೀಶೈಲ ಚನ್ನಪ್ಪ ವೆಂಕಟಾಪುರ
86. ಗಂಗಪ್ಪ ಸಿದ್ದಪ್ಪ ತುರಮರಿ
87. ಭೀಮರಾಯಪ್ಪ ಮಲ್ಲಪ್ಪ, ದಾಸೋಹ
88. ಅಣ್ಣೆಪ್ಪ ವಾಲಿ
89. ಸೋಮಲಿಂಗಪ್ಪ ಫಕೀರಪ್ಪ ಹರಕುಣಿ
90. ಸುವರ್ಣ ಕೆಂಪಯ್ಯ ಮಠಪತಿ
91. ಶಕುಂತಲಾ ರುದ್ರಪ್ಪ ಶರಣ್ಣವರ
92. ಶಿವಪ್ಪ ಶಿವಬಸಪ್ಪ ಯಕ್ಕುಂಡಿ
63. ಚಂಬಣ್ಣ ಗರ್ಜೂರ
94. ಈರಪ್ಪ ಗಂಗಪ್ಪ ಕೊಪ್ಪದ
95. ಶಂಕ್ರಪ್ಪ ವೀರಪ್ಪ ವಾಲಿ
96. ಬಿ.ಎಂ.ಕುಡುಸೋಮಣ್ಣನವರು
97. ಯು.ಬಿ.ಡಮ್ಮಣಗಿ
98. ರೇಣುಕಾ ಸದಾಶಿವ ಮೂಗಿ
99. ಪಾರ್ವತವ್ವ ಈಶ್ವರಪ್ಪ ತುರಮರಿ

100. ಬಸವ ಕಿರಣ ದುಂಡಪ್ಪ ಪಾಟೀಲ್
101. ಅನಸೂಯ ಚನ್ನಪ್ಪ ಬೇವಿನಕೊಪ್ಪ
102. ಶಿವಪ್ಪ ಚನ್ನಬಸಪ್ಪ ಮತ್ತೀಕೊಪ್ಪ
103. ನಾಗಪ್ಪ ಬಸಪ್ಪ ಯಡಾಲ
104. ಟಿ.ಚಂದ್ರಶೇಖರ್, ಮಾರಸಂದ್ರ
105. ಕೆ.ಪಿ.ಮಲ್ಲಿಕಾರ್ಜುನ, ಮಾರಸಂದ್ರ.

ಮುಂದುವರಿಯುವುದು....

ಈ ಎಲ್ಲ ಧನ ದಾಸೋಹಿಗಳಿಗೆ ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪತ್ತನ್ನು ಅನುಗ್ರಹಿಸಲೆಂದು ಹಾರೈಸುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ವಚನ ಕಿರಣ

ಬಸವ ನಾಮ ಸ್ಮರಣೆಯು
ಬಾಳನು ಬತ್ತಿಯಾಗಿ ಹೊಸೆದು
ಭಕ್ತಿಯನು ತೈಲವಾಗಿಸಿ
ಜ್ಞಾನದ ದೀಪವನು ಹೊತ್ತಿಸಿ
ಅರಿವಿನ ಬೆಳಕನು ಪಡೆದು
ಆಧ್ಯಾತ್ಮದ ಆನಂದವನು ಹೊಂದುವೊಡೆ
ಬಸವಪ್ರಿಯ ಲಿಂಗದೇವನೊಲಿವ ನೋಡಾ.
-ವೀರಣ್ಣ ಕೊರ್ಲ್ಹಳ್ಳಿ, ಕೊಪ್ಪಳ

ಸುಮ್ಮನೆ ಬರಲಿಲ್ಲ ಪೂಜ್ಯತ್ರಯರು
(ಅಪ್ಪಾಜಿ, ಮಾತಾಜಿ, ಗಂಗಾ ಮಾತಾಜಿ)
ಜಾತಿ ಭೂತ ಬಡಿದು ಬಿಮ್ಮನೆ ಮಠದಲ್ಲಿ ಕುಳಿತ
ಗುರುಗಳ ನಂಬಿದ ಅಜ್ಞಾನಿಗಳ
ಅಜ್ಞಾನವಳಿಸಿ, ನಿಜಧರ್ಮವರುಹಲು
ಪ್ರವಚನ ಯೋಗವನೆ ಜಾರಿಗೊಳಿಸಿಹರು
ಲೀಲಾವಿಶೇಷ ಲಿಂಗದೇವ.
- ಸೋದರಿ ಮಹಾದೇವಿ, ಧಾರವಾಡ

ಓಂ ಶ್ರೀ ಗುರು ಬಸವಲಿಂಗಾಯ ನಮಃ

86666

ಸಾಮೂಹಿಕ ಇಷ್ಟಲಿಂಗಾರ್ಚನೆ ಮತ್ತು ಬಸವ ತತ್ತ್ವ ಸಮಾವೇಶ

2001ರ ಅಕ್ಟೋಬರ್ 28, ಭಾನು(ದೇವ)ವಾರದಂದು

ಬೆಳಿಗ್ಗೆ 10-30 ಗಂಟೆ
ಇಷ್ಟಲಿಂಗಾರ್ಚನೆ

ಮಧ್ಯಾಹ್ನ 3 ಗಂಟೆ
ಬಸವ ತತ್ತ್ವ ಸಮಾವೇಶ

ಸ್ಥಳ : ಫೋರ್ಟ್ ಹೈಸ್ಕೂಲ್ ಮೈದಾನ, ಬೆಂಗಳೂರು
(ಬೆಂಗಳೂರು ಮೆಡಿಕಲ್ ಕಾಲೇಜ್ ಸಮೀಪ)



ವ್ಯವಸ್ಥಾಪಕರು
ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ
2035, 20ನೇ ಮೇನ್, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
ದೂರವಾಣಿ : 3325335/3322790



ವಿಶ್ವ ಶಾಂತಿಯನ್ನು ಬಯಸಿ ಭಾರತದ ಸರ್ವಾಂಗೀಣ ಏಳ್ಗೆಗೆ ಸಂಕಲ್ಪಿಸಿ ಸಾಮೂಹಿಕ ಇಷ್ಟಲಿಂಗಾರ್ಚನೆ ಮತ್ತು ಬಸವಲಿಂಗ ಮಂತ್ರ ಪಠಣ

ಸೃಷ್ಟಿಕರ್ತ ಲಿಂಗದೇವನನ್ನು ವಿಶ್ವದಾಕಾರದಲ್ಲಿ ಚುಳುಕಾಗಿಸಿ ಇಷ್ಟಲಿಂಗವೆಂದು ಕರೆದು ಎಲ್ಲ ಮಾನವರೂ ಪೂಜೆ ಮಾಡಿ ಜನ್ಮ ಸಾರ್ಥಕ ಮಾಡಿಕೊಳ್ಳುವ ಭಾಗ್ಯವನ್ನು ವಿಶ್ವಗುರು ಬಸವಣ್ಣನವರು ಕರುಣಿಸಿದ್ದಾರೆ. ವಿಶ್ವಶಾಂತಿಯನ್ನು ಬಯಸಿ, ಭಾರತದ ಸರ್ವಾಂಗೀಣ ಏಳಿಗೆಗಾಗಿ ಸಂಕಲ್ಪಿಸಿ ಸಾಮೂಹಿಕ ಇಷ್ಟಲಿಂಗಾರ್ಚನೆಯನ್ನು ಮತ್ತು ಬಸವ ಲಿಂಗ ಮಂತ್ರ ಪಠಣವನ್ನು ಬೆಂಗಳೂರು ನಗರದ ಫೋರ್ಟ್ ಹೈಸ್ಕೂಲ್ ಮೈದಾನದಲ್ಲಿ ಭಾನು(ದೇವ)ವಾರ ದಿ.28-10-2001ರಂದು ಬೆಳಿಗ್ಗೆ 10-30ಕ್ಕೆ ಏರ್ಪಡಿಸಲಾಗಿದೆ. ಪೂಜಾ ಸಾಮಗ್ರಿಗಳೊಡನೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸಿ ಪೂಜೆಯಲ್ಲಿ ಭಾಗವಹಿಸಬೇಕೆಂದು ಕೋರುತ್ತೇವೆ.

ಬಸವ ತತ್ತ್ವ ಸಮಾವೇಶ

ಅಕ್ಟೋಬರ್ 14ರಿಂದ 28ರವರೆಗೆ ಬಸವ ತತ್ತ್ವ ತರಬೇತಿ ಕಮ್ಮಟವು ಕುಂಬಳಗೋಡಿನ ಸಮೀಪದಲ್ಲಿ ಬೆಂಗಳೂರು-ಮೈಸೂರು ಹೆದ್ದಾರಿ(21ಕಿ.ಮಿ.)ಯಲ್ಲಿರುವ ಬಸವ ಗಂಗೋತ್ರಿಯಲ್ಲಿ ನಡೆಯುತ್ತಿದ್ದು, ಮುಕ್ತಾಯವು ದಿ.28-10-2001ರಂದು ಜರುಗಲಿದೆ. ತನ್ನಿಮಿತ್ತವಾಗಿ ಶಿಬಿರಾರ್ಥಿಗಳಿಗೆ ಮಾತ್ರವಲ್ಲದೆ ಬೆಂಗಳೂರು ಮತ್ತು ಸುತ್ತಮುತ್ತಲಿನ ಸದ್ಭಕ್ತರಿಗೂ ಅನುಕೂಲವಾಗಲೆಂದು ದಿ. 28-10-2001ರ ಕಾರ್ಯಕ್ರಮ- ವನ್ನು ಸಿಟಿ ಮಾರುಕಟ್ಟೆಯ ಬಳಿ ಇರುವ ಫೋರ್ಟ್ (ಕೋಟೆ) ಹೈಸ್ಕೂಲ್ ಮೈದಾನದಲ್ಲಿ ಏರ್ಪಡಿಸಲಾಗಿದೆ. ದಿ. 28-10-2001ರಂದು ಬೆಳಿಗ್ಗೆ 10-30ರಿಂದ 2ರವರೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ, 2ರಿಂದ ಗಣಪ್ರಸಾದ (ಊಟ), ಮಧ್ಯಾಹ್ನ 3 ಗಂಟೆಯಿಂದ 6ರವರೆಗೆ ಬಸವ ತತ್ತ್ವ ಸಮಾವೇಶ ಮತ್ತು ಬಸವ ತತ್ತ್ವ ತರಬೇತಿ ಕಮ್ಮಟದ ಸಮಾರೋಪ ಸಮಾರಂಭ. ಸಮಾರೋಪದ ನಂತರ ಶಿಬಿರಾರ್ಥಿಗಳಿಗೆ ತಮ್ಮ ತಮ್ಮ ಊರುಗಳಿಗೆ ತೆರಳಲು ಅವಕಾಶವುಂಟು.

ಹೆಚ್ಚಿನ ಸಂಖ್ಯೆಯಲ್ಲಿ ಸದ್ಭಕ್ತರು ಶಿಬಿರ ಮತ್ತು ಸಾಮೂಹಿಕ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಕೋರುತ್ತೇವೆ.

★ ಶರಣರ ಬರವೆಮಗೆ ಪ್ರಾಣಜೀವಾಳ ★



ಬೀದರ ನಗರದಲ್ಲಿ ದಿ. 9-9-2001ರಂದು ವಿಶ್ವಧರ್ಮ ಪ್ರವಚನ ಮುಕ್ತಾಯ ಸಮಾರಂಭ. ಎಡದಿಂದ ಬಲಕ್ಕೆ ಸಂಸತ್ ಸದಸ್ಯರಾದ ರಾಮಚಂದ್ರ, ವೀರಪ್ಪ, ಶಿವರಾಜ ಪಾಟೀಲ, ಶಾಸಕ ಗುಂಡಪ್ಪ ಬಿರಾದಾರ, ಪೂಜ್ಯ ಚನ್ನಬಸವರಾಜ ಸ್ವಾಮೀಜಿ, ಶ್ರೀ ಚನ್ನಯ್ಯ ಸ್ವಾಮಿಗಳು, ಕಾರ್ಯಾಧ್ಯಕ್ಷೆ ಶರಣೆ. ಚಂದ್ರಮ್ಮ ಪಾಟೀಲ್

ಕಲ್ಯಾಣ ಕಿರಣ CPMG/KA/BGW-50 ಅಕ್ಟೋಬರ್ - 2001
R.NO. 19980/70 WPP (W) - 17



ಪೂಜ್ಯ ಶ್ರೀ ಸದ್ಗುರು ಅಲ್ಲಮಪ್ರಭು ಸ್ವಾಮಿಗಳು